ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 1 ಸೋಮವಾರ 2023

ಸಂಪುಟ: 44 | ಸಂಚಿಕೆ: 16 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ರಾಜಮಾರ್ಗದಲ್ಲಿ ಮೊಳಗಿದ ಮೋದಿ ಮಂತ್ರ

- ರೋಡ್ ಶೋ ಮೂಲಕ ಹವಾ ಸೃಷ್ಟಿಸಿದ ಪ್ರಧಾನಿ
- ಲಕ್ಷಾಂತರ ಜನರಿಂದ ಜಯಘೋಷ, ಪುಷ್ಪವೃಷ್ಟಿ
- ನಾಡಹಬ್ಬದ ಚಿತ್ರಣ ಕಣ್ಣಿಗೆ ಕಟ್ಟಿದ ಜನ ಸಂಭ್ರಮ



ಪ್ರಧಾನಿ ಮೋದಿ ಮೈಸೂರಲ್ಲಿ ರೋಡ್ ಶೋ ಮೂಲಕ ಬಿಜೆಪಿ ಅಭ್ಯರ್ಥಿಗಳ ಪರ ಮತಯಾಚಿಸಿದರು. ಬಿಜೆಪಿ ಹಿರಿಯ ಮುಖಂಡ ಕೆ.ಎಸ್.ಈಶ್ವರಪ್ಪ, ಸಂಸದ ಪ್ರತಾಪ್‌ಸಿಂಹ, ಶಾಸಕ ರಾಮದಾಸ್ ಸಾಥ್ ನೀಡಿದರು.

ಮೈಸೂರು, ಏ.30(ಎಸ್‌ಬಿಡಿ)– ಪ್ರಧಾನಿ ನರೇಂದ್ರ ಮೋದಿ ಅವರು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಭಾನುವಾರ ಸಂಜೆ ಬೃಹತ್ ರೋಡ್ ಶೋ ನಡೆಸುವ ಮೂಲಕ ಬಿಜೆಪಿ ಅಭ್ಯರ್ಥಿಗಳ ಪರ ಮತಬೇಟೆ ನಡೆಸಿದರು.

ಹಾಸನ ಜಿಲ್ಲೆ ಬೇಲೂರಿನಿಂದ ವಿಶೇಷ ಹೆಲಿಕಾಪ್ಟರ್ ಮೂಲಕ ಮೈಸೂರಿನ ಓವಲ್ ಮೈದಾನದ ಹೆಲಿಪ್ಯಾಡ್‌ಗೆ ಸಂಜೆ ಸುಮಾರು 6 ಗಂಟೆಗೆ ಬಂದಿಳಿದ ಮೋದಿ ಅವರು, ಅಲ್ಲಿಂದ ಮುಡಾ ವೃತ್ತ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ ಮೂಲಕ ಗನ್‌ಹೌಸ್ ವೃತ್ತ ತಲುಪಿದರು. ಈ ವೇಳೆ ಸುತ್ತಲೂ ಕಿಕ್ಕಿರಿದ್ದ ಜನರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಮಂಗಳವಾದ್ಯ, ಜಯಘೋಷದೊಂದಿಗೆ ಹೂಮಳೆಗರೆದು ಅದ್ದೂರಿ ಸ್ವಾಗತ ಕೋರಿದರು. ಕಾರಿನಿಂದಿಳಿದು ತೆರೆದ ವಾಹನವೇರಿದ ನರೇಂದ್ರ ಮೋದಿ ಅವರಿಗೆ ಮೈಸೂರು ಪೇಟ ತೊಡಿಸಿ, ಮೈಸೂರು ಹೆಗ್ಗುರುತಾದ ವಸ್ತುಗಳನ್ನೊಳಗೊಂಡ ವಿಶೇಷ ಉಡುಗೊರೆ ನೀಡಿ ಆತ್ಮೀಯವಾಗಿ ಶಾಸಕ ರಾಮದಾಸ್ ಅಭಿನಂದಿಸಿದ ಬಳಿಕ ಸಂಜೆ 6.30ಕ್ಕೆ ರೋಡ್ ಶೋ ಆರಂಭವಾಯಿತು. ವೃತ್ತದ ಸುತ್ತ ನೆರೆದಿದ್ದ ಜನರತ್ತ ಮೋದಿ ಅವರು ಕೈಬೀಸುತ್ತಿದ್ದಂತೆ ತಾಸುಗಟ್ಟಲೆ ಕಾದು ನಿಂತಿದ್ದ ಜನರ ಜೋಶ್ ಹೆಚ್ಚಾಯಿತು. ಜಯಘೋಷದೊಂದಿಗೆ ಪುಷ್ಪ ಮಳೆಗರೆದು ಸಂತಸ ವ್ಯಕ್ತಪಡಿಸಿದರು.

ಅಲ್ಲಿಂದ ಸಂಸ್ಕೃತ ಪಾಠಶಾಲೆ ವೃತ್ತ, ನಗರಪಾಲಿಕೆ ಕಚೇರಿ, ನಗರ ಬಸ್ ನಿಲ್ದಾಣ, ಕೆ.ಆರ್.ವೃತ್ತ, ಆಯುರ್ವೇದ ಕಾಲೇಜು ವೃತ್ತ, ಆರ್‌ಎಂಸಿ ಜಂಕ್ಷನ್, ಬಂಬೂಬಜಾರ್, ಹೈವೇ ವೃತ್ತದ ಮೂಲಕ ಸಾಗಿದ ಮೋದಿ ಅವರ ರೋಡ್ ಶೋ, ನೆಲ್ಸನ್ ಮಂಡೇಲಾ ರಸ್ತೆ ಹೈವೇ ಸರ್ಕಲ್ ಹಾಗೂ ಕೆಎಸ್‌ಆರ್‌ಟಿಸಿ ಡಿಪೋ ನಡುವೆ ರಾತ್ರಿ 7.42ಕ್ಕೆ ಮುಕ್ತಾಯವಾಯಿತು. ▶ 9ನೇ ಪುಟಕ್ಕೆ

ಹೂವಲ್ಲಿ ತೂರಿ ಬಂತು ಮೊಬೈಲ್...!

ಪ್ರಧಾನಿ ಮೋದಿ ರೋಡ್ ಶೋ ವೇಳೆ ಮೊಬೈಲ್ ಎಸೆದ ಘಟನೆ ನಡೆಯಿತು. ಚಿಕ್ಕಗಡಿಯಾರದ ಬಳಿ ಮೋದಿ ರೋಡ್ ಶೋ ಪ್ರಚಾರ ವಾಹನ ಆಗಮಿಸುತ್ತಿದ್ದಂತೆ ಪುಷ್ಪವೃಷ್ಟಿಗರೆಯುವ ಭರದಲ್ಲಿ ಮೊಬೈಲ್ ಎಸೆಯಲಾಗಿದೆ. ಜನರ ಗುಂಪಿನ ಕಡೆಯಿಂದ ಎಸೆದ ಮೊಬೈಲ್ ಪ್ರಚಾರ ವಾಹನದ ಮುಂಭಾಗಕ್ಕೆ ಬಡಿದು ನೆಲಕ್ಕೆ ಬಿದ್ದಿದೆ. ಪ್ರಚಾರ ವಾಹನದ ಮೇಲಿದ್ದ ಭದ್ರತಾ ಸಿಬ್ಬಂದಿ ಗಮನಿಸಿದರಾದರೂ ಸಮಸ್ಯೆ ಉಂಟಾಗದ ಹಿನ್ನೆಲೆಯಲ್ಲಿ ಸುಮ್ಮನಾದರು. ಮೊಬೈಲ್ ಎಸೆದವರ್‍ಯಾರು ಎಂಬುದರ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಅಲ್ಲದೆ ಮೊಬೈಲ್ ಎಸೆದ ಘಟನೆಯೂ ನಡೆದಿಲ್ಲ ಎಂದು ಮೈಸೂರು ನಗರ ಪೊಲೀಸರು ತಿಳಿಸಿದ್ದಾರೆ. ಆದರೆ ಮೊಬೈಲ್ ಎಸೆದ ದೃಶ್ಯ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಹೀಗೆಯೇ ಇತ್ತೀಚೆಗೆ ಕೇರಳದಲ್ಲೂ ರ್‍ಯಾಲಿ ವೇಳೆ ಮೋದಿ ಅವರ ಮೇಲೆ



ಮೊಬೈಲ್ ಎಸೆಯಲಾಗಿತ್ತು. ಆದರೆ ಭದ್ರತಾ ಸಿಬ್ಬಂದಿ ಚಾಣಾಕ್ಷತನದಿಂದ ಕೈಯಲ್ಲಿ ತಡೆದು, ಕೆಳಬಿದ್ದ ಮೊಬೈಲನ್ನು ಕಾಲಿಂದ ಸರಿಸಿ ಏನೂ ನಡೆದೇ ಇಲ್ಲವೆಂಬಂತೆ ಪರಿಸ್ಥಿತಿ ನಿಭಾಯಿಸಿದ್ದರು.

ಶುಭಾಶಯಗಳು



ಕಾರ್ಮಿಕರ ದಿನಾಚರಣೆಯ ಅಂಗವಾಗಿ ನಾಡಿನ ಸಮಸ್ತ ಕಾರ್ಮಿಕರಿಗೆ ಶುಭಾಶಯಗಳು

ಬಿಡುವು

ಕಾರ್ಮಿಕರ ದಿನಾಚರಣೆ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 2.5.2023ರ ಮಂಗಳವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು.


ಒಳಪುಟಗಳಲ್ಲಿ

ವರುಣದಲ್ಲಿ ಸಿದ್ದರಾಮಯ್ಯ ಸೋಲಿಸುವ ಹೊಣೆ ನನ್ನದು

ಬಾಗಲಕೋಟೆ, ಏ.30–ಹುಬ್ಬಳ್ಳಿಯಲ್ಲಿ ಜಗದೀಶ್ ಶೆಟ್ಟರ್ ಸೋಲಿಸುವ ಹೊಣೆ ನನ್ನದು ಎಂದು ಈಗಾಗಲೇ ಶಪಥ ಮಾಡಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಈಗ ವರುಣದಲ್ಲಿ ಸಿದ್ದರಾಮಯ್ಯ ಅವರನ್ನು ಸೋಲಿಸುವ "ಸುಪಾರಿ" ತೆಗೆದುಕೊಂಡಂತಿದೆ. ಅವರು ಈಗ ಸಿದ್ದರಾಮಯ್ಯರ ಸೋಲಿಸುವ ಹೊಣೆ ನನ್ನದು ಎಂದು ಗುಡುಗಿದ್ದಾರೆ.

ಬಾದಾಮಿ ಕ್ಷೇತ್ರದ ಕೆರೂರು ಪಟ್ಟಣದಲ್ಲಿ ಬಿಜೆಪಿ ಅಭ್ಯರ್ಥಿ ಶಾಂತಗೌಡ ಪರ ಮತಯಾಚನೆ ಮಾಡಿದರು. ಇಲ್ಲಿ ಬಿಜೆಪಿ ಗೆಲ್ಲಿಸುವ ಜವಾಬ್ದಾರಿ ನಿಮ್ಮದು, ಸಿದ್ದರಾಮಯ್ಯ ಅವರನ್ನು ವರುಣದಲ್ಲಿ ಸೋಲಿಸುವ ಜವಾಬ್ದಾರಿ ನನ್ನದು ಎಂದು ಟಗರು ವಿರುದ್ಧ ರಾಜಾಹುಲಿ ಘರ್ಜಿಸಿದೆ.

ಇಲ್ಲಿ (ಬಾದಾಮಿ) ನಂಬಿಕೆದ್ರೋಹ ಮಾಡಿದ ಸಿದ್ದರಾಮಯ್ಯ ಸ್ಪರ್ಧೆ ಮಾಡಿದರೆ ಗೆಲ್ಲುವುದಿಲ್ಲ ಅಂತ ಗೊತ್ತಾಗಿ ಇಲ್ಲಿಂದ ಪರಾರಿಯಾಗಿದ್ದಾರೆ. ಇಂತವರಿಗೆ ತಕ್ಕಪಾಠ ಕಲಿಸಬೇಕೆಂದು ಎಂದು ವಾಗ್ದಾಳಿ ನಡೆಸಿದರು.



ರಾಹುಲ್ ಗಾಂಧಿ ಅವರು, ವಿಶ್ವ ನಾಯಕ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಮಾನಾ ಆಗುತ್ತಾರಾ, ಮೋದಿ ಎಲ್ಲಿ, ರಾಹುಲ್ ಗಾಂಧಿ ಎಲ್ಲಿ?.

–ಯಡಿಯೂರಪ್ಪ

ಬಾದಾಮಿ ಕ್ಷೇತ್ರದಲ್ಲಿ ವೀರಶೈವ ಲಿಂಗಾಯತ, ಕುರುಬ ಸಮಾಜ ಹಾಗೂ ವಾಲ್ಮೀಕಿ ಸಮುದಾಯ ಪ್ರಬಲವಾಗಿವೆ. ಹೀಗಾಗಿ ತಮ್ಮ ಭಾಷಣದುದ್ದಕ್ಕೂ ಈ ಮೂರು ಸಮುದಾಯಗಳ ಮತಗಳನ್ನು ಗುರಿಯಾಗಿಸಿಕೊಂಡು ಯಡಿಯೂರಪ್ಪ ಮತಬೇಟೆ ನಡೆಸಿದರು. ಕಾಂಗ್ರೆಸ್ ಪಕ್ಷ ಮಾಡಿರುವ ಅಪಪ್ರಚಾರವನ್ನು ವೀರಶೈವ ಲಿಂಗಾಯತರು ಮನಗಾಣಬೇಕು. ಏಕೆಂದರೆ ಲಿಂಗಾಯತ ನಾಯಕ ವೀರೇಂದ್ರ ಪಾಟೀಲ್ ಅವರಿಗೆ ಮೋಸ ಮಾಡಿದ್ದು ಕಾಂಗ್ರೆಸ್. ರಾಜೀವ್ ಗಾಂಧಿ ಅವರು ವಿಮಾನ ನಿಲ್ದಾಣದಲ್ಲಿ ನಿಂತು ವೀರೇಂದ್ರ ಪಾಟೀಲರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದರು. ಈ ರೀತಿಯಾಗಿ ವೀರಶೈವ ಲಿಂಗಾಯತರಿಗೆ ಕಾಂಗ್ರೆಸ್ ನಾಯಕರು ದ್ರೋಹ ಮಾಡಿದ್ದಾರೆ. ಇಂತಹ ಪಕ್ಷಕ್ಕೆ ವೀರಶೈವರ ಬಗ್ಗೆ ಮಾತಾಡುವ ನೈತಿಕತೆ ಇಲ್ಲ ಎಂದು ಬಿಎಸ್‌ವೈ ಗುಡುಗಿದರು.

ಯಡಿಯೂರಪ್ಪಗೆ ಬಿಜೆಪಿಯವರು ಮೋಸ ಮಾಡಿದ್ದಾರೆ, ಸಿಎಂ ಸ್ಥಾನದಿಂದ ಇಳಿಸಿದ್ದಾರೆ ಎಂದು ಕಾಂಗ್ರೆಸ್‌ನವರು ಅಪಪ್ರಚಾರ ಮಾಡುತ್ತಿದ್ದಾರೆ ಎಂದರು.

ಶೇ.5ರ ರಿಯಾಯಿತಿಗೆ ಉತ್ತಮ ಸ್ಪಂದನೆ

ತಿಂಗಳಲ್ಲಿ ಪಾಲಿಕೆಗೆ ಹರಿದು ಬಂತು 82.6 ಕೋಟಿ ತೆರಿಗೆ

ಮೈಸೂರು,ಏ.30(ಆರ್‌ಕೆ)–ಶೇ.5ರ ರಿಯಾಯಿತಿಗೆ ಮೈಸೂರಿನ ಆಸ್ತಿ ಮಾಲೀಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಏಪ್ರಿಲ್ ಒಂದೇ ತಿಂಗಳಲ್ಲಿ ಬರೋಬ್ಬರಿ 82.6 ಕೋಟಿ ರೂ. ಆಸ್ತಿ ತೆರಿಗೆ ಪಾವತಿಯಾಗಿದೆ.

2023ರ ಏಪ್ರಿಲ್ 1ರಿಂದ 30ರವರೆಗೆ ಆಸ್ತಿ ತೆರಿಗೆ ಪಾವತಿಸಲು ನಗರಪಾಲಿಕೆಯು ಶೇ.5ರ ರಿಯಾಯಿತಿ ನೀಡಿತ್ತು. ಅಲ್ಲದೇ ರಜಾ ದಿನಗಳಲ್ಲೂ ಪಾಲಿಕೆ ವಲಯ ಕಚೇರಿಗಳಲ್ಲಿ ನಗದು ಕೌಂಟರ್‌ಗಳನ್ನು ತೆರೆದು ಸಾರ್ವಜನಿಕರಿಗೆ ತೆರಿಗೆ ಪಾವತಿಸಲು ಅವಕಾಶ ನೀಡಿದ್ದರಿಂದ ಜನರು ಸ್ವಯಂ ಪ್ರೇರಿತವಾಗಿ ರಿಯಾಯಿತಿ ಬಳಸಿಕೊಂಡು ತೆರಿಗೆ ಪಾವತಿಸಿದ್ದಾರೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ ತಿಳಿಸಿದ್ದಾರೆ.



ಮಾರ್ಚ್ 31ರವರೆಗೆ 310.49 ಕೋಟಿ ರೂ. ತೆರಿಗೆ ಸಂದಾಯವಾಗಿತ್ತು

ರಿಯಾಯಿತಿ ಅವಧಿ ವಿಸ್ತರಿಸಲು ಅವಕಾಶವಿಲ್ಲ. ಆದರೆ ಮೇ 1 ರಿಂದ ರಿಯಾಯಿತಿ ರಹಿತ ಆಸ್ತಿ ತೆರಿಗೆ ಪಾವತಿಸಲು ಅವಕಾಶವಿದೆ. ಅಲ್ಲದೇ ಆನ್‌ಲೈನ್ ಮೂಲಕವೂ ತೆರಿಗೆ ಪಾವತಿಸಲು ವ್ಯವಸ್ಥೆ ಮಾಡಿರುವುದರಿಂದ ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆ ಪಾವತಿಸಲೇಬೇಕೆಂದು ತಿಳಿಸಿದ್ದಾರೆ. 2022–23ನೇ ಸಾಲಿನ ಮಾರ್ಚ್ 31ರವರೆಗೆ ಆಸ್ತಿ ತೆರಿಗೆ, ನೀರಿನ ಸಂಪರ್ಕ ಶುಲ್ಕ, ಉದ್ದಿಮೆ ಪರವಾನಗಿ ಶುಲ್ಕ ಸೇರಿದಂತೆ ಇನ್ನಿತರ ಬಾಬ್ತುಗಳಿಂದ ಒಟ್ಟು 310.49 ಕೋಟಿ ರೂ. ತೆರಿಗೆ ಸಂದಾಯವಾಗಿತ್ತು. ಏಪ್ರಿಲ್ 1ರಿಂದ 30ರವರೆಗೆ ಶೇ.5ರ ರಿಯಾಯಿತಿ ನೀಡಿದ್ದ ಕಾರಣ ಒಂದೇ ತಿಂಗಳಲ್ಲಿ 82.6 ಕೋಟಿ ರೂ. ಆಸ್ತಿ ತೆರಿಗೆ ಸಂದಾಯವಾಗಿದ್ದು, ಸಾರ್ವಜನಿಕರು ಸಹಕರಿಸಿದ್ದರಿಂದ ಪಾಲಿಕೆಗೆ ಅತೀ ಹೆಚ್ಚು ಆರ್ಥಿಕ ಸಂಪನ್ಮೂಲ ಕ್ರೋಢೀಕರಣವಾದಂತಾಗಿದೆ ಎಂದು ಲಕ್ಷ್ಮೀಕಾಂತ ರೆಡ್ಡಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

2022–23ನೇ ಸಾಲಿನಲ್ಲಿ ನಗರಪಾಲಿಕೆಗೆ 16,900 ಲಕ್ಷ ರೂ. ಆಸ್ತಿ ತೆರಿಗೆ, 1,440.05 ಲಕ್ಷ ರೂ. ನಗರ ಮತ್ತು ಪಟ್ಟಣ ಯೋಜನೆ ಶಾಖೆಯಿಂದ, ಮಾರು ಕಟ್ಟೆ ಮತ್ತು ವಾಣಿಜ್ಯ ಸಂಕೀರ್ಣ ಬಾಡಿಗೆಯಿಂದ ▶ 9ನೇ ಪುಟಕ್ಕೆ

ಕಾಂಗ್ರೆಸ್ 6ನೇ ಗ್ಯಾರಂಟಿ ಘೋಷಿಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ

ಅಂಗನವಾಡಿ ಕಾರ್ಯಕರ್ತರ ಗೌರವಧನ 15 ಸಾವಿರಕ್ಕೆ ಹೆಚ್ಚಳ

ಖಾನಾಪುರ: ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಅಂಗನವಾಡಿ ಕಾರ್ಯಕರ್ತೆಯರ ಗೌರವಧನವನ್ನು 15 ಸಾವಿರ ರೂಗೆ ಹೆಚ್ಚಳ ಮಾಡಲಾಗುತ್ತದೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ಹೇಳಿದ್ದಾರೆ.

ಬೆಳಗಾವಿಯ ಖಾನಾಪುರ ತಾಲೂಕು ಕ್ರೀಡಾಂಗಣದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ.ಅಂಜಲಿ ನಿಂಬಾಳ್ಕರ್ ಪರ ಪ್ರಚಾರದಲ್ಲಿ ಪಾಲ್ಗೊಂಡು ಮಾತನಾಡಿದ ಪ್ರಿಯಾಂಕ ಗಾಂಧಿ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರ ಮಾಸಿಕ ಗೌರವಧನವನ್ನು 15 ಸಾವಿರ ರೂಗೆ ಹಾಗೂ ಮಿನಿ ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರ ಗೌರವಧನವನ್ನು 10 ಸಾವಿರ ರೂಗೆ ಹೆಚ್ಚಿಸಲಾಗುವುದು ಎಂದರು.

ಅಂಗನವಾಡಿ ಕಾರ್ಯಕರ್ತೆಯರಿಗೆ ಪಿಂಚಣಿ ಸೌಕರ್ಯವಿಲ್ಲ. ಹಾಗಾಗಿ ಅವರು ಸೇವಾ ನಿವೃತ್ತಿ ಹೊಂದಿದರೆ ಅಥವಾ ನಿಧನರಾದರೆ, 3 ಲಕ್ಷ ರೂ ಹಾಗೂ ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ 2 ಲಕ್ಷ ರೂ ನೀಡಲಾಗುವುದು. ಕೋವಿಡ್ ಸಂಕಷ್ಟ ಸಮಯದಲ್ಲಿ ಜೀವದ ಹಂಗು ತೊರೆದು ಕೆಲಸ ಮಾಡಿದ ಆಶಾ ಕಾರ್ಯಕರ್ತೆಯರಿಗೆ ತಿಂಗಳಿಗೆ 8 ಸಾವಿರ ರೂ, ಬಿಸಿಯೂಟ ನೌಕರರಿಗೆ 5 ಸಾವಿರ ರೂ ಗೌರವಧನ ನೀಡಲಾಗುವುದು ಎಂದರು.



ಬೆಳಗಾವಿಯ ಖಾನಾಪುರ ತಾಲೂಕು ಕ್ರೀಡಾಂಗಣದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ.ಅಂಜಲಿ ನಿಂಬಾಳ್ಕರ್ ಪರ ಪ್ರಚಾರ ಸಭೆಯಲ್ಲಿ ಪ್ರಿಯಾಂಕ ಗಾಂಧಿ ಮಾತನಾಡಿದರು.

ತಮ್ಮ ಭಾಷಣದಲ್ಲಿ ನಿರುದ್ಯೋಗ ಸಮಸ್ಯೆ ಪ್ರಸ್ತಾಪಿಸಿದ ಪ್ರಿಯಾಂಕಾ, ಈ ಸಭೆಗೆ ಬಂದಿರುವ ಯುವಕರಿಗೆ ಸರ್ಕಾರಿ ನೌಕರಿ ಸಿಕ್ಕಿದೆಯೇ ಎಂದು ಪ್ರಶ್ನಿಸಿದರು. ಆಗ ಯುವಕರು ಕೆಲಸ ಸಿಕ್ಕಿಲ್ಲ. ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 2.5 ಲಕ್ಷ ಹುದ್ದೆಗಳ ಭರ್ತಿಗೆ ಸರ್ಕಾರ ಮನಸ್ಸು ಮಾಡುತ್ತಿಲ್ಲ. ಬಿ.ಇ, ಬಿ.ಟೆಕ್ ವ್ಯಾಸಂಗ ಮಾಡಿದವರಿಗೂ ಕೆಲಸವಿಲ್ಲ. ಪಿಎಸ್‌ಐ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ. ಪ್ರತಿ ಹುದ್ದೆ ಭರ್ತಿಗೆ ಸರ್ಕಾರ ಇಂತಿಷ್ಟು ಅಂತಾ ಲಂಚ ನಿಗದಿಪಡಿಸಿದೆ. ಭ್ರಷ್ಟಾಚಾರದಲ್ಲಿ ಮುಳುಗೆದ್ದ ಸರ್ಕಾರ, ಶಾಲೆ ಹಾಗೂ ಅಂಗನವಾಡಿ ಕೇಂದ್ರಗಳ ಮಕ್ಕಳಿಗೆ ವಿತರಿಸುವ ಮೊಟ್ಟೆಯನ್ನೂ ಬಿಟ್ಟಿಲ್ಲ ಎಂದು ಹರಿಹಾಯ್ದರು.

ಶಾಸಕರ ಪುತ್ರನೊಬ್ಬನ ಬಳಿ ಎಂಟು ಕೋಟಿ ರೂ ಸಿಕ್ಕರೂ, ಯಾವುದೇ ಕ್ರಮ ಜರುಗಿಸಲಿಲ್ಲ. ಭ್ರಷ್ಟಾಚಾರದ ಬಗ್ಗೆ ಸರ್ಕಾರಿ ಗುತ್ತಿಗೆದಾರರ ಸಂಘ ಪ್ರಧಾನಿಗೆ ಪತ್ರ ಬರೆದರೂ ಕ್ರಮವಾಗಲಿಲ್ಲ. ನೀವೂ ಇಂತಹ ಸರ್ಕಾರ ಮತ್ತೆ ಐದು ವರ್ಷ ಅಧಿಕಾರಕ್ಕೆ ಬರಬೇಕೆಂದು ಬಯಸುತ್ತೀರಾ ಅಥವಾ ಬದಲಾವಣೆ ಇಚ್ಛಿಸುತ್ತೀರಾ ಎಂದು ಪ್ರಿಯಾಂಕ ಗಾಂಧಿ ಅವರು ಪ್ರಶ್ನಿಸಿದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಕಾರ್ಯದರ್ಶಿ ವಿಷ್ಣು ನಾಗ್, ಶಾಸಕಿ ಡಾ.ಅಂಜಲಿ ನಿಂಬಾಳ್ಕರ್, ಗ್ರಾಮೀಣ ಜಿಲ್ಲಾ ಘಟಕದ ಅಧ್ಯಕ್ಷ ವಿನಯ ನಾವಲಗಟ್ಟಿ, ಮುಖಂಡರಾದ ಸಂಗಮೇಶ ವಾಲಿ, ಪಿಂಟೂ ಬೆಣ್ಣಿ, ಮಂಗೇಶ ಗುರವ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಸೋಮವಾರ 1 ಮೇ 2023



ಚಾಮರಾಜ ಕ್ಷೇತ್ರ ವ್ಯಾಪ್ತಿಯ ನಜರ್‌ಬಾದ್‌ನಲ್ಲಿ ಬಿಜೆಪಿ ಅಭ್ಯರ್ಥಿ ಎಲ್.ನಾಗೇಂದ್ರ ಮನೆಮನೆಗೆ ಭೇಟಿ ನೀಡಿ, ಕೇಂದ್ರ, ರಾಜ್ಯ ಸರ್ಕಾರದ ಸಾಧನೆಗಳು, ಕ್ಷೇತ್ರದಲ್ಲಿ ತಾವು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮತದಾರರಿಗೆ ಮನವರಿಕೆ ಮಾಡಿಕೊಟ್ಟು, ಮತಯಾಚನೆ ಮಾಡಿದರು. ಈ ವೇಳೆ ನಗರಪಾಲಿಕೆ ಸದಸ್ಯ ಎಂ.ಸತೀಶ್, ವಾರ್ಡ್ ಅಧ್ಯಕ್ಷ ಅರವಿಂದ, ಮುಖಂಡರಾದ ಗೈಡ್ ಬಾಬು, ಜೆಸಿಬಿ ರವಿ, ರಾಜು, ರಾಮು, ಪಂಕಜ್, ಯಶೋಧ, ಸಪ್ನಾ ಶೇಖರ್, ಪೃಥ್ವಿ ಸಿಂಗ್ ಇತರರು ಉಪಸ್ಥಿತರಿದ್ದರು.




ಮೈಸೂರು ನಗರಪಾಲಿಕೆ 44ನೇ ವಾರ್ಡ್‌ನ ಜನತಾನಗರ ವ್ಯಾಪ್ತಿಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಹಾಲಿ ಶಾಸಕ ಜಿ.ಟಿ.ದೇವೇಗೌಡರ ಪರ ಅವರ ಪತ್ನಿ ಶ್ರೀಮತಿ ಲಲಿತಾ, ಪುತ್ರಿ ಯಶೋಧಾ, ನಗರಪಾಲಿಕೆ ಸದಸ್ಯೆ ಸವಿತಾ ಸುರೇಶ್ ಇಲ್ಲಿನ ಗಣಪತಿ ದೇವಸ್ಥಾನ ದಲ್ಲಿ ಪೂಜೆ ಸಲ್ಲಿಸಿದ ನಂತರ ನೂರಾರು ಮುಖಂಡರು ಹಾಗೂ ಕಾರ್ಯಕರ್ತರ ನೇತೃತ್ವದಲ್ಲಿ ಪಾದಯಾತ್ರೆ ಮೂಲಕ ಮನೆ–ಮನೆಗೆ ಭೇಟಿ ನೀಡಿ ಪ್ರಚಾರ ನಡೆಸಿದರು. ಅವರನ್ನು ಆತ್ಮೀಯವಾಗಿ ಇದೇ ವೇಳೆ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಸುರೇಶ್, ಉಮಾಶಂಕರ್, ಕುಮಾರ್, ಪುನೀತ್, ಶಶಿಧರ್, ಅಂಗಡಿ ಕುಮಾರ್, ಜಯರಾಂ, ಮಂಜು, ಸೊಸೈಟಿ ಕುಮಾರ್, ಪ್ರಸಾದ್, ಲೋಕೇಶ್, ನಾಣಿ, ರಾಜೇಶ್ ಇನ್ನಿತರರು ಹಾಜರಿದ್ದರು.



ಮೈಸೂರಿನ ಗೋಕುಲಂ ಮತ್ತು ಬೃಂದಾವನ ಬಡಾವಣೆಯಲ್ಲಿ ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಚ್.ಕೆ.ರಮೇಶ್ ಪರವಾಗಿ ನಗರಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು, ಜೆಡಿಎಸ್ ಮುಖಂಡರಾದ ಬಾಬು, ಮಹದೇವ್, ಹನುಮೇಗೌಡ, ಸಾವಿತ್ರಮ್ಮ, ರಘು, ಕೃಷ್ಣಪ್ಪ, ಕೃಷ್ಣಾಚಾರ್ಯ, ಸತೀಶ್ ಪಾದಯಾತ್ರೆ ಮೂಲಕ ಮನೆ–ಮನೆಗೆ ತೆರಳಿ ಮತಯಾಚಿಸಿದರು.



ಭಾನುವಾರ ಬೆಳಗ್ಗೆ ವಾರ್ಡ್ ನಂ.24ರಲ್ಲಿ ಪಾದಯಾತ್ರೆ ಮೂಲಕ ಮುಸ್ಲಿಂ ಬಾಂಧವರ ಮನೆಗಳಿಗೆ ತೆರಳಿ, ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡರ ಪರವಾಗಿ ಮತಯಾಚಿಸಲಾಯಿತು. ಚಿತ್ರದಲ್ಲಿ ರವಿಕುಮಾರ್ ರಾಜಕೀಯ, ಬಾಲರಾಜ್, ಶೇಖರ್, ಇಮ್ರಾನ್, ಇಬ್ರಾಹಿಂ, ಮಂಜು, ಕಲೀಲ್, ಹೇಮಾ, ಮಧು, ಪ್ರಜ್ವಲ್, ರಾಜು ಇತರರನ್ನು ಕಾಣಬಹುದು.



ಕೆಆರ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ತಮ್ಮ ಬೆಂಬಲಿಗರೊಂದಿಗೆ ಪಾದಯಾತ್ರೆ ಮೂಲಕ ಮತಯಾಚಿಸಿದರು. ಈ ವೇಳೆ ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್, ಮಾಜಿ ಕಾರ್ಪೋರೇಟರ್ ಎಂ.ಸುನೀಲ್, ರೊ. ರಮೇಶ್‌ರಾವ್ ಮತ್ತಿತರರು ಉಪಸ್ಥಿತರಿದ್ದರು.

ಸಿದ್ದಗಂಗಾ ಶ್ರೀಗಳು ಅಜರಾಮರ

ಶಿವಕುಮಾರ ಸ್ವಾಮೀಜಿ ಸ್ಮರಣಾ ಕಾರ್ಯಕ್ರಮದಲ್ಲಿ ಡಾ.ಚಂದ್ರಶೇಖರಯ್ಯ

ಮೈಸೂರು,ಏ.30(ಸಿಎನ್)– ತ್ರಿವಿಧ ದಾಸೋಹಿ ಸಿದ್ದಗಂಗಾ ಶ್ರೀಗಳು ನಮ್ಮ ದೇಶಕ್ಕೆ ಅದಮ್ಯ ಚೇತನರಾಗಿದ್ದರು. ಭಕ್ತರ ಪಾಲಿನ ಆರಾಧ್ಯದೈವರಾಗಿದ್ದರು



ಎಂದು ಬಸವ ಅಧ್ಯಯನ ಕೇಂದ್ರ ಸಂದರ್ಶಕ ಪ್ರಾಧ್ಯಾಪಕ ಡಾ.ಚಂದ್ರಶೇಖರಯ್ಯ ಸ್ಮರಿಸಿದರು.

ನಗರದ ಅಕ್ಕನ ಬಳಗದಲ್ಲಿ ಆಯೋಜಿಸಿದ್ದ ಡಾ.ಶಿವಕುಮಾರ ಸ್ವಾಮೀಜಿಯವರ ಸ್ಮರಣಾ ಕಾರ್ಯಕ್ರಮದಲ್ಲಿ ಭಾಷಣ ಮಾಡಿದರು. ಶ್ರೀಗಳು ಹಾಕಿಕೊಟ್ಟ ಮಾರ್ಗ ಹಾಗೂ ಅವರ ಆದರ್ಶಗಳನ್ನು ನಾವು ಅಳವಡಿಸಿಕೊಂಡು ಮುಂದೆ ಸಾಗೋಣ. ಸಿದ್ದಗಂಗಾ ಮಠ ಜಾತಿ, ಧರ್ಮಕ್ಕೆ ಜೋತು ಬೀಳದೆ ಎಲ್ಲರನ್ನೂ ಬೆಳೆಸಿದ ಗರಿಮೆ ಹೊಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಶ್ರೀಗಳು ಲಿಂಗೈಕ್ಯರಾಗಿ 4 ವರ್ಷ ಕಳೆದಿದೆ, ಆದರೆ ಇಂದಿಗೂ ನಾಡಿನ ಜನರ ಮನಸ್ಸಲ್ಲಿ ಶಾಶ್ವತವಾಗಿ ನೆಲೆಯೂರಿದ್ದಾರೆ. ಶ್ರೀಗಳು ತ್ರಿವಿಧ ದಾಸೋಹಿಯಾಗಿ, ಸರ್ವರನ್ನು ಸಮಾನರಾಗಿ ಕಂಡವರು, ತಮ್ಮ ಮಠದ ಮಕ್ಕಳಲ್ಲಿಯೇ ದೇವರನ್ನು ಕಾಣುವ ಮೂಲಕ ಮಹಾನ್ ಚೇತನರಾಗಿದ್ದರು ಎಂದು ಡಾ.ಚಂದ್ರಶೇಖರಯ್ಯ ಸಂತಸ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಶಿವರಾತ್ರೀಶ್ವರ ಅಕ್ಕನ ಬಳಗದ ಅಧ್ಯಕ್ಷೆ ನೀಲಾಂಬಿಕೆ, ಚಿನ್ನಣ್ಣ, ಪ್ರಾಯೋಜಕರಾದ ನಾಗಮ್ಮ ಷಡಕ್ಷರಿ, ಪ್ರೇಮ ಪ್ರಭುಸ್ವಾಮಿ, ಭಕ್ತಾದಿಗಳು ಹಾಜರಿದ್ದರು.

ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುವ ನೈತಿಕತೆ ಸಿದ್ದರಾಮಯ್ಯರಿಗೆ ಇಲ್ಲ: ರೇವಣಸಿದ್ದಯ್ಯ

ಮೈಸೂರು: ರಾಜಕಾರಣದಲ್ಲಿ ತಮ್ಮ ಇನ್ನೂ ಎರಡು ತಲೆಮಾರುಗಳನ್ನು ಮುಂದುವರೆಸುವ ಘೋಷಣೆ ಮಾಡಿರುವ ಮಾಜಿ ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯರಿಗೆ ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಬಿಜೆಪಿ ಮುಖಂಡ ಹಾಗೂ ನಿವೃತ್ತ ಉನ್ನತ ಪೊಲೀಸ್ ಹಿರಿಯ ಅಧಿಕಾರಿ ರೇವಣಸಿದ್ದಯ್ಯ ಕಟುವಾಗಿ ಟೀಕಿಸಿದರು.



ವರುಣ ಕ್ಷೇತ್ರ ವ್ಯಾಪ್ತಿಯ ಹಳೇ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಇತರೆ ಪಕ್ಷಗಳ ಪ್ರಮುಖರು ಹಾಗೂ ಕಾರ್ಯಕರ್ತರ ಬಿಜೆಪಿ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಭಾಗದಲ್ಲಿ ಒಂದು ಜೀವಮಾನ ಪರ್ಯಂತ ಇದ್ದ ವ್ಯಕ್ತಿ ನಿಮ್ಮ ಓಟು ಗಳಿಸಿ ಮೇಲೇರಿದರು. ಆದರೆ, ಎರಡನೇ ಸಾಲಿನ ಮುಖಂಡರನ್ನು ಬೆಳೆಸುವ ಕಾರ್ಯ ಮಾಡಲಿಲ್ಲ. ಏಕೆಂದರೆ, ತಮ್ಮ ಕುಟುಂಬದವರನ್ನೇ ಮುಂದುವರಿಸುವ ದುರುದ್ದೇಶ ಅವರ ತಲೆಯಲ್ಲಿತ್ತು. ಇದನ್ನು ನೀವೆಲ್ಲರೂ ಸೂಕ್ಷ್ಮವಾಗಿ ಆಲೋಚಿಸಬೇಕು ಎಂದು ಕರೆ ನೀಡಿದರು.

ಮಾಜಿ ಪ್ರಧಾನಮಂತ್ರಿ ದೇವೇಗೌಡರ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕುಟುಂಬವನ್ನು ಜರೆಯುವ ಸಿದ್ದರಾಮಯ್ಯ ಈಗ ಮಾಡುತ್ತಿರುವುದು ನೈತಿಕ ರಾಜಕಾರಣವೇ ಎಂದು ಪ್ರಶ್ನಿಸಿದರು.

ಇದೇ ನನ್ನ ಕೊನೆಯ ಚುನಾವಣೆ ಎಂದು ಹೇಳುತ್ತಿದ್ದಾರೆ. ಆದರೆ, ಇದು ಅವರ ಕೊನೆಯ ಚುನಾವಣೆ ಅಲ್ಲ. ಏಕೆಂದರೆ, ಅವರು ನಾಮಪತ್ರ ಸಲ್ಲಿಸುವ ದಿನ ತಮ್ಮ ಮಗ ಹಾಗೂ ಮೊಮ್ಮಗನ ಪರಿಚಯಿಸುವ ಮೂಲಕ ರಾಜಕೀಯ ತಮ್ಮ ಕುಟುಂಬದ ಜಾಗೀರು ಎಂಬ ಸಂದೇಶ ನೀಡಿದ್ದಾರೆ. ಇದನ್ನು ನೀವುಗಳು ಅರ್ಥೈಸಿಕೊಳ್ಳಬೇಕು. ಅವರ ಇನ್ನೂ ಎರಡು ಪೀಳಿಗೆ ನಿಮ್ಮ ತಲೆ ಮೇಲೆ ಕುಳಿತಿರುತ್ತದೆ ಎಂದು ಸೂಚ್ಯವಾಗಿ ತಿಳಿಸಿದರು.

ಈ ದೇಶದಲ್ಲಿ ಹೊಸ ಹೊಸ ಅವಕಾಶ ಏನಾದರೂ ಸಿಗುವುದಾದಲ್ಲಿ ಅದು ಬಿಜೆಪಿಯಿಂದ ಮಾತ್ರ ಸಾಧ್ಯ. ಏಕೆಂದರೆ, ಪ್ರಧಾನಮಂತ್ರಿ ಮೋದಿ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರು ಯಾವುದೇ ರೀತಿಯ ರಾಜಕೀಯ ಹಿನ್ನೆಲೆಯುಳ್ಳ ಕುಟುಂಬದಿಂದ ಬಂದವರಲ್ಲ ಎಂದು ರೇವಣ್ಣಸಿದ್ದಯ್ಯ ತಿಳಿಸಿದರು.

ಕ್ಷೇತ್ರದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ. ಅದಕ್ಕೆ ಪೂರಕವಾದ ವಾತಾವರಣ ಸೃಷ್ಟಿಯಾಗಿದ್ದು, ಈ ಬಾರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅವರನ್ನು ಅತೀ ಹೆಚ್ಚು ಮತಗಳನ್ನು ನೀಡುವ ಮೂಲಕ ಆಶೀರ್ವದಿಸಬೇಕು ಎಂದು ಮನವಿ ಮಾಡಿದರು.

ನೂರಾರು ಮಂದಿ ಬಿಜೆಪಿಗೆ ಸೇರ್ಪಡೆ: ವರುಣ ಕ್ಷೇತ್ರ ವ್ಯಾಪ್ತಿಯ ಹಳೇಕೆಂಪಯ್ಯನಹುಂಡಿ, ಕುಪ್ಯ, ತುಂಬಲ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಕಾಂಗ್ರೆಸ್, ಜೆಡಿಎಸ್ ಪಕ್ಷಗಳ ಪ್ರಮುಖರು ಹಾಗೂ ನೂರಾರು ಮಂದಿ ಕಾರ್ಯಕರ್ತರು ರೇವಣಸಿದ್ದಯ್ಯ ಹಾಗೂ ಸೋಮಣ್ಣ ಅವರ ಪುತ್ರ ಅರುಣ್ ಸೋಮಣ್ಣ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಯಾದರು. ಈ ವೇಳೆ ಮುಖಂಡರಾದ ಸದಾನಂದ್, ಎಸ್‌ಎಂಪಿ ಶಿವಪ್ರಕಾಶ್, ಶಿವರಾಜು, ಸಿದ್ದರಾಜು, ವೀರಭದ್ರಪ್ಪ, ನಾಗೇಂದ್ರ, ಲೋಕೇಶ ತುಂಬಲ, ಬಸವರಾಜ, ರಮೇಶ್, ಮಹದೇವ್ ಮತ್ತಿತರರು ಉಪಸ್ಥಿತರಿದ್ದರು.

ಸುಡಾನ್‌ನಿಂದ ಬೆಂಗಳೂರಿಗೆ 229 ಮಂದಿ

ನವದೆಹಲಿ: ಸುಡಾನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಸ್ಥಳಾಂತರಿಸುವ ತನ್ನ ಕಾರ್ಯಾಚರಣೆಯಡಿಯಲ್ಲಿ ಭಾರತವು ಭಾನುವಾರ ಮತ್ತೆ 229 ಜನರನ್ನು ಬೆಂಗಳೂರಿಗೆ ಕರೆತಂದಿದೆ. 365 ಜನರು ಆಫ್ರಿಕನ್ ದೇಶ ಸುಡಾನ್‌ನಿಂದ ದೆಹಲಿಗೆ ಮರಳಿದ 1 ದಿನದ ನಂತರ, ಮತ್ತೊಂದು ಬ್ಯಾಚ್‌ನಲ್ಲಿ 229 ಮಂದಿ ಭಾರತಕ್ಕೆ ಬಂದಿದ್ದಾರೆ. ಈವರೆಗೆ ಮನೆಗೆ ಮರಳಿದ ಒಟ್ಟು ಭಾರತೀಯರ ಸಂಖ್ಯೆ ಈಗ 1,954 ಆಗಿದೆ.



ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡರ ಪರವಾಗಿ ವಾರ್ಡ್ ನಂ.58ರ ರಾಮಕೃಷ್ಣನಗರದಲ್ಲಿ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಚ್.ಸಿ.ಕೃಷ್ಣಕುಮಾರ್ ಸಾಗರ್ ನೇತೃತ್ವದಲ್ಲಿ ಮತಯಾಚಿಸಲಾಯಿತು. ರಾಜ್ಯ ರೈತ ಸಂಘ ಹಸಿರು ಸೇನೆ ಜಿಲ್ಲಾ ಸಂಚಾಲಕ ಕುಮಾರ್ ಬಸಪ್ಪ, ಮೈಸೂರು ಕಾಂಗ್ರೆಸ್ ಮಹಿಳಾ ಫಿಶರ್ ಕಾಂಗ್ರೆಸ್ ಅಧ್ಯಕ್ಷೆ ಮೇರಿ, ಮಹಿಳಾ ಸಂಘದ ಅಧ್ಯಕ್ಷೆ ನಾಗಮ್ಮ, ವಾರ್ಡ್ ನಂ.58ರ ಅಧ್ಯಕ್ಷ ರಾಜೇಂದ್ರ, ಸಾಮಾಜಿಕ ತಾಣದ ಅಧ್ಯಕ್ಷ ಶಂಕರ್‌ದಾಸ್, ಬಿಎಸ್ ಎನ್‌ಎಲ್ ಮಾದೇಗೌಡ, ರಾಜ ಅರಸ್, ಓಲೆ ಬಸವರಾಜ್, ದಯಾನಂದ, ಸುಮಿತ್ರ ಸ್ಟೀಲ್ ಮಹದೇವಸ್ವಾಮಿ, ಟೈಲರ್ ಚಿಕ್ಕ ಜವರಪ್ಪ, ಚಂದನ್, ಕೆಂಪೇಗೌಡ, ಸತೀಶ್, ಪವನ್, ಮಂಜು, ತಮ್ಮಣ್ಣಗೌಡ ಇನ್ನಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಅಧಿಕಾರಾವಧಿಯಲ್ಲಿ ಭ್ರಷ್ಟಾಚಾರವೇ ಇರಲಿಲ್ಲ

ಮೈಸೂರು, ಏ.30(ಎಂಟಿವೈ)– ದೊರೆತ ಅಧಿಕಾರಾವಧಿಯಲ್ಲಿ ಸಣ್ಣ ಪ್ರಮಾಣದ ಭ್ರಷ್ಟಾಚಾರಕ್ಕೂ ಆಸ್ಪದ ನೀಡದೇ, ಬಡ ಜನರ ಸೇವೆಯನ್ನೇ ಮಾಡುವ ಮೂಲಕ ಹಲವು ಜನಪ್ರಿಯ ಯೋಜನೆಯನ್ನು ಜಾರಿಗೊಳಿಸಿದ ಮಾಜಿ ಮುಖ್ಯಮಂತ್ರಿ ಸಿದ್ದ ರಾಮಯ್ಯರಿಗೆ ಮತ್ತೊಂದು ಬಾರಿ ಸೇವೆ ಮಾಡಲು ಅವಕಾಶ ನೀಡುವಂತೆ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.



ವರುಣ ಕ್ಷೇತ್ರದ ಕೋಣನೂರು, ಕೋಣನೂರು ಪಾಳ್ಯ, ಕೋಣನಪುರ, ಮರಳ್ಳಿಪುರ, ಹನುಮನಪುರ, ದಾಸನೂರು, ಕಾರೆಮೊಳೆ, ಸಂಕುಶ ರಾಯಪುರ ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪರ ಬಿರುಸಿನ ಮತಯಾಚಿಸಿ ಮಾತನಾಡಿದರು.

1983ರಿಂದ ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಸಿದ್ದರಾಮಯ್ಯ ಎಂದಿಗೂ ಅನ್ಯಾಯದ ಪರ ರಾಜೀ ಮಾಡಿಕೊಂಡಿಲ್ಲ. ತಮ್ಮ ರಾಜಕೀಯ ಜೀವನದ ಉದ್ದಕ್ಕೂ ಬಡವರು, ಶೋಷಿತರು, ರೈತರು, ಗ್ರಾಮೀಣ ಜನರ ಪರ ಕಾಳಜಿಯಿಟ್ಟುಕೊಂಡು ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಶಾಸಕರಾಗಿ, ಮಂತ್ರಿಯಾಗಿ, ಉಪಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ ಹಾಗೂ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ವೇಳೆ ಬಡವರ, ರೈತರ ಹಾಗೂ ಶೋಷಿತರ ಪರ ಕೆಲಸ ಮಾಡಿದ್ದಾರೆ. ವರುಣ ಕ್ಷೇತ್ರವನ್ನು ಎರಡು ಬಾರಿ ಪ್ರತಿ ನಿಧಿಸಿದ್ದ ಸಿದ್ದರಾಮಯ್ಯ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿ, ಅಪಾರವಾದ ಕೊಡುಗೆ ನೀಡಿದ್ದಾರೆ ಎಂದರು.


ವರುಣ ಕ್ಷೇತ್ರದ ಜನರ ಆಶೀರ್ವಾದದಿಂದ ಸಿದ್ದರಾಮಯ್ಯ ವಿಪಕ್ಷ ನಾಯಕರಾಗಿ, ಮುಖ್ಯಮಂತ್ರಿ ಯಾಗಿ ಸೇವೆ ಸಲ್ಲಿಸಿದ್ದಾರೆ. ವರುಣ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸಾವಿರಾರು ಕೋಟಿ ರೂ. ಅನುದಾನ ಬಿಡುಗಡೆ ಮಾಡಿ, ಅಭಿವೃದ್ಧಿ ಕಾಮಗಾರಿ ನಡೆಸಿದ್ದಾರೆ. ಬಡವರಿಗೆ ಮನೆ ನಿರ್ಮಾಣ, ಎಲ್ಲಾ ಜನಾಂಗದವರಿಗೂ ಸಮುದಾಯ ಭವನ, ದೇವಾಲಯ ನಿರ್ಮಾಣಕ್ಕೆ ಅನುದಾನ ನೀಡಿದ್ದಾರೆ. ಗಂಗಾ ಕಲ್ಯಾಣ ಯೋಜನೆಯಡಿ ಬೋರ್‌ವೆಲ್, ವಿವಿಧ ನಿಗಮಗಳಿಂದ ಸಾಲ ಸೌಲಭ್ಯಗಳು, ಕೆರೆ ತುಂಬಿಸುವ ಯೋಜನೆ, ರಸ್ತೆ, ಚರಂಡಿಗಳ ನಿರ್ಮಾಣ, ಶಾಲಾ ಕೊಠಡಿ, ಆಸ್ಪತ್ರೆ, ಅಂಗನವಾಡಿ ಕಟ್ಟಡಗಳು, ಸ್ತ್ರೀ ಶಕ್ತಿ ಸಂಘಗಳಿಗೆ ಸಾಲ ಸೌಲಭ್ಯಗಳು, ಕಪಿಲಾ ನದಿಗೆ ಸೇತುವೆಗಳ ನಿರ್ಮಾಣ, ಕೈಗಾರಿಕೆಗಳ ಸ್ಥಾಪನೆ ಮಾಡಿ, ಸಾಮಾಜಿಕ ನ್ಯಾಯದಡಿ ಸಮಸಮಾಜ ನಿರ್ಮಾಣ ಮಾಡಲು ಶಕ್ತಿ ಮೀರಿ ಶ್ರಮಿಸಿದ್ದಾರೆ ಎಂದರು.

ಇದು ಅವರ ಕೊನೆಯ ಚುನಾವಣೆ. ಯಾವುದೇ ಅಪಪ್ರಚಾರಗಳಿಗೆ ಕಿವಿಗೊಡದೆ, ಎಲ್ಲರೂ ಒಮ್ಮತದಿಂದ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವುದರೊಂದಿಗೆ ಸಿದ್ದರಾಮಯ್ಯನವರನ್ನು ಅತಿ ಹೆಚ್ಚು ಮತಗಳ ಅಂತರದಿಂದ ಆಯ್ಕೆ ಮಾಡಿಕೊಡಬೇಕೆಂದು ಮನವಿ ಮಾಡಿದರು. ರಾಜ್ಯ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜು, ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ.ಸೀತಾರಾಂ, ಮುಖಂಡರಾದ ಗಿರಿ, ದಾಸನೂರು ನಾಗೇಶ್, ಮಹಾದೇವ ಭೋವಿ, ಶಿವಣ್ಣ, ಬಾಬು, ರವಿ, ಚಿನ್ನಸ್ವಾಮಿ, ರಾಕೇಶ್, ನಾಗೇಶ್, ಗಿರೀಶ್, ಶಿವಕುಮಾರ್, ಗೌಡರಹುಂಡಿ ವೃಷಬೇಂದ್ರ, ಬಸವಣ್ಣ, ವಾಜಮಂಗಲ ಸೋಮಣ್ಣ ಸೇರಿದಂತೆ ಇನ್ನಿತರರಿದ್ದರು.

ಅರ್ಜಿ ಆಹ್ವಾನ

ಮೈಸೂರು, ಏ.30– 2022–23ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಇಂಜಿನಿಯರಿಂಗ್, ಪ್ಯಾರಾ ಮೆಡಿಕಲ್, ನರ್ಸಿಂಗ್ ಮತ್ತು ಸ್ನಾತಕೋತ್ತರ ಕೋರ್ಸುಗಳ ವಿದ್ಯಾರ್ಥಿಗಳ ಹಾಗೂ ಪರಿಶಿಷ್ಟ ಜಾತಿಯ ಎಲ್ಲಾ ಕೋರ್ಸ್‌ನ ವಿದ್ಯಾರ್ಥಿಗಳಿಗೆ ಸ್ಟೇಟ್ ಹಾಸ್ಟೆಲ್ ಪೋರ್ಟಲ್‌ನಲ್ಲಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ. www.kar.nic.inನಲ್ಲಿ ಮೇ 15ರೊಳಗೆ ಸಲ್ಲಿಸಿ, ಅದರ ಪ್ರತಿಯನ್ನು ಅಗತ್ಯ ದಾಖಲೆ ಲಗತ್ತಿಸಿ ಸಹಾಯಕ ನಿರ್ದೇಶಕರು ಗ್ರೇಡ್ –1ರವರ ಕಚೇರಿಗೆ ಸಲ್ಲಿಸಲು ಕೋರಿದೆ. ಮಾಹಿತಿಗೆ (ದೂ.ಸಂ: 0821–2520910) ಅವರನ್ನು ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.5.2023 ಸೋಮವಾರ, ಮಳೆ ನಕ್ಷತ್ರ: ಭರಣಿ, 28.04.2023 ರಿಂದ 10.05.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಪುಬ್ಬ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್ :** ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 99ನೇ ವರ್ಷದ ಮೈಸೂರು ಕರಗ ಮಹೋತ್ಸವ, ಮುಂಜಾನೆ 5 ಗಂಟೆಗೆ ಕರಗ ಪಶ್ಚಿಮ ವಾಹಿನಿಯಲ್ಲಿ ವಿಸರ್ಜನೆ

■ **ಶ್ರೀ ವೆಂಕಟಾಚಲ ಧಾಮ, ಮಧ್ವ ರಾದ್ಧಾಂತ ಸಂವರ್ಧಕ ಸಭಾ :** ಶ್ರೀ ವೇದವ್ಯಾಸ ಜಯಂತಿ, ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದರ ಆರಾಧನೆ ಮತ್ತು ನರಸಿಂಹ ಜಯಂತಿ ಮಹೋತ್ಸವ, ಮಧ್ಯಾಹ್ನ 12 ಗಂಟೆಯಿಂದ ರಾತ್ರಿ 8 ರವರೆಗೆ ವಿವಿಧ ವಿದ್ವಾಂಸರಿಂದ ರಾಮಾಯಣ ಗೋಷ್ಠಿ, ಅಧ್ಯಕ್ಷತೆ: ಶ್ರೀ ವಿದ್ವಾನ್ ಸಿ.ಹೆಚ್. ಶ್ರೀನಿವಾಸಮೂರ್ತಿ ಆಚಾರ್ಯ, ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರ ಸ್ಮರಣಾರ್ಥ ಹರಿಸ್ಮರಣೆ, ಸ್ಥಳ: ಶಾರದಾ ವಿಲಾಸ ಕಾಲೇಜಿನ ಸಭಾಂಗಣ.

■ **ರಂಗಾಯಣ :** ಚಿಣ್ಣರ ಮೇಳ–2023 'ನಮ್ಮೀ ತಾಯ್ನೆಲ' ನಾಟಕೋತ್ಸವ ಉದ್ಘಾಟನೆ, ಉದ್ಘಾಟನೆ: ದಕ್ಷಿಣ ಕನ್ನಡದ ಹಿರಿಯ ರಂಗತಜ್ಞ, ನಾಟಕಕಾರ ಮೂರ್ತಿ ದೇರಾಜೆ, ಧರೆ ತಂಡದಿಂದ ಪುಣ್ಯಕೋಟಿ ಮತ್ತು ಜನನಿ ತಂಡದಿಂದ ಪುಷ್ಪಾರಾಣಿ ನಾಟಕ, ಸ್ಥಳ: ವನರಂಗ, ಸಂಜೆ 6 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ– ಡಾ. ಗಜಾನನ ಶರ್ಮ, 6.45 ಅರಿವಿನ ಶಿಖರ, ಗಾಯನ– ಜಿ. ಪುಷ್ಪಲತಾ, ವ್ಯಾಖ್ಯಾನ– ಡಾ.ಎನ್.ಎಸ್. ತಾರಾನಾಥ್, 7.15 ಭಾವಗೀತೆಗಳು: ಶಿವಮೊಗ್ಗ ಸುಬ್ಬಣ್ಣ, 8.30 ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 9.30 ಚುನಾವಣೆ 2023: ಮತ ಕ್ಷೇತ್ರ ದರ್ಶನ: ಸಮಗ್ರ ಚಿತ್ರಣ, 10.00 ಲಯ ಸಂಭ್ರಮ, ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, 11.00 ಸ್ಪೆಷಲ್ ಚುರುಮುರಿ: ಪ್ರಸ್ತುತಿ– ಪಿ.ಸಿ. ಮಳಿಮಠ ಮತ್ತು ಕೆ.ಬಿ. ಮೀನಾ, 11.30 ಮಿಶ್ರ ಮಾಧುರ್ಯ.

ಮಧ್ಯಾಹ್ನ: 12.30 ದೇವರ ನಾಮ: ನಿತಿನ್ ರಾಜಾರಾಂ ಶಾಸ್ತ್ರಿ, 12.45 ನಮ್ಮ ಆರೋಗ್ಯ: ವಿಶ್ವ ಕಾರ್ಮಿಕರ ದಿನಾಚರಣೆಯ ಸಂದರ್ಭದಲ್ಲಿ ಆಕ್ಯುಪೇಷನಲ್ ಲಂಗ್ ಡಿಸೀಸ್ ಕುರಿತು ಡಾ. ಶ್ರೀಹರ್ಷವರ್ಧನ್ ಎಸ್.ವಿ. ಅವರೊಂದಿಗೆ ಮಾತುಕತೆ, 1.00 ರಂಗಗೀತೆ: ಯು.ಆರ್. ನಾರಾಯಣಯ್ಯ, 1.20 ಭಾವಗೀತೆ– ವಿಶ್ವನಾಥ್ ನಾಕೋಡ್, 3.00 ಎ.ಎಸ್.ಪದ್ಮಾ– ವೀಣಾವಾದನ.

ಸಂಜೆ: 4.00 ಮಹಿಳಾರಂಗ: 'ಡಾಕ್ಟರ್ ಸಮಯ' ಭಾಗವಹಿಸುವ ವೈದ್ಯರು– ಡಾ. ಜ್ಯೋತಿ ಉಮೇಶ್, ವಿಷಯ– ಮಹಿಳೆಯರನ್ನು ಕಾಡುವ ಫೈಬ್ರಾಯ್ಡ್ ಹಾಗೂ ಬಿಳಿಸೆರಗು ಸಮಸ್ಯೆಗಳು, ಕಾರಣ ಹಾಗೂ ಚಿಕಿತ್ಸೆ, ಪ್ರಸ್ತುತಿ– ಕೆ.ಬಿ.ಮೀನಾ, 4.30 ಝೇಂಕಾರ: ಕವಿ– ಡಾ. ದೊಡ್ಡರಂಗೇಗೌಡ, ಸಂಗೀತ– ಜಿ. ಪುಷ್ಪಲತಾ, ಭಾಗವಹಿಸುವವರು ಮೈಸೂರಿನ ಗಾನಭಾರತಿ ಸಂಗೀತ ಶಾಲೆಯ ವಿದ್ಯಾರ್ಥಿಗಳು, 6.55 ಕೃಷಿರಂಗ: ಕಿಸಾನ್ ವಾಣಿ– ಸಮಗ್ರ ಕೃಷಿಯಲ್ಲಿನ ಅನುಭವ ಕುರಿತು ಬಿ.ವಿ. ರಾಜೇಗೌಡ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎಸ್. ಸುಬ್ರಹ್ಮಣ್ಯ.

ರಾತ್ರಿ: 8.00 ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 9.30 ಹಳ್ಳಿ ಹಾಡು: ಭಾಗವಹಿಸುವವರು ನಿಟ್ರೆ ಗ್ರಾಮದ ಮಹದೇವಯ್ಯ, ಸಂಗಡಿಗರು ಪ್ರಸ್ತುತಿ– ಅಬ್ದುಲ್ ರಶೀದ್, 10.00 ನಾಟಕ: 'ಪುರೂರವ' ಮೂಲ ರಂಗ ನಾಟಕ– ಕೆ. ದಾಸಪ್ಪ, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ, 10.30 ಸವಿನೆನಪು.

ಮೈಸೂರು ಹಾಗೂ ಸುತ್ತಮುತ್ತ ನಾಳೆ...

ನಾಳಿನ ಪಂಚಾಂಗ

2.5.2023 ಮಂಗಳವಾರ, ಮಳೆ ನಕ್ಷತ್ರ: ಭರಣಿ, 28.04.2023 ರಿಂದ 10.05.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಉತ್ತರಾ, ರಾಹುಕಾಲ: ಮಧ್ಯಾಹ್ನ 3 ಗಂಟೆಯಿಂದ 4.30ರವರೆಗೆ

■ **ಶ್ರೀ ವೆಂಕಟಾಚಲ ಧಾಮ, ಮಾಧ್ವರಾದ್ಧಾಂತ ಸಂವರ್ಧಕ ಸಭಾ :** ಶ್ರೀ ವೇದವ್ಯಾಸ ಜಯಂತಿ, ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದರ ಆರಾಧನೆ ಮತ್ತು ನರಸಿಂಹ ಜಯಂತಿ ಮಹೋತ್ಸವ, ಬೆಳಗ್ಗೆ 8 ಗಂಟೆಗೆ ಶ್ರೀ ವೆಂಕಟಾಚಲ ಧಾಮದಲ್ಲಿ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀ ಪಾದರ ಮಧ್ಯಾರಾಧನೆ, ಮಧ್ಯಾಹ್ನ 1.30ಕ್ಕೆ ವಸಂತೋತ್ಸವ, ಸಂಜೆ 4 ಗಂಟೆಗೆ ಭಾರತಗುರು ಶ್ರೀ ವೇದವ್ಯಾಸರ ಶೋಭಾಯಾತ್ರೆ (ಸೋಸಲೆ ವ್ಯಾಸರಾಜ ಮಠದಿಂದ ಶಾರದಾ ವಿಲಾಸ ಕಾಲೇಜಿನವರೆಗೆ). ಸಂಜೆ 5.30ಕ್ಕೆ ಸೋಸಲೆ ವ್ಯಾಸರಾಜ ಮಠಾಧೀಶರಾದ ಶ್ರೀ ವಿದ್ಯಾ ಶ್ರೀಶತೀರ್ಥ ಶ್ರೀಪಾದರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ, ದಿವ್ಯ ಉಪಸ್ಥಿತಿ: ಪೇಜಾವರ ಮಠಾಧೀಶರಾದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು, ಶ್ರೀ ವಿದ್ಯೇಶತೀರ್ಥ ವಿರಚಿತ 'ಮಾತೃಭೂಮಿ ಪದ್ಯ ಮಾಲಾ'ದ ದೃಶ್ಯ ತರಂಗಗಳ ಪ್ರದರ್ಶನ, ವಿದ್ವತ್ ಪ್ರವಚನ: ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠದ ಪ್ರಾಂಶುಪಾಲರಾದ ಡಾ. ವಿ.ಹೆಚ್. ಸತ್ಯನಾರಾಯಣಾಚಾರ್ಯ ಅವರಿಂದ, ವಿಷಯ: ಭಗವಾನ್ ವೇದವ್ಯಾಸರು, ಶ್ರೀ ವಿದ್ಯಾಮಾನ್ಯತೀರ್ಥ ಸ್ಥಾಪಿತ ಮಧ್ವರಾದ್ಧಾಂತ ಸಂವರ್ಧಕ ಸಭಾ ಪ್ರಶಸ್ತಿ ಪ್ರದಾನ ಪೂರ್ವಕ ವಿದ್ವತ್ ಸನ್ಮಾನ, ಶ್ರೀ ಭಂಡಾರ ಕೇರಿ ಮಠಾಧೀಶರಾದ ಶ್ರೀ ವಿದ್ವೇಶತೀರ್ಥ ಶ್ರೀಪಾದರಿಂದ, ಸ್ಥಳ: ಶಾರದಾ ವಿಲಾಸ ಕಾಲೇಜಿನ ಸಭಾಂಗಣ.

ಪ್ರಧಾನಿ ರೋಡ್ ಶೋಗೆ ಮೆರಗು ನೀಡಿದ ಸಾಂಸ್ಕೃತಿಕ ಕಲಾತಂಡಗಳು

- ಗನ್‌ಹೌಸ್‌ನಿಂದ ಬನ್ನಿಮಂಟಪದವರೆಗೆ 26 ಕಲಾತಂಡಗಳಿಂದ ಆಕರ್ಷಕ ಪ್ರದರ್ಶನ
- 101 ಮಂಗಳವಾದ್ಯಗಾರರಿಂದ ನಾದಸ್ವರ
- ತಿಳಿ ಸಂಜೆಯಲ್ಲಿ ಮಾರ್ದನಿಸಿದ ಕಲಾತಂಡಗಳ ನಿನಾದ
- ದಸರಾ ಮಾದರಿಯಲ್ಲಿ ಕಳೆ ಕಟ್ಟಿದ ಜಂಬೂಸವಾರಿ ಮಾರ್ಗ







ಮೈಸೂರು,ಏ.30(ಎಂಟಿವೈ)–ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ಮಾಡುವುದಕ್ಕಾಗಿ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನಡೆಸಿದ ರೋಡ್ ಶೋಗೆ 26ಕ್ಕೂ ಹೆಚ್ಚು ಕಲಾ ತಂಡಗಳ ಪ್ರದರ್ಶನ ಮೆರಗು ಹೆಚ್ಚಿಸಿತು.

ಸಾಂಸ್ಕೃತಿಕ ರಾಜಧಾನಿ ಮೈಸೂರಲ್ಲಿ ನಡೆದ ಪ್ರಧಾನಿ ಮೋದಿ ಅವರ ರೋಡ್ ಶೋ ಕಣ್ತುಂಬಿಕೊಳ್ಳಲು ಅಪಾರ ಸಂಖ್ಯೆಯಲ್ಲಿ ಬಿಜೆಪಿ ಕಾರ್ಯಕರ್ತರು ಹಾತೊರೆದರು. ಮೈಸೂರಿನ ಗನ್‌ಹೌಸ್ ವೃತ್ತದಿಂದ ಸಂಜೆ 6.30ರ ಸುಮಾರಿಗೆ ಆರಂಭವಾದ ರೋಡ್ ಶೋ ಪಾಠಶಾಲಾ ವೃತ್ತದ ಮೂಲಕ ಸಯ್ಯಾಜಿರಾವ್ ರಸ್ತೆ ಕೆ.ಆರ್.ವೃತ್ತ, ಕೆ.ಆರ್.ಆಸ್ಪತ್ರೆ, ಹಳೆ ಆರ್‌ಎಂಸಿ ವೃತ್ತ, ಬಂಬೂಬಜಾರ್, ಹೈವೇ ವೃತ್ತದ ಮೂಲಕ ಪಂಜಿನ ಕವಾಯತು ಮೈದಾನದವರೆಗೂ ಸಾಗಿತು. ಈ ವೇಳೆ ಒಂದೆಡೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ನೋಡುತ್ತಾ ಜೈಕಾರ ಹಾಕುತ್ತಿದ್ದ ಕಾರ್ಯಕರ್ತರಿಗೆ ಸಾಂಸ್ಕೃತಿಕ ತಂಡಗಳ ನಿನಾದ ಅವರ ಉತ್ಸಾಹವನ್ನು ಹೆಚ್ಚಿಸಿತು. ರೋಡ್ ಶೋ ವೀಕ್ಷಣೆಗೆಂದು ಮಧ್ಯಾಹ್ನ 2 ಗಂಟೆಯಿಂದಲೇ ವಿವಿಧ ಬಡಾವಣೆ ಹಾಗೂ ಕ್ಷೇತ್ರಗಳಿಂದ ಆಗಮಿಸುತ್ತಿದ್ದ ಬಿಜೆಪಿ ಕಾರ್ಯಕರ್ತರು, ಜನರು ಮಾರ್ಗದ ಹಲವೆಡೆ ಕುತೂಹಲದಿಂದ ಜಮಾಯಿಸಿದ್ದರು. ಕಾರ್ಯಕರ್ತರ ಉತ್ಸಾಹ ಹೆಚ್ಚಿಸಲು ಆಯ್ದ ಸ್ಥಳಗಳಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳ ಪ್ರದರ್ಶನ ಆಯೋಜಿಸಲಾಗಿತ್ತು. ರೋಡ್ ಶೋ ಆರಂಭಕ್ಕೂ ಎರಡು ಗಂಟೆ ಮೊದಲೇ ಸಾಂಸ್ಕೃತಿಕ ಕಲಾತಂಡಗಳ ಕಲಾವಿದರು ಪ್ರದರ್ಶನ ನೀಡಿ ಗಮನ ಸೆಳೆದರು.

101 ಮಂದಿಯಿಂದ ನಾದಸ್ವರ: ರೋಡ್ ಶೋ ಆರಂಭವಾದ ಗನ್‌ಹೌಸ್ ಬಳಿ 101 ಮಂದಿ ನಾದಸ್ವರದ ಕಲಾವಿದರಿಂದ ನಾದಸ್ವರ ವಾದನ ಎಲ್ಲರ ಮನ ಸೆಳೆಯಿತು. ಸಾಂಪ್ರದಾಯಿಕ ಉಡುಗೆ, ಮೈಸೂರು ಪೇಟ ತೊಟ್ಟು ನಾದಸ್ವರ ನುಡಿಸಿದರು. ಏಕಕಾಲದಲ್ಲಿ 101 ಕಲಾವಿದರು ನುಡಿಸಿದ ನಾದಸ್ವರ ಕಾರ್ಯಕ್ರಮಕ್ಕೆ ಹಬ್ಬದ ಕಳೆಕಟ್ಟುವಂತೆ ಮಾಡಿತು. ಈ ತಂಡದಲ್ಲಿದ್ದ ಮಹಿಳಾ ಕಲಾವಿದರು ಸ್ಯಾಕ್ಸೋಫೋನ್ ನುಡಿಸಿ ಗಮನ ಸೆಳೆದರು.















ಸಾಂಸ್ಕೃತಿಕ ಕಲಾ ತಂಡಗಳ ವೈಭವ

ಪ್ರಧಾನಿ ನರೇಂದ್ರ ಮೋದಿ ಅವರ ರೋಡ್ ಶೋ ತೆರಳುವ ಮಾರ್ಗದಲ್ಲಿ ಆಯ್ದ ಸ್ಥಳಗಳಲ್ಲಿ ಸಾಂಸ್ಕೃತಿಕ ಕಲಾತಂಡಗಳನ್ನು ನಿಯೋಜಿಸಲಾಗಿತ್ತು. ವಿದ್ಯಾಪೀಠ ಸರ್ಕಲ್ ಬಳಿ ಪೂರ್ಣ ಕುಂಭದೊಂದಿಗೆ ಮಹಿಳೆಯರಿಂದ ಸ್ವಾಗತ ಕೋರಲಾಯಿತು. ಅಲ್ಲದೇ ಸಮೀಪದಲ್ಲಿಯೇ ಭರತನಾಟ್ಯ ಕಲಾವಿದರು ನೃತ್ಯ ಪ್ರದರ್ಶಿಸಿ ಗಮನ ಸೆಳೆದರು. ಭರತನಾಟ್ಯ ಕಲಾವಿದೆ ವಿದುಷಿ ಕೃಪಾ ಪಡ್ಕೆ ಅವರ ನೃತ್ಯಗಿರಿ ಭರತ ನಾಟ್ಯ ತಂಡವು ಮೋದಿ ಅವರ ಮೇಲೆ ರಚಿಸಿರುವ ಸಾಹಿತ್ಯಕ್ಕೆ ರೂಪಶ್ರೀ ಮಧುಸೂದನ್ ಹಾಗೂ ಸಂಗೀತ ಸಂಯೋಜನೆ ವಿದುಷಿ ಪಿ.ರಮಾ ಅವರ ಹಾಡಿಗೆ ಭರತ ನಾಟ್ಯ ಮೂಲಕ ಪೂರ್ಣಕುಂಭ ಸ್ವಾಗತ ನೀಡಿದರು. ಸಂಸ್ಕೃತ ಪಾಠಶಾಲೆ ಬಳಿ ಸ್ಯಾಕ್ಸೋಫೋನ್, ಮಹಾನಗರಪಾಲಿಕೆ ಕಚೇರಿ ಬಳಿ ಚಿಲಿಪಿಲಿ ಗೊಂಬೆ, ಕೆ.ಆರ್.ವೃತ್ತದ ಸಮೀಪ ನಗಾರಿ, ದೇವರಾಜ ಮಾರುಕಟ್ಟೆ ಬಳಿ ಸೋಮನ ಕುಣಿತ, ಹೈವೇ ವೃತ್ತದಲ್ಲಿ ಕಂಸಾಳೆ, ಬನ್ನಿಮಂಟಪದ ಸಮೀಪ ಡೊಳ್ಳು ಕುಣಿತ, ಕೆಎಸ್‌ಆರ್‌ಟಿಸಿ ಡಿಪೋ ಬಳಿ ಪೂಜಾ ಕುಣಿತ, ಬನ್ನಿಮಂಟಪದ ಎಡ ಬಲ ಭಾಗದಲ್ಲಿ ಪಟ್ಟದ ಕುಣಿತ ಹಾಗೂ ವೀರಭದ್ರ ಕುಣಿತ, ಪೂಜಾ ಕುಣಿತ, ನಂದಿ ಧ್ವಜ, ಸೋಮನ ಕುಣಿತ, ಪಟದ ಕುಣಿತ ಸೇರಿದಂತೆ ವಿವಿಧ ಪ್ರಕಾರಗಳ ಜಾನಪದ ಕಲಾ ತಂಡಗಳು ಪ್ರದರ್ಶನ ನೀಡಿ, ಮೆರಗು ಹೆಚ್ಚಿಸಿದವು.

ನಕ್ಕರೆ ಅದೇ ಸ್ವರ್ಗ

ಮೊಮ್ಮಗ : ಅಜ್ಜ, ನಿಮ್ಮ ಪೆನ್ಷನ್‌ನಿಂದ ನಂಗೆ 500 ರೂ. ಸಾಲ ಕೊಡಿ...
ಅಜ್ಜ : ಯಾವಾಗ ವಾಪಸ್ ಕೊಡ್ತೀಯಾ?
ಮೊಮ್ಮಗ : ನಂಗೆ ಪೆನ್ಷನ್ ಬರುವಾಗ ಕೊಡ್ತೀನಿ...!

ಮೈಸೂರು ಮಿತ್ರ

ಸೋಮವಾರ, 1 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........
ನನ್ನ ಜೀವನದಲ್ಲಿ ತುಂಬ ಸಮಸ್ಯೆಗಳಿದ್ದವು. ಆದರೆ, ಅವು ನನ್ನ ತುಟಿಗಳಿಗೆ ಗೊತ್ತಿರಲಿಲ್ಲ. ಅವು ಸದಾ ಕಾಲ ನಗುತ್ತಿದ್ದವು. – ಚಾರ್ಲಿ ಚಾಪ್ಲಿನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ.

ನಿಮ್ಮ ಪತ್ರಗಳು

ಸೌಜನ್ಯದ ಸಾಕಾರಮೂರ್ತಿ ಡಾ.ಜಿ.ಪರಮೇಶ್ವರ್‌ಗೆ ಕಲ್ಲೇಟು



ಮಾನ್ಯರೆ,
ಕೊರಟಗೆರೆ ತಾಲೂಕು ಬೈರನಹಳ್ಳಿಯಲ್ಲಿ ಚುನಾವಣಾ ಪ್ರಚಾರ ನಡೆಸುತ್ತಿದ್ದ ಸಮಯದಲ್ಲಿ ಕಿಕ್ಕಿರಿದು ಸೇರಿದ್ದ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು, ಸೌಜನ್ಯದ ಸಾಕಾರ ಮೂರ್ತಿ ಡಾ.ಜಿ. ಪರಮೇಶ್ವರ್ ಅವರನ್ನು ಹೆಗಲ ಮೇಲೆ ಎತ್ತಿಕೊಂಡು ಜೈಕಾರ ಹಾಕಿ, ಹೂ ಮಳೆ ಸುರಿಸುತ್ತಿರುವಾಗ ಹೂವಿನ ಮಧ್ಯದಲ್ಲಿ ತೂರಿ ಬಂದ ಕಲ್ಲೊಂದು ಅವರ ತಲೆಗೆ ಬಡಿದು ರಕ್ತ ಸೋರಿರುವುದು ತುಂಬಾ ನೋವಿನ ಸಂಗತಿ. ಕೆಪಿಸಿಸಿ ವಕ್ತಾರ ರಮೇಶ್ ಬಾಬು ಕೊರಟಗೆರೆ ಕ್ಷೇತ್ರದಲ್ಲಿ ಜೆಡಿಎಸ್ ಹಾಗೂ ಬಿಜೆಪಿ ನಮಗೆ ಪ್ರತಿಸ್ಪರ್ಧಿಗಳಾಗಿದ್ದು, ಈ ದುಷ್ಕೃತ್ಯವನ್ನು ಆ ಪಕ್ಷದವರು ಮಾಡಿದ್ದಾರೆ ಎಂದು ಆರೋಪ ಮಾಡುವುದಿಲ್ಲ ಎಂದು ಹೇಳಿರುವ ಮಾತು ಶ್ಲಾಘನೀಯ. ನಾಮಪತ್ರ ಸಲ್ಲಿಕೆಯ ಸಮಯದಲ್ಲೂ ಸಹ ಪರಮೇಶ್ವರ್ ಅವರ ಮೇಲೆ ಕಲ್ಲು ತೂರಾಟ ನಡೆದು ಅವರಿಗೆ ಕಲ್ಲು ತಾಗದೆ ಕರ್ತವ್ಯದಲ್ಲಿ ನಿರತರಾಗಿದ್ದ ಮಹಿಳಾ ಪೇದೆಯೊಬ್ಬರಿಗೆ ಬಿದ್ದು ಗಾಯವಾಗಿತ್ತು. ಚುನಾವಣಾ ಸಮಯದಲ್ಲಿ ನಮ್ಮ ರಾಜ್ಯದಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಇದುವರೆಗೂ ಸಾಕ್ಷಿಯಾಗಿಲ್ಲ, ಇಂತಹ ಘಟನೆಗಳು ನಮ್ಮ ರಾಜ್ಯದ ಯಾವುದೇ ಕ್ಷೇತ್ರದಲ್ಲೂ ಮರುಕಳಿಸದೇ ಚುನಾವಣಾ ಪ್ರಕ್ರಿಯೆ ಅತ್ಯಂತ ಯಶಸ್ವಿಯಾಗಿ ನೆರವೇರಲಿ.

–ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ. ನಗರ, ಮೈಸೂರು.

ಮತದಾರರ ತೀರ್ಪು ಅಂತಿಮ...

ಮಾನ್ಯರೆ,
ರಾಜ್ಯ ವಿಧಾನಸಭೆಗೆ ಚುನಾವಣೆ ದಿನಗಳು ಹತ್ತಿರವಾಗುತ್ತಿದ್ದಂತೆ, ಸ್ಟಾರ್‌ಗಳಿಂದ ಹಿಡಿದು ಪಕ್ಷದ ಪ್ರಭಾವಿ ನಾಯಕರಿಂದ ವೇಳಾಪಟ್ಟಿ ಮಾಡಿ ಬಿಟ್ಟು ಬಿಡದೆ ಮಿಂಚಿನ ಸಂಚಾರ ಜೊತೆಗೆ ಅಬ್ಬರದ ಪ್ರಚಾರ, ಗ್ಯಾರಂಟಿಗಳ ಸುರಿಮಳೆ, ರಾಜಕಾರಣಿಗಳ ಕೌಂಟರ್ ಮಾತುಗಳಿಗೆ ಕೊನೆಯೇ ಇಲ್ಲ. ಇನ್ನು ಅಕ್ರಮವಾಗಿ ಸಾಗಿಸುವ ಲಕ್ಷಾಂತರ ಹಣ ಸೀಜ್ ಆಗಿರುವ ವರದಿಗಳ ಬಗ್ಗೆ ಗೊತ್ತಿರುವ ವಿಚಾರ.
ಇಷ್ಟು ಮಾತ್ರವಲ್ಲ ಸಾಮಾಜಿಕ ಜಾಲತಾಣಗಳಲ್ಲಿ ಬಿಜೆಪಿ, ಕಾಂಗ್ರೆಸ್ ಪಕ್ಷದ ವಿಡಿಯೋ ಜಾಹೀರಾತುಗಳನ್ನು ಜನಸಾಮಾನ್ಯರು ಸೂಕ್ಷ್ಮವಾಗಿ ಗಮನಿಸಬೇಕು. ಇದರಿಂದ ಯಾರು ಏನು ಮಾಡಿದ್ದಾರೆ, ಏನು ಮಾಡಿಲ್ಲ ಎಂಬುದು ತಿಳಿಯುತ್ತದೆ ಮತ್ತು ಪ್ರಜೆಗಳು ಈಗ ಕೋರ್ಟ್‌ನಲ್ಲಿರುವ ಜಡ್ಜ್ ಇದ್ದ ಹಾಗೆ, ಕೇವಲ ಒಂದು ಕಡೆಯ ವಾದವನ್ನು ಆಲಿಸಿ ತೀರ್ಮಾನಕ್ಕೆ ಬಂದರೆ ಅದು ತಪ್ಪಾಗುತ್ತದೆ. ಹಾಗಾಗಿ ಎಲ್ಲಾ ಪಕ್ಷದವರ ವಾದ – ಪ್ರತಿವಾದದ ಪ್ರಚಾರವನ್ನು ಗಮನಿಸಿ ಅಂತಿಮವಾಗಿ ಯೋಗ್ಯ ವ್ಯಕ್ತಿಗೆ ಮತವನ್ನು ಹಾಕಿ. ನೆನಪಿರಲಿ ಅಂತಿಮ ತೀರ್ಮಾನ ನಿಮ್ಮದಾಗಿರಬೇಕು...

– ಆನಂದ ಜೇವೂರ್, ಕಲಬುರಗಿ.

ಖಾಸಗಿ ಆಸ್ಪತ್ರೆಯ ಹಣದ ಸುಲಿಗೆಯ ಆಯಾಮಗಳು

ಮಾನ್ಯರೆ,
ಇತ್ತೀಚೆಗೆ ನಾನು ಸ್ವಕಾರ್ಯ ನಿಮಿತ್ತ ಮೈಸೂರಿನ ಕುವೆಂಪುನಗರದ ಒಂದು ಖಾಸಗಿ ಆಸ್ಪತ್ರೆಗೆ ಹೋಗಿದ್ದೆ. ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಅಲ್ಲಿಗೆ ಬಂದಿದ್ದ ರೋಗಿಗಳು ತಮ್ಮದೇ ಆದ ಧಾವಂತದಲ್ಲಿ ಕುಳಿತಿದ್ದರು. ಯಾರ ಮುಖದಲ್ಲಿಯೂ ಅಂತಹ ಕಳೆ ಇರಲಿಲ್ಲ. ಆಸ್ಪತ್ರೆಗೆ ಬಂದವರ ಮೊಗದಲ್ಲಿ ಕಳೆ ಹೇಗೆ ಎಂದು ನೀವು ಅಂದುಕೊಳ್ಳಬಹುದು, ಅವರು ಅಲ್ಲಿಯ ಬಿಲ್ ಚಿಂತೆಯಿಂದ ಹಾಗೆ ಕುಳಿತ್ತಿದ್ದಾರೆ ಎಂದು ತಕ್ಷಣವೇ ಅಂದಾಜಿಸಬಹುದು. ಆ ಆಸ್ಪತ್ರೆಯಲ್ಲಿ ನರರೋಗ ವಿಭಾಗ, ಮಾನಸಿಕ ಆರೋಗ್ಯ ವಿಭಾಗ, ದುಶ್ಚಟಗಳ ನಿವಾರಣಾ ವಿಭಾಗ ಮತ್ತು ಸಂತಾನೋತ್ಪತ್ತಿ ವಿಭಾಗ ಹೀಗೆ ಎಲ್ಲಾ ರೀತಿಯ ಸೌಲಭ್ಯಗಳು ಒಂದೇ ಸೂರಿನಡಿಯಲ್ಲಿವೆ. ಆ ಅನುಕೂಲಗಳನ್ನು ಒದಗಿಸಲು ಅವರು ಪಡೆಯುವ ಸಂಭಾವನೆಯ ಪಟ್ಟಿಯನ್ನು ನೋಡಿದರೆ ಹೆದರಿಕೆ ಶುರುವಾಗುತ್ತದೆ. ಪ್ರತಿಬಾರಿಯೂ ವೈದ್ಯರ ತಪಾಸಣೆಗೆ 200–300ರೂಪಾಯಿಗಳು. ಪ್ರತಿಬಾರಿಯೂ ಬಿಲ್‌ಗೆ ಸಂಸ್ಕರಣಾ ಶುಲ್ಕವು 30ರಿಂದ 50 ರೂಪಾಯಿ. ಖಾಯಿಲೆ ನಿಮಿತ್ತ ಅಡ್ಮಿಟ್ ಆದರಂತೂ ಮುಗಿಯಿತು. ಪ್ರತಿದಿನದ ಬೆಡ್ ಚಾರ್ಜ್, (general, semi delux, ac and ICU ಇವುಗಳಿಗೆ ಬೇರೇ ಬೇರೆ ರೀತಿಯ ಶುಲ್ಕ) ನರ್ಸಿಂಗ್ ಶುಲ್ಕ, ಕ್ಲೀನಿಂಗ್ ಶುಲ್ಕ, ನಿರ್ವಹಣಾ ಶುಲ್ಕ, ಹೀಗೆ ವಿವಿಧ ಬಗೆಯವು. ಎಲ್ಲದಕ್ಕಿಂತ ಹೆಚ್ಚಾಗಿ ಅವರದೇ ಆದ ಮೆಡಿಕಲ್ ಶಾಪ್ ಸಹ ಅಲ್ಲೇ ಇದೆ... ನಿಮಗೆ ಇಷ್ಟರಲ್ಲೇ ಎಲ್ಲವೂ ಅರ್ಥವಾಗಿದೆ ಎಂದು ಭಾವಿಸುತ್ತೇನೆ.
ಹಣ ತುಂಬಿಕೊಂಡು ಒಳಗೆ ಹೋದರೆ ಹೊರಗೆ ಬರುವಾಗ ಪೂರಾ ಖಾಲಿ ಖಾಲಿ... ಇನ್ನೊಂದು ಗಮನಾರ್ಹ ಅಂಶವೆಂದರೆ ಎಲ್ಲಾ ರೀತಿಯ ತಪಾಸಣೆಗೆ ಶುಲ್ಕವನ್ನು ಮೊದಲೇ ಪಾವತಿಸಿ ಬಿಲ್ ಕೊಟ್ಟರೆ ಮಾತ್ರ ಮುಂದಿನ ಕೆಲಸ ಆಗುವುದು. ಈ ಬಗೆಗೆ ಮೊದಲೇ ಅಲ್ಲಿರುವ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿರುತ್ತದೆ. ಇದು ನಾನು ಕಣ್ಣಾರೆ ಕಂಡ ಸತ್ಯ ಸಂಗತಿಯ ವಿವರ. ಇದೇ ರೀತಿಯಲ್ಲಿ ಬೇರೆ ಬೇರೆ ಖಾಸಗಿ ಆಸ್ಪತ್ರೆಗಳಲ್ಲಿ ಇನ್ನೂ ತರಹೇವಾರಿ ಕಥೆಗಳಿವೆ... ಇವುಗಳಿಗೆ ಯಾವ ಬಗೆಯಲ್ಲೂ ಕಡಿವಾಣ ಇಲ್ಲವೇನೋ ಗೊತ್ತಿಲ್ಲ. ಎಲ್ಲದಕ್ಕೂ ಕಾನೂನಾತ್ಮಕ ಎಂಬುದನ್ನು ತಿಳಿಸಿಕೊಡುವ ಬಿಂಬಿಸುವ ಸಾಧನಗಳು ಇವರ ಬಳಿ ಈಗಾಗಲೇ ಸಿದ್ಧವಿದ್ದವೇನೋ ಯಾರು ಬಲ್ಲವರು... ಖಾಸಗಿ ಆಸ್ಪತ್ರೆಗಳ ಮತ್ತು ಅವುಗಳ ಮೆಡಿಕಲ್ ಮಾಫಿಯಾ ಸಾಮಾನ್ಯ ಜನರ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿರುವುದಂತೂ ಸುಳ್ಳಲ್ಲ.

– ಎ.ಎಸ್. ಗೋವಿಂದೇಗೌಡ, ಅರೇನಹಳ್ಳಿ,
ಪಿರಿಯಾಪಟ್ಟಣ ತಾಲೂಕು ಮೈಸೂರು ಜಿಲ್ಲೆ–571108

ಮತವಲ್ಲವೋ ಅದು ನಮ್ಮ ಮನೆಮಗಳು!

ಮಾನ್ಯರೆ,

ನಡೆದಿದೆ ಹಬ್ಬ... ಹಬ್ಬ... ನಾಡಿಗೆ ಚುನಾವಣೆಯ ಹಬ್ಬ,
ಕಾಲಿಗೆ ಬಿದ್ದು, ಕೈಮುಗಿದು ಬಿರುಸಿನ ಮನೆ–ಮನೆ ಪ್ರಚಾರ,
ಕುರಿ, ಕೋಳಿಗಳ ಕಡಿದು ಬಾಡೂಟದ ಪರಿಷೆ, ನೀಡುವರು
ಭರವಸೆ; ಕೊಡುವೆ ಉಚಿತ ಎಲ್ಲಾ, ನೀಡಿ ನಿಮ್ಮ ಮತ,
ಮಠ ಮಂದಿರಗಳೆಲ್ಲ ಆಶೀರ್ವದಿಸಿವೆ ಬಂದವರಿಗೆಲ್ಲ!,
ಯಾರೇ ಗೆಲ್ಲಲಿ ಮತ್ತೇ ಭೇಟಿ ಮಠ ಮಂದಿರಕೆ ಏಕೆ?!,
ಕಾಂಚಾಣ ಜಣಜಣದ ಈ ಆಟದಲ್ಲಿ ನಿಂತವರೆಲ್ಲರೂ?,
ಅವರೇ... ಅವರೇ... ಯಾರಿಗೇ ಮತ(ದಾನ) ಮಾರಿದರೂ
ತಪ್ಪದು ನಾವೇ ದುಡಿದು ನಮ್ಮ ಅನ್ನವ ತಿನ್ನುವುದನ್ನು,
ಎಲ್ಲರೂ ಒಂದೇ ಮರುಗದೆ ಕೈ ಚಾಚದೇ ಚಲಾಯಿಸಿ,
ನೀಡುವ ಮತ ಮನೆಮಗಳಂತೆ ಸಜ್ಜನರಿಗೆ ಕೊಟ್ಟರೆ
ಮಗಳು ಬಾಳಿಯಾಳು ಸುಖಸಂತೋಷದಿ, ಯೋಚಿಸಿ!.


– ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ಭ್ರಷ್ಟಾಚಾರ ಮುಕ್ತ ಸರ್ಕಾರ ಸಾಧ್ಯವೇ...?



“ ಬಜೆಟ್‌ನಲ್ಲಿ ಯೋಜನೆಗಳಿಗೆ ಘೋಷಣೆಯಾಗುವ ನೂರಾರು ಕೋಟಿ ರೂ.ಗಳು, ಅವುಗಳು ಅನುಷ್ಠಾನವಾಗುವ ಹೊತ್ತಿಗೆ ಹತ್ತಾರು ಕೋಟಿಗೆ ಇಳಿದಿರುತ್ತದೆ. ಕಮಿಷನ್ ವಿಚಾರದಲ್ಲಿ ಯಾವ ಪಕ್ಷದ ನಾಯಕರುಗಳು ಸಾಚಾ ಅಲ್ಲ. ಕೆಲವು ನಾಯಕರ ಬಂಡವಾಳ ಬಯಲಾಗಿದೆ, ಮತ್ತೆ ಕೆಲವರದು ರಹಸ್ಯವಾಗಿದೆ ಅಷ್ಟೆ. ಇಂದು ರಾಜಕಾರಣಿಗಳು ಘೋಷಿಸುವ ಆಸ್ತಿ ಕೇವಲ ನೆಪ ಮಾತ್ರ. ಅವರ ಬೇನಾಮಿ ಆಸ್ತಿಗೆ ಲೆಕ್ಕವಿಲ್ಲ. ಜನನಾಯಕರ ಕಟ್ಟಾ ಬೆಂಬಲಿಗ, ಕಾರ್ಯಕರ್ತರು ಎನ್ನುವವರೇ ಇಂದು ಕೋಟಿ ಕುಳಗಳಾಗುತ್ತಿದ್ದಾರೆ. ಇಂದು ಜನಸಾಮಾನ್ಯ ಪ್ರಾಮಾಣಿಕವಾದ ತನ್ನ ದುಡಿಮೆಯಿಂದ ಒಂದು ನಿವೇಶನ ಖರೀದಿಸಿ ಮನೆ ಕಟ್ಟಿಕೊಳ್ಳಲು ಹರಸಾಹಸಪಡಬೇಕು. ಆದರೆ ರಾಜಕಾರಣಿಗಳ ಬೇನಾಮಿ ಜಮೀನುಗಳು ನಗರ ಹಾಗೂ ಪಟ್ಟಣ ಪ್ರದೇಶಗಳ ಸುತ್ತ ನೂರಾರು ಎಕರೆಗಳಷ್ಟಿವೆ. ಇವರಿಂದಲೇ ರಿಯಲ್ ಎಸ್ಟೇಟ್ ಒಂದು ಉದ್ಯಮವಾಗಿ ಉಳಿಯದೆ ಒಂದು ದಂಧೆಯಾಗಿದ್ದು ಎನ್ನಬಹುದು. ರಾಜಕಾರಣಿಗಳ ಬೇನಾಮಿ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಹರಾಜು ಹಾಕಿದರೆ ರಾಜ್ಯದ ಸಾಲ ತೀರಿಸುವುದು ಅಷ್ಟು ಕಷ್ಟವೇನಲ್ಲ.

ನಮ್ಮ ದೇಶದಲ್ಲಿನ ಪ್ರಜಾಪ್ರಭುತ್ವ ವ್ಯವಸ್ಥೆಯು ಜಗತ್ತಿಗೇ ಮಾದರಿಯಾದದ್ದು. ಪ್ರಜೆಗಳೇ ಪ್ರಭುಗಳಾಗಲು ಅವಕಾಶವಿರುವ ಅಪೂರ್ವ ಅವಕಾಶ ನಮ್ಮ ಸಂವಿಧಾನ ವ್ಯವಸ್ಥೆಯಲ್ಲಿರುವುದು ವಿಶೇಷ ಹಾಗೂ ಹೆಮ್ಮೆಯ ಸಂಗತಿ. ಇಲ್ಲಿನ ಶಾಸಕಾಂಗ, ನ್ಯಾಯಾಂಗ ಹಾಗೂ ಕಾರ್ಯಾಂಗಗಳು ದೇಶದ ಪ್ರಜೆಗಳ ಹಿತ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸಬೇಕಾದುದು ಧರ್ಮ. ಶಾಸಕಾಂಗ ವ್ಯವಸ್ಥೆಯಲ್ಲಿನ ಪ್ರತಿನಿಧಿಗಳು ಚುನಾವಣೆ ಮೂಲಕ ಆಯ್ಕೆಯಾಗಿ ಜನಸೇವೆಯನ್ನು ಮಾಡಬೇಕಾದುದು ರಾಜನೀತಿ. ಆದರೆ ರಾಜ್ಯದ ವಿಧಾನ ಸಭಾ ಚುನಾವಣೆ ಪರ್ವದಲ್ಲಿ ನಡೆಯುತ್ತಿರುವ ಚಟುವಟಿಕೆಗಳು ಹಾಗೂ ವಿದ್ಯಮಾನಗಳನ್ನು ಗಮನಿಸಿದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇಂದು ಅಸ್ತಿತ್ವದಲ್ಲಿದೆಯೇ? ಎಂಬ ಅನುಮಾನ ಮೂಡದೇ ಇರುವುದಿಲ್ಲ. ಸಮಾನತೆ ಎಂಬುದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಬೀಜಮಂತ್ರ. ಎಲ್ಲಿದೆ ಸಮಾನತೆ ಎಲ್ಲೆಡೆ ಅಸಾಮಾನತೆ, ಅನೀತಿ, ಅಧರ್ಮ, ಅಕ್ರಮ, ಅರಾಜಕತೆ ತಾಂಡವವಾಡುತ್ತಿದೆ.

ಚುನಾವಣೆಯಲ್ಲಿ ಉಮೇದುವಾರಿಕೆ ಸಲ್ಲಿಸಿರುವ ಕೆಲವು ಜನಪ್ರತಿನಿಧಿಗಳ ಹಿನ್ನೆಲೆ ಹಾಗೂ ನಡವಳಿಕೆಗಳನ್ನು, ಗಮನಿಸಿದಲ್ಲಿ ನಮ್ಮ ದೇಶವನ್ನು ಸಂರಕ್ಷಿಸುವ ಸಮಾಜ ಸೇವಕರು ಅಧಿಕಾರದ ಚುಕ್ಕಾಣಿ ಹಿಡಿಯದೆ, ದೇಶವನ್ನು ಹಾಳುಮಾಡುವ ರಾಕ್ಷಸರ ಕೈಗೆ ಕೊಡಬೇಕಾದ ಅನಿವಾರ್ಯತೆ ಉಂಟಾಗಿರುವುದು ವಿಪರ್ಯಾಸ. ಚುನಾವಣಾ ರ್‍ಯಾಲಿಗಳು, ಸಮಾವೇಶಗಳಿಗೆ ಖರ್ಚಾಗುವ ಕೋಟಿ ಕೋಟಿ ರೂಪಾಯಿಗಳನ್ನು ಎಲ್ಲಿಂದ ತರಲು ಸಾಧ್ಯ? ಯಾರೊಬ್ಬರು ತಮ್ಮ ಮನೆಯ ಹಣವನ್ನು ಖರ್ಚು ಮಾಡುವುದಿಲ್ಲ, ದೇಶದ ಪ್ರಜೆಗಳ ದುಡ್ಡನ್ನು, ದೋಚಿ ಇವುಗಳನ್ನು ರಾಜಾರೋಷವಾಗಿ ಖರ್ಚು ಮಾಡುತ್ತಾರೆ. ಇಂದು ರಾಜಕಾರಣ ಸಮಾಜಸೇವಾ ವಲಯವಾಗಿರದೆ ಒಂದು ಉದ್ಯಮವಾಗಿ ಬೆಳೆದಿದೆ. ಹಣ ಹೂಡಿಕೆ ಮಾಡಿ ಸಾವಿರಾರು ಪಟ್ಟು ಸುಲಭವಾಗಿ ದುಡಿಯಬಹುದಾದ ಕ್ಷೇತ್ರವಾಗಿದೆ. ಇವುಗಳನ್ನು ಕಂಡರೂ ಏನನ್ನೂ ಮಾಡಲಾಗದೆ ಕೈಕಟ್ಟಿ ಕೂರಬೇಕಾದ ಪರಿಸ್ಥಿತಿ ಜನಸಾಮಾನ್ಯನಿಗೆ ಒದಗಿ ಬಂದಿರುವುದು ದುರದೃಷ್ಟಕರ.

ಇಂದು ಚುನಾವಣೆ ಸಂದರ್ಭದಲ್ಲಿ ಮತಯಾಚನೆ ಮಾಡುತ್ತಾ ಮನೆ ಮುಂದೆ ಭಿಕ್ಷುಕರಂತೆ ಬರುವ ಉಮೇದುವಾರರು, ಮತದಾರ ಪ್ರಭುಗಳ ಮತಭಿಕ್ಷೆಯಿಂದ ಅವರು ಆಯ್ಕೆಯಾಗಿ ಅಧಿಕಾರ ಗಿಟ್ಟಿಸುವುದು. ಆದರೆ ಮತದಾರರ ದೌರ್ಬಲ್ಯವನ್ನು ಎನ್‌ಕ್ಯಾಶ್ ಮಾಡಿಕೊಳ್ಳುವ ಸ್ಪರ್ಧಿಗಳು ಮತದಾರರಿಗೆ ಕಾಸು ಬಿಸಾಕಿ, ಮತದಾರ ಪ್ರಭುವನ್ನೇ ಭಿಕ್ಷುಕರನ್ನಾಗಿ ಮಾಡುತ್ತಿರುವುದು ಮಾತ್ರ ವಿಡಂಭನೆಯಾಗಿದೆ. ಬಿಡಿಗಾಸಿಗೆ ತಮ್ಮ ಮತ ಮಾರಿಕೊಂಡು, ನಂತರ ಆಯ್ಕೆಯಾದ ಜನಸೇವಕನ ಮನೆ ಮುಂದೆ ಮತದಾರ ಸೇವಕನಂತೆ ಕೈಕಟ್ಟಿ ನಿಲ್ಲಬೇಕಾದುದು ಈ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಒಂದು ದೃಷ್ಟಾಂತವನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ. ಒಮ್ಮೆ ಬಾಬಾ ಸಾಹೇಬರು ಖುಷಿಯಿಂದ ಮುಗುಳುನಗುತ್ತಾ ಸಂಸತ್ ಭವನದಿಂದ ಹೊರಗೆ ಬರುತ್ತಿದ್ದಾಗ ಅವರನ್ನು ಕಂಡ ಆಚಾರ್ಯ ಕೃಪಲಾನಿ (ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದವರು) ಅವರು ಬಾಬಾ ಸಾಹೇಬರನ್ನು ಕಂಡು ಮಾತನಾಡುತ್ತಾರೆ. 'ಅಂಬೇಡ್ಕರ್ ಅವರೇ ಇವತ್ತು ನೀವು ಬಹಳ ಖುಷಿಯಾಗಿರುವಿರಿ, ಏನು ಸಮಾಚಾರ' ಎನ್ನುತ್ತಾರೆ, ಆಗ ಬಾಬಾ ಸಾಹೇಬರು 'ಮೊದಲು ರಾಣಿಯ ಹೊಟ್ಟೆಯಿಂದಲೇ ರಾಜ ಹುಟ್ಟುತ್ತಿದ್ದ, ಆದರೆ ಈಗ ನಾನು ಈ ವ್ಯವಸ್ಥೆಯನ್ನು ಬದಲಿಸಿದ್ದೇನೆ. ಇನ್ನು ಮುಂದೆ ರಾಜನು ರಾಣಿಯ ಹೊಟ್ಟೆಯಿಂದ ಅಲ್ಲ, ಮತದಾನದ ಪೆಟ್ಟಿಗೆಯಲ್ಲಿ ಹುಟ್ಟುತ್ತಾನೆ, ಅದಕ್ಕಾಗಿ ಇಷ್ಟು ಖುಷಿ' ಎನ್ನುತ್ತಾರೆ. ಆಗ ಕೃಪಲಾನಿ ಅವರು ಹಾಗಾದರೆ ನಿಮ್ಮ ಖುಷಿ ಹೆಚ್ಚು ದಿನ ಉಳಿಯಲಾರದು. ನಿಮ್ಮ ಜನ ಬಡವರು, ಆಸೆಕೋರರು, ಅವರು ತಮ್ಮ ಅಮೂಲ್ಯವಾದ ಮತಗಳನ್ನು ಬಿಡಿಗಾಸಿಗೆ ಮಾರಿಕೊಳ್ಳುತ್ತಾರೆ. ಅವರ ಮತಗಳನ್ನು ರಾಜಕಾರಣಿಗಳು ಖರೀದಿ ಮಾಡಿ ಸರಕಾರ ಕಟ್ಟುತ್ತಾರೆ. ಆಗ ನೀವು ಏನೂ ಮಾಡಲು ಸಾಧ್ಯವಿಲ್ಲ ಎನ್ನುತ್ತಾರೆ. ಅದಕ್ಕೆ ಬಾಬಾ ಸಾಹೇಬರು ನನ್ನ ಜನ ಬಡವರು, ಹಸಿದವರು ನಿಜ. ನೀವು ಅವರನ್ನು ಖರೀದಿ ಮಾಡಿ ಸರಕಾರ ಕಟ್ಟಿಕೊಳ್ಳುತ್ತೀರಿ ಎಂಬುದನ್ನು ನಾನು ಬಲ್ಲೆ. ಆದರೆ ಯಾವ ದಿನ ನನ್ನ ಜನರಿಗೆ ತಮ್ಮ ಮತದ ಮಹತ್ವ ಗೊತ್ತಾಗುವುದೋ ಆ ದಿನ ನಿಮ್ಮಷ್ಟು ದೊಡ್ಡ ಭಿಕ್ಷುಕರು ಮತ್ತಾರು ಸಿಗಲಾರರು ಎನ್ನುತ್ತಾರೆ. ಬಾಬಾ ಸಾಹೇಬರು ಮತದಾರರನ್ನೇ ಪ್ರಭುಗಳನ್ನಾಗಿ ಮಾಡಲು ಬಯಸಿದ್ದರೂ ದುರದೃಷ್ಟವಶಾತ್ ಇಂದಿಗೂ ಭಿಕ್ಷುಕರಾಗಿ ಉಳಿದಿರುವುದು ಈ ದೇಶದ ಪ್ರಜೆಗಳ ಮನಸ್ಥಿತಿ, ಪರಿಸ್ಥಿತಿಯನ್ನು ಬಿಂಬಿಸುತ್ತದೆ.

ಮತದಾರರು ಎಚ್ಚೆತ್ತುಕೊಳ್ಳಬೇಕು, ಯೋಗ್ಯ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕು ಎಂಬ ಘೋಷಣೆಯನ್ನು ಅನೇಕ ಮುಖಂಡರು, ಬುದ್ಧಿಜೀವಿಗಳು ಹೇಳುತ್ತಲೇ ಬಂದಿದ್ದಾರೆ. ಆದರೆ ಚುನಾವಣೆ ಕಣದಲ್ಲಿ ಇರುವವರಲ್ಲಿ ಯೋಗ್ಯರು ಯಾರು? ಬಹುಪಾಲು ಎಲ್ಲರೂ ಅಯೋಗ್ಯರೆ. ಕಡಿಮೆ ಅಯೋಗ್ಯನನ್ನು ಆಯ್ಕೆ ಮಾಡಬೇಕು ಅಷ್ಟೆ ಏಕೆಂದರೆ ಇಂದು ಸಜ್ಜನರು, ಪ್ರಾಮಾಣಿಕರು, ಶುದ್ಧ ಹಸ್ತರು, ನಿಜವಾದ ಸಮಾಜವಾದದ ಹಿನ್ನೆಲೆ ಉಳ್ಳವರು ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲಲು ಸಾಧ್ಯವಿಲ್ಲ. ಚುನಾವಣೆ ಇಂದು ಸಜ್ಜನಿಕೆಯ ಕ್ಷೇತ್ರವಲ್ಲ, ಇಲ್ಲಿ ಜಾತಿಬಲ, ಹಣಬಲ, ತೋಳ್ಬಲ ಈ ಎಲ್ಲಾ ಹಿನ್ನೆಲೆಯನ್ನು ಹೊಂದಿರುತ್ತದೆ. ಆ ಕಾರಣಕ್ಕೆ ಏನೋ ಯಾರಾದರೂ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದರೆ, ರಾಜಕೀಯಕ್ಕೆ ಏರಿದರು ಎಂದು ಎಲ್ಲಿಯೂ ಬಳಸುವುದಿಲ್ಲ, ರಾಜಕೀಯಕ್ಕೆ ಇಳಿದರು ಎಂದು ಬಳಸುತ್ತಾರೆ. ಅಂದರೆ ಅದು ಇಂದಿನ ರಾಜಕಾರಣದ ಕೆಳಮಟ್ಟವನ್ನು ತಿಳಿಸುತ್ತದೆ.

ಚುನಾವಣೆಗೆ ಸ್ಪರ್ಧಿಸುತ್ತಿರುವ ಉಮೇದುವಾರರ ಆಸ್ತಿ ಘೋಷಣೆಯನ್ನು ಗಮನಿಸಿದಲ್ಲಿ ಅನೇಕ ಪ್ರಶ್ನೆಗಳು ಉದ್ಭವವಾಗದೇ ಇರದು. ಹತ್ತು ವರ್ಷಗಳ ಹಿಂದೆ ಲಕ್ಷಗಳಲ್ಲಿ ಇದ್ದ ಆಸ್ತಿ ದಿಢೀರನೇ ಕೋಟಿಗಳಿಗೆ ಏರಿಕೆಯಾಗಿರುವುದು, ಹೆಂಡತಿ, ಮಕ್ಕಳ ಹೆಸರಿನಲ್ಲಿ ಕೋಟಿಗಟ್ಟಲೆ ಆಸ್ತಿ ಇರುವುದು ಎಲ್ಲರ ಹುಬ್ಬೇರಿಸುವಂತೆ ಮಾಡುತ್ತದೆ. ಅದು ಹೇಗೆ ಸಾಧ್ಯ? ಒಬ್ಬ ರೈತನ ಮಗ ಹತ್ತಾರು ವರ್ಷಗಳಲ್ಲಿ ನೂರಾರು ಕೋಟಿಗಳ ಒಡೆಯನಾಗಲು ಹೇಗೆ ಸಾಧ್ಯ? ಕೈಯಲ್ಲಿನ ಹುಣ್ಣಿಗೆ ಕನ್ನಡಿ ಅಗತ್ಯವಿಲ್ಲ? ಎಂಬ ಮಾತಿನಂತೆ ಅವರ ಆಸ್ತಿ ಗಳಿಕೆಗೆ ಸರ್ಕಾರ ಆಡಳಿತ ಯಂತ್ರದ ದುರ್ಬಳಕೆ, ಕಮಿಷನ್ ದಂಧೆ, ವರ್ಗಾವಣೆ ದಂಧೆ, ಭೂ ಮಾಫಿಯಾ... ಹೀಗೆ ಅನೇಕ ಅನೀತಿಗಳ ಪಟ್ಟಿಯನ್ನು ಮಾಡುತ್ತಲೇ ಹೋಗಬಹುದು. ಇಂತಹ ನಾಯಕರಿಂದ ಭ್ರಷ್ಟಾಚಾರ ಮುಕ್ತ ಸರ್ಕಾರ ನಿರೀಕ್ಷಿಸಲು ಸಾಧ್ಯವೇ?

ಬಜೆಟ್‌ನಲ್ಲಿ ಯೋಜನೆಗಳಿಗೆ ಘೋಷಣೆಯಾಗುವ ನೂರಾರು ಕೋಟಿ ರೂ.ಗಳು, ಅವುಗಳು ಅನುಷ್ಠಾನವಾಗುವ ಹೊತ್ತಿಗೆ ಹತ್ತಾರು ಕೋಟಿಗೆ ಇಳಿದಿರುತ್ತದೆ. ಆಡಳಿತ ಯಂತ್ರದಿಂದ ಪೈಪ್ ಮೂಲಕ ಹೊರಡುವ ಅನುದಾನ ಪೈಪ್‌ನ ಕೊನೆ ಮುಟ್ಟುವ ಹೊತ್ತಿಗೆ ಹತ್ತಾರು ಕಡೆ ಸೋರಿಕೆಯಾಗಿರುತ್ತದೆ. ದೇಶದ ಮಾಜಿ ಪ್ರಧಾನಿಯೊಬ್ಬರು ಸರ್ಕಾರದ ಯೋಜನೆಗಳು ಜನಸಾಮಾನ್ಯನಿಗೆ ಮುಟ್ಟುವ ಹೊತ್ತಿಗೆ ಕೇವಲ ಶೇ.15 ಆಗಿರುತ್ತದೆ ಎಂದು ಬಹಳ ಹಿಂದೆಯೇ ಹೇಳಿದ್ದು ಭ್ರಷ್ಟಾಚಾರ ವ್ಯವಸ್ಥೆಯನ್ನು ಅನಾವರಣಗೊಳಿಸುತ್ತದೆ. ಇಂದು ಕಮಿಷನ್ ಎಂಬುದು ಬಹು ಚರ್ಚಿತ ವಿಷಯ. ಕಮಿಷನ್ ವಿಚಾರದಲ್ಲಿ ಯಾವ ಪಕ್ಷದ ನಾಯಕರೂ ಸಾಚಾ ಅಲ್ಲ. ಕೆಲವು ನಾಯಕರ ಬಂಡವಾಳ ಬಯಲಾಗಿದೆ. ಮತ್ತೆ ಕೆಲವರದು ರಹಸ್ಯವಾಗಿದೆ ಅಷ್ಟೆ. ಇಂದು ರಾಜಕಾರಣಿಗಳು ಘೋಷಿಸುವ ಆಸ್ತಿ ಕೇವಲ ನೆಪ ಮಾತ್ರ. ಅವರ ಬೇನಾಮಿ ಆಸ್ತಿಗೆ ಲೆಕ್ಕವಿಲ್ಲ. ಜನನಾಯಕರ ಕಟ್ಟಾ ಬೆಂಬಲಿಗ, ಕಾರ್ಯಕರ್ತರು ಎನ್ನುವವರೇ ಇಂದು ಕೋಟಿ ಕುಳಗಳಾಗುತ್ತಿದ್ದಾರೆ. ಕೆಲವು ಗ್ರಾಮ ಪಂಚಾಯಿತಿ ಸದಸ್ಯರು ಇಂದು ಕಾರಿನಲ್ಲಿ ತಿರುಗಾಡುತ್ತಾರೆ ಎಂದರೆ ಅದು ಭ್ರಷ್ಟಾಚಾರದ ಮಟ್ಟ ಎಷ್ಟಿರಬಹುದು ಊಹಿಸಿ? ಇಂದು ಜನ ಸಾಮಾನ್ಯ ಪ್ರಾಮಾಣಿಕವಾದ ತನ್ನ ದುಡಿಮೆಯಿಂದ ಒಂದು ನಿವೇಶನ ಖರೀದಿಸಿ ಮನೆ ಕಟ್ಟಿಕೊಳ್ಳಲು ಹರಸಾಹಸಪಡಬೇಕು. ಆದರೆ ರಾಜಕಾರಣಿಗಳ ಬೇನಾಮಿ ಜಮೀನುಗಳು, ಆಸ್ತಿಗಳು ನಗರ ಹಾಗೂ ಪಟ್ಟಣ ಪ್ರದೇಶಗಳ ಸುತ್ತ ನೂರಾರು ಎಕರೆಗಳಷ್ಟಿವೆ. ಇವರಿಂದಲೇ ರಿಯಲ್ ಎಸ್ಟೇಟ್ ಒಂದು ಉದ್ಯಮವಾಗದೆ ದಂಧೆಯಾಗಿದ್ದು ಎನ್ನಬಹುದು. ರಾಜಕಾರಣಿಗಳ ಬೇನಾಮಿ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಹರಾಜು ಹಾಕಿದರೆ ದೇಶದ ಸಾಲ ತೀರಿಸುವುದು ಅಷ್ಟು ಕಷ್ಟವಾಗುವುದಿಲ್ಲ.

ಜನಪ್ರತಿನಿಧಿಗಳು ಭ್ರಷ್ಟರಾಗಲು ಜನಸಾಮಾನ್ಯರು ಪರೋಕ್ಷವಾಗಿ ಕಾರಣರಾಗುತ್ತಿದ್ದಾರೆ. ಎಲ್ಲಿ ಪ್ರಶ್ನಿಸಬೇಕು ಅಲ್ಲಿ ಪ್ರಶ್ನಿಸುವುದಿಲ್ಲ. ಜನರ ಮನೋಭಾವವು ಸಹ ಬದಲಾಗಿದೆ. ಅವನು ಎಷ್ಟಾದರೂ ತಿನ್ನಲಿ ನಮಗೆ ಕೊಡಬೇಕಾದುದ್ದನ್ನು ಕೊಟ್ಟುಬಿಡಲಿ ಎನ್ನುತ್ತಾರೆ. ಆ ಕಾರಣಕ್ಕೆ ಹೊಸದಾಗಿ ಮಾಡಿದ ರಸ್ತೆ ಕೆಲವೇ ದಿನಗಳಲ್ಲಿ ಕಿತ್ತು ಬರುತ್ತದೆ, ಸರ್ಕಾರಿ ಹೊಸ ಕಟ್ಟಡಗಳು ಸೋರುತ್ತವೆ. ಸಾರ್ವಜನಿಕ ಆಸ್ತಿಗೆ ಧಕ್ಕೆಯಾದರೂ ಕೇಳುವವರಿಲ್ಲ. ತಾವು ಆರಿಸಿದ ನಾಯಕ ತಮ್ಮ ಸೇವೆಗೆ ನೇಮಕವಾದವನು ಎಂದು ಭಾವಿಸುವುದಿಲ್ಲ. ಹಿಂದೆ ರಾಜರು ದಬ್ಬಾಳಿಕೆ ಮಾಡುತ್ತಿದ್ದರೆ, ಇಂದು ಆಯ್ಕೆಯಾದ ಪ್ರತಿನಿಧಿಗಳೇ ದಬ್ಬಾಳಿಕೆ ಮಾಡುತ್ತಿದ್ದಾರೆ. ಮನೆಬಾಗಿಲಿಗೆ ಬಂದು ಮತಯಾಚಿಸುವ ಆತ ಜನರ ಕೆಲಸ ಆಗಬೇಕು ಎಂದಾಗ ಕ್ಷೇತ್ರಕ್ಕೆ ಭೇಟಿ ಕೊಡುವುದೇ ಇಲ್ಲ. ಎಷ್ಟೋ ಜನಪ್ರತಿನಿಧಿಗಳು ತಮ್ಮ ಕ್ಷೇತ್ರದಿಂದ ಆಯ್ಕೆಯಾಗಿ ಹೋದ ಮೇಲೆ ರಾಜಧಾನಿಯಲ್ಲೇ ಠಿಕಾಣಿ ಹೂಡುತ್ತಾರೆ. ಜನರ ಕಣ್ಣಿಗೆ ಕಾಣೆಯಾಗಿರುತ್ತಾರೆ. ಮತ್ತೆ ಪ್ರತ್ಯಕ್ಷವಾಗುವುದು ಮತ್ತೊಂದು ಚುನಾವಣೆ ಸಂದರ್ಭದಲ್ಲಿ ಮಾತ್ರ.

ಚುನಾವಣೆ ಘೋಷಣೆಗೂ ಮೊದಲು ಕುಟುಕು ಕಾರ್ಯಾಚರಣೆ ಮಾಡಿದ ಖಾಸಗಿ ಸುದ್ದಿವಾಹಿನಿ ಒಂದರಲ್ಲಿ ಅನೇಕ ಜನ ಶಾಸಕರು ಲಂಚಗುಳಿತನ ಆಡಿಯೋ–ವಿಡೀಯೋ ಸಹಿತ ಇಡೀ ದೇಶದಲ್ಲಿ ಪ್ರಸಾರವಾಯಿತು. ಕಾಮಗಾರಿಗಳಿಗೆ ನೇರವಾಗಿ ಲಕ್ಷಗಟ್ಟಲೆ ಕಮಿಷನ್ ಕೇಳಿದ ಜನಪ್ರತಿನಿಧಿಗಳು ಎಲ್ಲಾ ಪಕ್ಷಗಳಿಗೂ ಸೇರಿದವರಾಗಿದ್ದರು. ಅವರಲ್ಲಿ ಅನೇಕರು ಇಂದು ಚುನಾವಣಾ ಕಣದಲ್ಲಿದ್ದಾರೆ. ಬಹುತೇಕರು ಮತ್ತೆ ಆರಿಸಿ ಬಂದು ಅಧಿಕಾರ ಗಿಟ್ಟಿಸುತ್ತಾರೆ. ಮತದಾರ ಸೂಕ್ಷ್ಮ ಸಂವೇದನೆ ಕಳೆದುಕೊಂಡು ತಮ್ಮ ಜಾತಿಯವ, ತಮ್ಮ ಊರಿನವ, ತಮ್ಮ ಪಕ್ಷದವ ಎಂದು ಏನೇನೋ ನೆಪ ಹೇಳಿ ಮತ್ತೆ ಅವರನ್ನು ಆರಿಸುತ್ತಿರುವುದು ದೇಶಕ್ಕೆ ಮಾರಕವಾಗುವುದರಲ್ಲಿ ಅನುಮಾನವಿಲ್ಲ. ಜಾತಿ ಪ್ರೇಮದ ಕುರಿತು ಚಿತ್ರ ನಿರ್ದೇಶಕ ಯೋಗರಾಜ್ ಭಟ್ ಹೇಳಿರುವ ಒಂದು ಕುಹಕದ ಮಾತು ಇಲ್ಲಿ ಉಲ್ಲೇಖನೀಯ. 'ಕಾಡು ಕ್ರಮೇಣ ಕ್ಷೀಣಿಸುತ್ತಿತ್ತು. ಆದರೂ ಕೂಡ ಕಾಡಿನ ಮರಗಳು ಕೊಡಲಿಗೇ ಓಟ್ ಹಾಕುತ್ತಿದ್ದವು. ಏಕೆಂದರೆ ಕೊಡಲಿಯ ಹಿಂದಿರುವ ಕಾಮು (ಕಟ್ಟಿಗೆಯ ಹಿಡಿಕೆ) ತಮ್ಮ ಜಾತಿಯವನು ಎಂದು ಅವು ನಂಬಿದ್ದವು?. ಮತದಾರರೇ ಯೋಚಿಸಿ' ಮೈಮರೆತರೆ ಮತ್ತೆ ಐದು ವರ್ಷಗಳ ಕಾಲ ಮೈಪರಚಿಕೊಳ್ಳಬೇಕಾಗುತ್ತದೆ ! ಏನಂತೀರಿ?

ಪದ ತಾಂಬೂಲ :

ದೇಶದ ಜಿ.ಡಿ.ಪಿ. ವೃದ್ಧಿಸಲು ಆಯ್ಕೆಯಾದವರು ತಮ್ಮ ಕುಟುಂಬದ ಆಸ್ತಿ ವೃದ್ಧಿಸಿಕೊಳ್ಳುವರು.

ಶ್ರೀ ಶಂಕರಾಚಾರ್ಯರು ಜಗತ್ತು ಕಂಡ ಮಹಾದಾರ್ಶನಿಕರಲ್ಲಿ ಅಗ್ರಗಣ್ಯರು

ಭಾರತೀ ಯೋಗಧಾಮ ಪ್ರಾಂಶುಪಾಲ ವಿದ್ವಾನ್ ಗಣಪತಿ ಭಟ್

ಮೈಸೂರು, ಏ.30– ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ ಸಂಸ್ಕೃತ ವಿಭಾಗದ ವತಿಯಿಂದ ರಾಷ್ಟ್ರಿಯ ದಾರ್ಶನಿಕರ ದಿನಾಚರಣೆಯ ಅಂಗವಾಗಿ ಶಂಕರಾಚಾರ್ಯರ ಜೀವನ ಮತ್ತು ತತ್ವಸಂದೇಶಗಳು ವಿಷಯ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಭಾರತೀ ಯೋಗಧಾಮ ಪ್ರಾಂಶುಪಾಲ ವಿದ್ವಾನ್ ಗಣಪತಿ ಭಟ್ ತಮ್ಮ ಉಪನ್ಯಾಸದಲ್ಲಿ ಶ್ರೀ ಶಂಕರಾಚಾರ್ಯರು ಜಗತ್ತು ಕಂಡ ಮಹಾದಾರ್ಶನಿಕರಲ್ಲಿ ಅಗ್ರಗಣ್ಯರೆನಿಸಿದ್ದು, ಕರ್ಮವೇ ಪ್ರಧಾನವೆಂಬ ಕಾಲಘಟ್ಟದಲ್ಲಿ ಅದ್ವೈತ ಸಿದ್ಧಾಂತದ ಬೆಳಕನ್ನು ನೀಡಿದರು.

ತಮ್ಮ ಎಂಟನೇ ವಯಸ್ಸಿನಲ್ಲಿಯೇ ನಾಲ್ಕೂ ವೇದಗಳನ್ನು ಅಧ್ಯಯನ ಮಾಡಿದ ಭಾರತೀಯ ಶ್ರೇಷ್ಠ ದಾರ್ಶನಿಕ, ಮತ್ತು ತಮ್ಮ ಹನ್ನೆರಡನೇಯ ವಯಸ್ಸಿನೊಳಗೆ ಸಕಲ ಶಾಸ್ತ್ರಗಳನ್ನು ಅಭ್ಯಸಿಸಿ, ತಮ್ಮ ಹದಿನಾರನೇಯ ವಯಸ್ಸಿನೊಳಗೆ ಪ್ರಸ್ಥಾನತ್ರಯಗಳಿಗೆ ಭಾಷ್ಯವನ್ನು ಬರೆದು ಅದ್ವೈತಸಿದ್ಧಾಂತವನ್ನು ವಿಶ್ವವಿಖ್ಯಾತಗೊಳಿಸಿದರು.

ಸಕಲ ವೇದಶಾಸ್ತ್ರಗಳನ್ನು ಒಂದೇ ಓದಿಗೆ ಅರ್ಜಿಸಿಕೊಳ್ಳುವ ಪ್ರತಿಭೆ ಶ್ರೀ ಶಂಕರಾಚಾರ್ಯರಲ್ಲಿ ಕಾಣಬಹುದು. ಬುದ್ಧಿವಂತಿಕೆ ಪ್ರಾಮಾಣಿಕತೆ ಪ್ರಯತ್ನಶೀಲತೆ ಇವುಗಳನ್ನು ಶಂಕರಾಚಾರ್ಯರ ಜೀವನದ ಹಿನ್ನೆಲೆಯಲ್ಲಿ ಇಂದಿನ ಯುವಜನತೆ ಅಳವಡಿಸಿಕೊಳ್ಳಬೇಕು. ಅದ್ವೈತ ತತ್ವದ ಮೂಲಕ ಪ್ರಪಂಚದ ವಿಶಿಷ್ಟತೆಯನ್ನು ಧಾರ್ಮಿಕವಾಗಿ ಸಂಪನ್ನಗೊಳಿಸಿದವರು



ಶಂಕರಾಚಾರ್ಯರು. ವಿದ್ಯಾಭ್ಯಾಸ ಜೀವನಕ್ಕೆ ನೆಮ್ಮದಿಯನ್ನು ತಂದುಕೊಡುವ ವ್ಯವಸ್ಥೆಯಾಗಿದ್ದು, ವಿಶ್ವದ ಜ್ಞಾನವೆಲ್ಲವನ್ನೂ ಓದಿನ ಮೂಲಕ ಪಡೆಯಲು ಸಾಧ್ಯ. ಶ್ರೀ ಶಂಕರಾಚಾರ್ಯರು ಚಾಂಡಾಲನನ್ನೂ ಮಹಾಪುರುಷನೆಂದು ಉದ್ಧರಿಸಿ ಕಾಶೀ ವಿಶ್ವನಾಥ ದರ್ಶನ ಪಡೆದವರು. ಅಲ್ಲದೆ ಭಾರತದ ನಾಲ್ಕು ದಿಕ್ಕುಗಳಲ್ಲಿಯೂ ಪೀಠವನ್ನು ಸ್ಥಾಪಿಸಿ ಜ್ಞಾನದ ವ್ಯಾಪ್ತಿಯನ್ನು ವಿಸ್ತರಿಸಿದ ಮಹನೀಯರಾಗಿದ್ದಾರೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ.ಸಾಯಿನಾಥ ಮಲ್ಲಿಗೆಮಾಡು ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಶಂಕರರ ಜನ್ಮದಿನವನ್ನು ದಾರ್ಶನಿಕರ ದಿನವೆಂದು ಕೇಂದ್ರ ಸರ್ಕಾರವು ಘೋಷಿಸಿದ್ದು ವಿಶ್ವಕ್ಕೆ ಭಾರತೀಯರ ಕೊಡುಗೆ ಅನನ್ಯವಾಗಿದ್ದು ಇಡೀ ವಿಶ್ವವೇ ಭಾರತವನ್ನು ವಿಶ್ವಗುರುವೆಂದು ಅರ್ಥೈಸಿಕೊಳ್ಳುವ ರೀತಿಗೆ ಬೆಳೆದಿದೆ. ಶಂಕರರು ವಿವಾದಕ್ಕೆ ವಾದಮಾಡದೆ ಸತ್ಯಕ್ಕೆ ಚರ್ಚಿಸುವ ವಿಶ್ವಚೇತನವಾಗಿದ್ದಾರೆ. ಶಂಕರರ ಜಯಂತಿಯ ಈ ಶುಭ ಸಂದರ್ಭದಲ್ಲಿ ಶಂಕರರ ಜೀವನ ಸಂದೇಶಗಳು ಪೋಷಕರಿಗೂ ವಿದ್ಯಾರ್ಥಿಗಳಿಗೂ ಮಾರ್ಗದರ್ಶಿಯಾಗಿದ್ದು ಅವರ ತತ್ವ-ಆದರ್ಶಗಳು ಜೀವನದಲ್ಲಿ ಅನುಕರಣೀಯವಾಗಿವೆ ಎಂದರು.

ವಿದ್ಯಾರ್ಥಿಗಳು ದಿನನಿತ್ಯದ ವೃತ್ತಪತ್ರಿಕೆಗಳನ್ನು ಓದುವ ಅಭ್ಯಾಸ ಮಾಡಿಕೊಂಡು ಸದಾ ಸದ್ವಿಚಾರಗಳನ್ನು ಓದಿದಾಗ ಬದುಕು ಪ್ರಸನ್ನವಾಗುತ್ತದೆ ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಐಕ್ಯೂಎಸಿ ಸಂಚಾಲಕರಾದ ಪ್ರೊ.ಕೆ.ಎಸ್.ಸುಕೃತಾ, ಸಂಸ್ಕೃತ ವಿಭಾಗದ ಮುಖ್ಯಸ್ಥ ಶ್ರೀನಿವಾಸ ಕಾರಂತ್ ಅವರು ಉಪಸ್ಥಿತರಿದ್ದರು. ಕುಮಾರಿ ಅದಿತಿ ಕಾರ್ಯಕ್ರಮವನ್ನು ನಿರ್ವಹಿಸಿದರು. ಕುಮಾರಿ ಪ್ರೀತಿ ಸ್ವಾಗತಿಸಿದರು. ಕುಮಾರಿ ಅನುಷಾ ವಂದಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಲೂಧಿಯಾನದಲ್ಲಿ ಅನಿಲ ಸೋರಿಕೆ: 11 ಮಂದಿ ಸಾವು

ಹಲವರು ಆಸ್ಪತ್ರೆಗೆ ದಾಖಲು



ಲುದಿಯಾನ: ಪಂಜಾಬ್ ರಾಜ್ಯದ ಲೂಧಿಯಾನಾದ ಗಿಯಾಸ್‌ಪುರ ಪ್ರದೇಶದಲ್ಲಿರುವ ಕಾರ್ಖಾನೆಯಲ್ಲಿ ಅನಿಲ ಸೋರಿಕೆಯಾಗಿದ್ದು, ಪರಿಣಾಮ ಕನಿಷ್ಠ 11 ಮಂದಿ ಸಾವನ್ನಪ್ಪಿರುವ ಘಟನೆ ಭಾನುವಾರ ನಡೆದಿದೆ.

ಸುದ್ದಿ ತಿಳಿಯುತ್ತಿದ್ದಂತೆ ಪೊಲೀಸರು ಹಾಗೂ ಅಗ್ನಿಶಾಮಕ ದಳದ ವಾಹನಗಳು ಸ್ಥಳಕ್ಕೆ ದೌಡಾಯಿಸಿದ್ದು, ಸ್ಥಳವನ್ನು ಸೀಲ್ ಮಾಡಿದ್ದಾರೆ. ಅಲ್ಲದೆ, ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿದ್ದ ಜನರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ.

ಸುವಾ ರಸ್ತೆಯಲ್ಲಿ ಕಾರ್ಖಾನೆಯಿದ್ದು, ಇಂದು ಬೆಳಗ್ಗೆ 7.30ರ ಸುಮಾರಿಗೆ ಅನಿಲ ಸೋರಿಕೆಯಾಗಿದೆ ಎಂದು ತಿಳಿದು ಬಂದಿದೆ. ಪ್ರಸ್ತುತ ಸ್ಥಳವನ್ನು ಸೀಲ್ ಮಾಡಿರುವ ಪೊಲೀಸರು, ಸ್ಥಳ ಪ್ರವೇಶಿಸದಂತೆ ಸ್ಥಳೀಯರಲ್ಲಿ ಮನವಿ ಮಾಡಿಕೊಂಡಿದ್ದಾರೆ. ಇನ್ನೂ 10 ಮಂದಿಯ ಸ್ಥಿತಿ ಚಿಂತಾಜನಕವಾಗಿದ್ದು, ಎಲ್ಲರೂ ಉಸಿರಾಟ ಸಮಸ್ಯೆಯಿಂದ ಬಳಲುತ್ತಿದ್ದಾರೆಂದು ಮೂಲಗಳು ತಿಳಿಸಿವೆ.

ಏತನ್ಮಧ್ಯೆ, ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ ಟ್ವೀಟ್ ಮಾಡಿರುವ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು, ಮೃತರ ಕುಟುಂಬಕ್ಕೆ ತೀವ್ರ ಸಂತಾಪ ಸೂಚಿಸಿದ್ದಾರೆ.

ಲೂಧಿಯಾನದ ಗಿಯಾಸ್ಪುರ ಪ್ರದೇಶದಲ್ಲಿ ಕಾರ್ಖಾನೆಯ ಅನಿಲ ಸೋರಿಕೆ ಘಟನೆಯು ಬಹಳ ನೋವುಂಟು ಮಾಡಿದೆ. ಪೊಲೀಸ್, ಸರ್ಕಾರ ಮತ್ತು ಎನ್‌ಡಿಆರ್‌ಎಫ್ ಪಡೆಗಳು ಸ್ಥಳದಲ್ಲಿದ್ದು, ಅಗತ್ಯ ನೆರವುಗಳನ್ನು ಒದಗಿಸಲಾಗುತ್ತಿದೆ ಎಂದು ಹೇಳಿದ್ದಾರೆ. ವರದಿಗಳ ಪ್ರಕಾರ, ಕೆಲವರು ರಸ್ತೆಯ ಮೇಲೆ ಶವವಾಗಿ ಬಿದ್ದಿರುವುದು ಕಂಡುಬಂದಿದೆ ಎಂದು ತಿಳಿಸಿವೆ. ಘಟನೆ ಕಂಡ ಸ್ಥಳೀಯರು ಭೀತಿಗೊಳಗಾಗಿದ್ದು, ಮನೆಗಳನ್ನು ತೊರೆಯುತ್ತಿದ್ದಾರೆಂದು ವರದಿಗಳು ತಿಳಿಸಿವೆ.

ಸಾಧನಹಳ್ಳಿ ಆಶ್ರಮದಲ್ಲಿ ಚೆಣ್ಣರಿಂದ ಭರತನಾಟ್ಯ



ಕೆ.ಆರ್.ಎಸ್ ರಸ್ತೆಯಲ್ಲಿರುವ ಸಾಧನಹಳ್ಳಿ ಆಶ್ರಮದಲ್ಲಿ ಗುರುವಾರ ಬೆಂಗಳೂರಿನ ಸುಪ್ರಸಿದ್ಧ ವಿದುಷಿ ಚಿತ್ರಾಬಿಳಿಗಿರಿ ತಂಡದವರಿಂದ ಭರತನಾಟ್ಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಚಿತ್ರದಲ್ಲಿ ಆಶ್ರಮದ ಪೀಠಾಧ್ಯಕ್ಷರಾದ ಡಾ.ಅಭಿನವ ರಾಮಾನುಜ ಜೀಯರ್, ವಿದ್ವಾನ್ ಕೃಷ್ಣಮೂರ್ತಿ, ರಾಮಶೇಷು, ಸಂತೋಷ್, ಆನಂದಮೂರ್ತಿ ಹಾಗೂ ಭರತನಾಟ್ಯದಲ್ಲಿ ಭಾಗವಹಿಸಿದ ಕಲಾವಿದರನ್ನು ಕಾಣಬಹುದು.

ಡೋರ್‌ಬೆಲ್ ಬಾರಿಸಿ ತಮಾಷೆ

ಅಮೆರಿಕದಲ್ಲಿ ಮೂವರು ಬಾಲಕರನ್ನು ಹತ್ಯೆ ಮಾಡಿದ್ದ ಭಾರತೀಯ ಮೂಲದ ವ್ಯಕ್ತಿ ತಪ್ಪಿತಸ್ಥ!

ಕ್ಯಾಲಿಫೋರ್ನಿಯಾ: ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯದಲ್ಲಿನ ತನ್ನ ಮನೆಯಲ್ಲಿ ಡೋರ್‌ಬೆಲ್ ಬಾರಿಸಿ ತಮಾಷೆ ಮಾಡಿದ ಮೂವರು ಹದಿಹರೆಯದ ಹುಡುಗರನ್ನು ಕೊಂದ ಆರೋಪದಲ್ಲಿ ಭಾರತೀಯ ಮೂಲದ ವ್ಯಕ್ತಿಯೊಬ್ಬರು ತಪ್ಪಿತಸ್ಥರೆಂದು ಸಾಬೀತಾಗಿದೆ ಎಂದು ಮಾಧ್ಯಮ ವರದಿ ಮಾಡಿದೆ.

ವಾಸ್ತವವಾಗಿ 2020ರಲ್ಲಿ ಅನುರಾಗ್ ಚಂದ್ರ ಎಂಬ ಭಾರತೀಯನ ಮನೆಯಲ್ಲಿ ಕೆಲವು ಕಿಡಿಗೇಡಿ ಹುಡುಗರು ಡೋರ್‌ಬೆಲ್ ಬಾರಿಸಿದರು. ಈ ವಿಚಾರವಾಗಿ ಮೂವರು ಅಪ್ರಾಪ್ತರನ್ನು ಕಾರು ಡಿಕ್ಕಿ ಹೊಡೆದು ಸಾಯಿಸಿದ್ದನು. ಕೇವಲ ಹದಿನಾರು ವರ್ಷ ವಯಸ್ಸಿನ ಮೂವರು ಹುಡುಗರು ಕಾರಿಗೆ ಡಿಕ್ಕಿ ಹೊಡೆದ ನಂತರ ಸಾವನ್ನಪ್ಪಿದ್ದರು. ಅದೇ ಸಮಯದಲ್ಲಿ, ಈ ಘಟನೆಯಲ್ಲಿ ಕೆಲವು ಇಬ್ಬರು ಹದಿಹರೆಯದವರೂ ಗಾಯಗೊಂಡಿದ್ದರು.

ಘಟನೆಯ ದಿನ ತಾನು ಹನ್ನೆರಡು ಬಿಯರ್‌ಗಳನ್ನು ಕುಡಿದಿದ್ದಾಗಿ ಸ್ವತಃ ಭಾರತೀಯ ಮೂಲದ ಅಪರಾಧಿ ನ್ಯಾಯಾಲಯದಲ್ಲಿ ಒಪ್ಪಿಕೊಂಡಿದ್ದನು. ಡಿಕ್ಕಿಯಾಗುವ ಮೊದಲು ನಾನು 159 ಕಿಮೀ ವೇಗದಲ್ಲಿ ಚಾಲನೆ ಮಾಡುತ್ತಿದ್ದೆ. ಆದರೂ ನನ್ನ ಗುರಿ ಅವರನ್ನು ಹತ್ಯೆ ಮಾಡುವುದು ಆಗಿರಲಿಲ್ಲ. ಅವರಿಗೆ ಪಾಠ ಕಲಿಸುವುದಾಗಿತ್ತು ಎಂದು ಹೇಳಿದ್ದನು. ಡೋರ್‌ಬೆಲ್ ಬಾರಿಸುತ್ತಿದ್ದರಿಂದ ನನಗೆ ವಿಪರೀತ ಸಿಟ್ಟು ಬಂತು. ಇದರಿಂದಾಗಿ ಬಾಲಕರನ್ನು ಹಿಂಬಾಲಿಸಿದೆ. ಆದರೆ ಸಕಾಲಕ್ಕೆ ಕಾರಿನ ಬ್ರೇಕ್ ಹಾಕಲಾಗದೆ ಈ ಅಪಘಾತ ಸಂಭವಿಸಿತ್ತು ಎಂದು ಹೇಳಿದ್ದನು.

ಪ್ರೀತಿ ನಿರಾಕರಣೆ: ಪೊಲೀಸ್ ಕ್ವಾರ್ಟರ್ಸ್ ಕಟ್ಟಡದಿಂದ ಬಿದ್ದು ವಿದ್ಯಾರ್ಥಿನಿ ಆತ್ಮಹತ್ಯೆ

ಬೆಂಗಳೂರು: ಪ್ರೀತಿ ನಿರಾಕರಣೆಯಿಂದ ಬೇಸತ್ತ ವಿದ್ಯಾರ್ಥಿನಿಯೊಬ್ಬಳು ಕಟ್ಟಡದಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಬೆಂಗಳೂರಿನ ಬಿನ್ನಿ ಮಿಲ್ ಸಮೀಪದ ಪೊಲೀಸ್ ಕ್ವಾರ್ಟರ್ಸ್‌ನಲ್ಲಿ ಈ ಘಟನೆ ನಡೆದಿದ್ದು, ವಿದ್ಯಾರ್ಥಿನಿ ಡೆತ್ ನೋಟ್ (Death Note) ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆಯಿಶಾ ಬಿ.ಆರ್. ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿಯಾಗಿದ್ದು, ಬಿಎಸ್‌ಸಿ ಕಂಪ್ಯೂಟರ್ ಸೈನ್ಸ್ (BSc Computer Science) ಓದುತ್ತಿದ್ದ ಈಕೆ ಇಂದು (ಭಾನುವಾರ) ಬೆಳಗ್ಗೆ ಬಿನ್ನಿ ಮಿಲ್ ಸಮೀಪದ ಪೊಲೀಸ್ ಕ್ವಾರ್ಟರ್ಸ್‌ನ ಏಳನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಪೊಲೀಸ್ ಮೂಲಗಳ ಪ್ರಕಾರ ಭೀಮೇಶ್ ಎಂಬ ಯುವಕನನ್ನು ಆಯಿಶಾ ಪ್ರೀತಿ ಮಾಡುತ್ತಿದ್ದಳು. ಆದರೆ ಇವರಿಬ್ಬರ ಪ್ರೀತಿಗೆ ಮನೆಯವರ ಒಪ್ಪಿಗೆ ಇರಲಿಲ್ಲ. ಮನೆಯವರು ಪ್ರೀತಿಯನ್ನು ನಿರಾಕರಿಸಿದ್ದರಿಂದ ತನ್ನ ಪ್ರಿಯಕರನ ಮೊಬೈಲ್ ನಂಬರ್ ಕೈ ಮೇಲೆ ಬರೆದುಕೊಂಡು ತನ್ನ ಸಾವಿನ ವಿಚಾರ ಆತನಿಗೆ ತಿಳಿಸುವಂತೆ ಹೇಳಿ ಆತ್ಮಹತ್ಯೆಗೆ ಶರಣಾಗಿದ್ದಾಳೆ.

ನನ್ನ ಸಾವಿಗೆ ಕಾರಣ ಯಾರೂ ಅಲ್ಲ. ಈ ಜೀವನದ ಮೇಲೆ ಜಿಗುಪ್ಸೆ ಬಂದ ಕಾರಣದಿಂದ ನಾನೇ ಸ್ವತಃ ಈ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನಾನು ನನ್ನ ಕುಟುಂಬಕ್ಕೆ ಹಾಗೂ ಭೀಮೇಶ್ ನಾಯಕ್ ಅವರ ಮೇಲೆ ನೀಡಿದ್ದ ಸುಳ್ಳು ಕೇಸ್‌ನಿಂದ ತುಂಬಾ ಪಶ್ಚಾತ್ತಾಪಪಟ್ಟುಕೊಳ್ಳುತ್ತಿದ್ದೇನೆ. ಭೀಮೇಶ್ ನಾಯಕ್ ತುಂಬಾ ಸೂಕ್ಷ್ಮ ಹಾಗೂ ಮುಗ್ಧ ವ್ಯಕ್ತಿ. ಅವರು ಹಾಗೂ ನನ್ನ ಮಧ್ಯೆ ಯಾವುದೇ ದೈಹಿಕ ಸಂಪರ್ಕವಿರುವುದಿಲ್ಲ. ನಾನು ಮಾಡಿದ ಈ ಸುಳ್ಳು ಕೇಸ್‌ನಿಂದ ಅವರ ತಂದೆ ಅನಾರೋಗ್ಯಕ್ಕೀಡಾಗಿದ್ದಾರೆ. ನನ್ನಿಂದ ಎರಡು ಕುಟುಂಬಗಳಿಗೂ ತುಂಬಾ ನೋವಾಗಿದೆ. ಈ ಪಶ್ಚಾತ್ತಾಪದಿಂದ ಹೊರ ಬರಲು ಆಗುತ್ತಿಲ್ಲ. ನಾನು ಮಾನಸಿಕವಾಗಿ ಕುಗ್ಗಿ ಹೋಗಿದ್ದೇನೆ. ಭೀಮೇಶ್ ನಾಯಕ್ ನನ್ನ ಆತ್ಮೀಯ ಸ್ನೇಹಿತ ಎಂದು ಡೆತ್ ನೋಟ್‌ನಲ್ಲಿ ಆಯಿಶಾ ಬರೆದುಕೊಂಡಿದ್ದಾಳೆ. ಕಾಟನ್ ಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸಿದ್ದಾರೆ.

ಬಿಜೆಪಿ ನೆಲೆ ಇಲ್ಲದ ತಮಿಳ್ನಾಡಲ್ಲೇ 4 ಸ್ಥಾನ ಗೆಲ್ಲಿಸಿದ ಪ್ರಧಾನಿ ಮೋದಿ; ನಮ್ಮಲ್ಲಿ ಬಹುಮತ ನಿಶ್ಚಿತ

ಬಿಜೆಪಿ ನಾಯಕ ಈಶ್ವರಪ್ಪ ಭವಿಷ್ಯ



ಮೈಸೂರು, ಏ.30(ಎಸ್‌ಪಿಎನ್)– ಧರ್ಮ ವಿರೋಧಿಗಳಿರುವ ತಮಿಳುನಾಡಿನಲ್ಲೇ ಪ್ರಧಾನಿ ನರೇಂದ್ರ ಮೋದಿ ಪ್ರಚಾರ ಮಾಡಿ 4 ಸ್ಥಾನ ಗೆಲ್ಲಿಸಿದರು. ಇನ್ನು ನೆಲೆಯಿರುವ ನಮ್ಮ ರಾಜ್ಯದಲ್ಲಿ ಬಿಜೆಪಿಗೆ ನಿಶ್ಚಿತವಾಗಿಯೂ ಬಹುಮತ ಸಿಗಲಿದೆ ಎಂದು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಪ್ರಧಾನ ಮಂತ್ರಿ ಮೋದಿ ನೇತೃತ್ವದಲ್ಲಿ ಹಮ್ಮಿಕೊಂಡಿರುವ ರೋಡ್ ಶೋನಲ್ಲಿ ಪಾಲ್ಗೊಳ್ಳಲು ಆಗಮಿಸಿದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಜೋಡೆತ್ತಿನಂತೆ ರಾಜ್ಯದಾದ್ಯಂತ ಪ್ರಚಾರ ಕೈಗೊಂಡು ಧೂಳೆಬ್ಬಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ಕಾರ್ಯಕ್ರಮಗಳಿಂದ ಮೋದಿ ಪ್ರಖ್ಯಾತಿ ಗಳಿಸಿದ್ದು, ಅವರ ದರ್ಶನ ಹಾಗೂ ಮಾತುಗಳನ್ನು ಕೇಳುವುದಕ್ಕಾಗಿ ರಾಜ್ಯದ ಜನರು ಉತ್ಸುಕರಾಗಿದ್ದಾರೆ ಎಂದು ತಿಳಿಸಿದರು.


ಉತ್ತರ ಪ್ರದೇಶದಲ್ಲಿ ಮೋದಿ ಪ್ರಚಾರ ಮಾಡಿದ ಕಡೆ ಬಿಜೆಪಿ ಅಮೋಘ ಜಯ ದಾಖಲಿಸಿದೆ. ರಾಹುಲ್ ಗಾಂಧಿ ಪ್ರಚಾರ ನಡೆಸಿದ ಕಡೆ ಕಾಂಗ್ರೆಸ್ ನೆಲಕಚ್ಚಿದೆ. ಜನಸಾಮಾನ್ಯರ ಹೃದಯದಲ್ಲಿ ಮೋದಿ ನೆಲೆಸಿದ್ದಾರೆ. ಹಾಗಾಗಿ ಅವರ ಮಾತಿಗೆ ಹೆಚ್ಚು ಮನ್ನಣೆ ಇದೆ ಎಂದ ಅವರು, ಬಿಜೆಪಿ ಹೈಕಮಾಂಡ್ ನಮಗಿಂತ ಬುದ್ಧಿವಂತರು. ಅವರ ತೀರ್ಮಾನಗಳನ್ನು ಶಿಸ್ತಿನ ಸಿಪಾಯಿಗಳಂತೆ ಪಾಲಿಸುವುದು ನಮ್ಮ ಕರ್ತವ್ಯ. ಶಿಸ್ತು ಪಾಲಿಸದವರು ಮುಂದೆ ಪಶ್ಚಾತ್ತಾಪಪಡಲಿದ್ದಾರೆ ಎಂದು ಮಾಜಿ ಸಿಎಂ ಜಗದೀಶ್ ಶೆಟ್ಟರ್, ಮಾಜಿ ಡಿಸಿಎಂ ಲಕ್ಷ್ಮಣ ಸವದಿ ಹೆಸರು ಹೇಳದೆ ಆಕ್ರೋಶ ಹೊರಹಾಕಿದರು.

ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಸಿದ್ದರಾಮನಹುಂಡಿಯಲ್ಲಿ ಪ್ರಚಾರ ಹಮ್ಮಿಕೊಂಡಿದ್ದಾಗ ಬಿಜೆಪಿ ಕಾರ್ಯಕರ್ತನ ಮೇಲೆ ಹಲ್ಲೆ ನಡೆದಿದೆ. ಆ ಗ್ರಾಮ ಏನು ಪಾಕಿಸ್ತಾನದಲ್ಲಿದೆಯಾ ಎಂದು ಕೆ.ಎಸ್. ಈಶ್ವರಪ್ಪ ಮಾಧ್ಯಮಗಳ ಮೂಲಕ ಪ್ರಶ್ನಿಸಿದರಲ್ಲದೆ, ವರುಣ ಕ್ಷೇತ್ರದಲ್ಲಿ ಬಿಜೆಪಿ ಪ್ರಚಾರಕ್ಕೆ ಅಡ್ಡಿಪಡಿಸುವ ಗೂಂಡಾಗಿರಿ ಕಾಂಗ್ರೆಸ್ ಮಾಡುತ್ತಿದೆ. ಇಷ್ಟು ದಿವಸ ಗೂಂಡಾಗಿರಿಯಿದ್ದ ಕಡೆ ಮಾತ್ರ ಕಾಂಗ್ರೆಸ್ ಗೆದ್ದಿದೆ ಎಂದರು.

ಈ ಬಾರಿ ವರುಣ ಕ್ಷೇತ್ರವನ್ನು ಸಿದ್ದರಾಮಯ್ಯ ಬಿಟ್ಟು ಬರುತ್ತಿಲ್ಲ. ಇಷ್ಟು ದಿನ ಚಾಮುಂಡೇಶ್ವರಿ, ವರುಣ ಅವರ ಸ್ವಂತ ಆಸ್ತಿ ಆಗಿತ್ತು. ಕಳೆದ ಬಾರಿ ಚಾಮುಂಡೇಶ್ವರಿಯಲ್ಲಿ ಸೋತರು. ಈ ಬಾರಿ ವರುಣದಲ್ಲಿ ಸೋಲಲಿದ್ದಾರೆ ಎಂದು ಭವಿಷ್ಯ ನುಡಿದ ಈಶ್ವರಪ್ಪ, 2019ರ ಲೋಕಸಭಾ ಚುನಾವಣೆಯಲ್ಲಿ 28ರಲ್ಲಿ 1 ಸ್ಥಾನವನ್ನು ಮಾತ್ರ ಬಿಜೆಪಿ ಗೆಲ್ಲಬಹುದು ಎಂದು ಸಿದ್ದರಾಮಯ್ಯ ಭವಿಷ್ಯ ನುಡಿದ್ದರು. ಆದರೆ, ಫಲಿತಾಂಶ ಬಂದಾಗ ಕಾಂಗ್ರೆಸ್ಸೇ ಗೆದ್ದಿದ್ದು ಬರೀ ಒಂದೇ ಸ್ಥಾನ ಮಾತ್ರ ಎಂದು ವ್ಯಂಗ್ಯವಾಡಿದರು.

'ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಜಾತಿವಾದಿಗಳು. ಜಾತಿ ಹೆಸರಿನಲ್ಲೇ ಮತ ಕೇಳುತ್ತಾರೆ. ರಾಷ್ಟ್ರೀಯವಾದವೇ ನಮಗೆ ಉಸಿರು. ಹಿಂದುತ್ವ, ರಾಷ್ಟ್ರೀಯವಾದ ವಿರುದ್ಧ ಮಾತನಾಡಿದರೆ ನನ್ನ ಬಾಯಿಗೆ ಬೀಗಿ ಹಾಕಲು ಯಾರಿಂದಲೂ ಸಾಧ್ಯವಾಗದು ಎಂದು ತಮ್ಮ ಮಾತಿನ ಧಾಟಿಯನ್ನು ಸಮರ್ಥಿಸಿದರಲ್ಲದೆ, ವಿ.ಸೋಮಣ್ಣ ವಿರುದ್ಧ ಎಫ್‌ಐಆರ್ ದಾಖಲಾಗಿದೆ ಎನ್ನುವ ಪ್ರಶ್ನೆಗೆ, ರಾಜಕಾರಣದಲ್ಲಿ ಇವೆಲ್ಲವೂ ಇದ್ದಿದ್ದೆ. ಎಲ್ಲವನ್ನೂ ಎದುರಿಸಬೇಕು ಎಂದು ಚುಟುಕಾಗಿ ಉತ್ತರಿಸಿದರು.

ನಾಳೆ ಸೋಮಣ್ಣ ಪರ ಅಮಿತ್ ಶಾ ಮತಯಾಚನೆ



ಮೈಸೂರು: ಮೈಸೂರಿನ ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಪರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅಖಾಡಕ್ಕಿಳಿಯಲಿದ್ದಾರೆ.

ಮೇ 2ರಂದು ಕ್ಷೇತ್ರ ವ್ಯಾಪ್ತಿಯ ಹೊಸಕೋಟೆ ಬಳಿ ನಡೆಯಲಿರುವ ಬೃಹತ್ ಸಮಾವೇಶದಲ್ಲಿ ಅಮಿತ್ ಶಾ ಪಾಲ್ಗೊಳ್ಳಲಿದ್ದು, ಅದಕ್ಕಾಗಿ ವೇದಿಕೆ ಸಿದ್ಧತೆ ಭರದಿಂದ ಸಾಗಿದೆ. ರಾಜ್ಯದ ಪ್ರತಿಷ್ಠಿತ ವಿಧಾನಸಭಾ ಕ್ಷೇತ್ರಗಳ ಪೈಕಿ ವರುಣ ಕ್ಷೇತ್ರವು ಪ್ರಮುಖವಾಗಿದ್ದು, ಹೈವೋಲ್ಟೇಜ್ ಕ್ಷೇತ್ರವೆನಿಸಿದೆ. ಆ ಕಾರಣಕ್ಕಾಗಿ ಅಮಿತ್ ಶಾ ಅವರ ಆಗಮನ ಬಿಜೆಪಿ ಪಾಳೆಯದಲ್ಲಿ ಸಂಚಲನ ಮೂಡಿಸಿದೆ. ಸಮಾವೇಶದ ಹಿನ್ನೆಲೆಯಲ್ಲಿ ಸೋಮಣ್ಣ ಅವರ ಪುತ್ರ ಅರುಣ್ ಸೋಮಣ್ಣ, ಮುಖಂಡ ಎಸ್‌ಎಂಪಿ ಶಿವಪ್ರಕಾಶ್ ಸೇರಿದಂತೆ ಹಲವು ಪ್ರಮುಖರು ಭಾನುವಾರ ಸಮಾವೇಶದ ಸಿದ್ಧತೆ ಕುರಿತು ಸ್ಥಳ ಪರಿಶೀಲನೆ ನಡೆಸಿದರು.

ಇಂದು ಸಿಎಂ ರೋಡ್ ಶೋ

ಮಂಡ್ಯ, ಏ.30– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಾಳೆ (ಸೋಮವಾರ) ಮಂಡ್ಯ ಹಾಗೂ ಮದ್ದೂರು ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ.



ಮೈಸೂರಿನಿಂದ ಆಗಮಿಸುವ ಮುಖ್ಯಮಂತ್ರಿಗಳಿಗೆ ನಗರದ ಕಲ್ಲಹಳ್ಳಿ ಬಳಿ ಅದ್ಧೂರಿ ಸ್ವಾಗತ ಕೋರಲು ಜಿಲ್ಲಾ ಬಿಜೆಪಿ ಸಜ್ಜಾಗಿದ್ದು, ಬಳಿಕ ನಗರ ಬಿಜೆಪಿ ವತಿಯಿಂದ ಜೆ.ಸಿ. ವೃತ್ತದಲ್ಲಿ ಸ್ವಾಗತಿಸಲಾಗುತ್ತದೆ. ನಂತರ ಮುಖ್ಯಮಂತ್ರಿಗಳು ಸಂಜೆ 4.30ಕ್ಕೆ ಹೊಳಲು ವೃತ್ತದಿಂದ ಪೇಟೆ ಬೀದಿ ಮಾರ್ಗವಾಗಿ ಕಾಮನ ವೃತ್ತದವರೆಗೆ ರೋಡ್ ಶೋ ಮೂಲಕ ಬಿಜೆಪಿ ಅಭ್ಯರ್ಥಿ ಅಶೋಕ್ ಜಯರಾಂ ಪರ ಮತಯಾಚನೆ ಮಾಡಲಿದ್ದಾರೆ.

ಜೈನರ ಬೀದಿ, ಮಹಾವೀರ ವೃತ್ತ ಮಾರ್ಗವಾಗಿ ಸಿಲ್ವರ್ ಜ್ಯೂಬಿಲಿ ಪಾರ್ಕಿಗೆ ಆಗಮಿಸುವ ಮುಖ್ಯಮಂತ್ರಿಗಳು ಸಂಜೆ 5 ಗಂಟೆಗೆ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಜಿಲ್ಲೆಯ ಎಲ್ಲಾ ಬಿಜೆಪಿ ಅಭ್ಯರ್ಥಿಗಳ ಪರ ಮತಯಾಚಿಸುವರು. ಸಂಜೆ 6 ಗಂಟೆಗೆ ಮದ್ದೂರು ತಲುಪುವ ಅವರು ರೋಡ್ ಶೋ ನಡೆಸಿ ಪ್ರಚಾರ ನಡೆಸಲಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ತಿಳಿಸಿದ್ದಾರೆ.

ಕೆ.ಆರ್.ಪೇಟೆ ಸಮಗ್ರ ಅಭಿವೃದ್ಧಿಗೆ ನನ್ನನ್ನು ಪುನರಾಯ್ಕೆ ಮಾಡಿ



ಕೆ.ಆರ್.ಪೇಟೆ, ಏ.30– ತಾಲೂಕಿನ ಸಮಗ್ರ ಅಭಿವೃದ್ಧಿಗೆ ನನ್ನನ್ನು ಪುನರಾಯ್ಕೆ ಮಾಡುವಂತೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಸಿ. ನಾರಾಯಣಗೌಡ ಮನವಿ ಮಾಡಿದರು.

ತಾಲೂಕಿನ ಸಂತೇಬಾಚಹಳ್ಳಿ, ಹರಿಹರಪುರ ವ್ಯಾಪ್ತಿ ಭರ್ಜರಿ ಪ್ರಚಾರ ನಡೆಸಿ ಮಾತನಾಡಿದ ಅವರು, ಸಚಿವನಾಗಿ ನಾನು 1800 ಕೋಟಿ ರೂ. ಅನುದಾನ ತಂದು ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾರ್ಯ ಕೈಗೊಂಡಿದ್ದೇನೆ. ಈ ಹಿಂದೆಂದೂ ನಡೆಯದಷ್ಟು ಅಭಿವೃದ್ಧಿ ಕಾರ್ಯ ನಡೆದಿದ್ದರೂ ವಿರೋಧಿಗಳು ನಾರಾಯಣಗೌಡ ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ. ಅವರನ್ನು ಸೋಲಿಸಿ, ಮನೆಗೆ ಕಳುಹಿಸಿ ಎಂದು ಅಪಪ್ರಚಾರ ನಡೆಸುತ್ತಿದ್ದಾರೆ ಎಂದು ಕಿಡಿಕಾರಿದರು.

ನನ್ನ ವಿರುದ್ಧ ಟೀಕೆ ಮಾಡುವವರು ತಾಲೂಕಿನಲ್ಲಿ ಸಂಚರಿಸಿ ಏತ ನೀರಾವರಿ ಯೋಜನೆ, ಬೆಂಗಳೂರು–ಜಲಸೂರು ರಾಜ್ಯ ಹೆದ್ದಾರಿ ಕಾಮಗಾರಿ, ವಿವಿಧ ವಸತಿ ಶಾಲೆಗಳ ಕ್ಯಾಂಪಸ್‌ಗಳು, ಹೈಟೆಕ್ ಆಸ್ಪತ್ರೆಗಳು, ವಿದ್ಯುತ್ ಸಬ್‌ಸ್ಟೇಷನ್‌ಗಳು, ಕೆರೆ ಅಭಿವೃದ್ಧಿ ಕಾಮಗಾರಿ ಹಾಗೂ ಒಳಾಂಗಣ ಕ್ರೀಡಾಂಗಣ ಒಮ್ಮೆ ನೋಡಿ ಆತ್ಮಾವಲೋಕನ ಮಾಡಿಕೊಳ್ಳಲಿ ಎಂದರು.

ಬರಪೀಡಿತ ಸಂತೇಬಾಚಹಳ್ಳಿ ಹೋಬಳಿ ಕೆರೆಕಟ್ಟೆಗಳನ್ನು ಹೇಮಾವತಿ ನದಿ ನೀರಿನಿಂದ ತುಂಬಿಸಲು ಗೂಡೆಹೊಸಳ್ಳಿಯ ಬಳಿ ಜಾಕ್‌ವೆಲ್ ನಿರ್ಮಿಸಿ ಏತ ನೀರಾವರಿ ಯೋಜನೆಯನ್ನು 212 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಯೋಜನೆಯ ಕಾಮಗಾರಿ ಶೇ.80ರಷ್ಟು ಮುಗಿದಿದ್ದು, ಇನ್ನು 6 ತಿಂಗಳಲ್ಲಿ ಅಘಲಯ ದೊಡ್ಡಕೆರೆಗೆ ನೀರು ಹರಿಸುವ ಕಾರ್ಯಕ್ಕೆ ಚಾಲನೆ ದೊರೆಯಲಿದೆ ಎಂದರು. ಈ ವೇಳೆ ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಶ್ರೀಧರ್, ಗ್ರಾಪಂ ಮಾಜಿ ಅಧ್ಯಕ್ಷ ಮೋಹನ್, ಚಂದ್ರಶೇಖರ್, ಹರ್ಷ, ತಾಪಂ ಮಾಜಿ ಸದಸ್ಯ ರಾಜಾ ಹುಲಿ ದಿನೇಶ್, ಬಿಜೆಪಿ ಮುಖಂಡರಾದ ಮಂಜೇಗೌಡ, ಕುಮಾರ್, ನಾಗೇಶ್, ನಾಗರಾಜು, ಮರೀಗೌಡ, ಭೀಮೇಗೌಡ, ಮೊಗಣ್ಣಗೌಡ, ಹರೀಶ್, ಪ್ರಕಾಶ್, ಬಲರಾಮೇಗೌಡ, ಜಗದೀಶ್, ಜಯರಾಮ್ ಇತರರಿದ್ದರು.

ಗಾಯಗೊಂಡಿದ್ದ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಿದ ಅಶೋಕ್

ಪಾಂಡವಪುರ, ಏ.30– ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿಯೋರ್ವನನ್ನು ಆಸ್ಪತ್ರೆಗೆ ದಾಖಲಿಸುವ ಮೂಲಕ ಶಾಸಕ ಸಿ.ಎಸ್.ಪುಟ್ಟರಾಜು ಅವರ ಸಹೋದರನ ಪುತ್ರ ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಮಾನವೀಯತೆ ಮೆರೆದಿದ್ದಾರೆ.



ತಾಲೂಕಿನ ಕಟ್ಟೇರಿ ಗ್ರಾಮದ ಬಳಿ ಶ್ರೀರಂಗಪಟ್ಟಣ ತಾಲೂಕಿನ ಮಜ್ಜಿಗೆಪುರ ಗ್ರಾಮದ ವ್ಯಕ್ತಿಯೊಬ್ಬರು ಅಪಘಾತದಲ್ಲಿ ಗಾಯಗೊಂಡಿದ್ದರು. ಈ ವೇಳೆ ಅದೇ ಮಾರ್ಗವಾಗಿ ಚುನಾವಣಾ ಪ್ರಚಾರಕ್ಕೆ ತೆರಳುತ್ತಿದ್ದ ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ತಕ್ಷಣ ತಮ್ಮ ಕಾರಿನಲ್ಲಿ ಆತನನ್ನು ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ರವಾನಿಸಿದರು. ಅಲ್ಲದೇ ವೈದ್ಯರೊಂದಿಗೆ ಮೊಬೈಲ್‌ನಲ್ಲಿ ಮಾತನಾಡಿ ಆತನ ಚಿಕಿತ್ಸೆಗೆ ನೆರವಾಗಿದ್ದು, ಆತ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಸಿ.ಅಶೋಕ್ ಅವರ ಸಮಯಪ್ರಜ್ಞೆ, ಮಾನವೀಯತೆಗೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಿ.ಎಸ್.ಪುಟ್ಟರಾಜು ಪರ ಕುಟುಂಬ ಸದಸ್ಯರ ಬಿರುಸಿನ ಪ್ರಚಾರ



ಚಿನಕುರಳಿ, ಏ.30– ಮೇಲುಕೋಟೆ ಕ್ಷೇತ್ರದ ಕ್ಯಾತನಹಳ್ಳಿ ಜಿಪಂ ವ್ಯಾಪ್ತಿಯ ಅರಳಕುಪ್ಪೆ, ಸೀತಾಪುರದಲ್ಲಿ ಜೆಡಿಎಸ್ ಅಭ್ಯರ್ಥಿ ಸಿ.ಎಸ್.ಪುಟ್ಟರಾಜು ಪರ ಪತ್ನಿ ನಾಗಮ್ಮ, ಪುತ್ರ ಸಿ.ಪಿ.ಶಿವರಾಜು, ಸೊಸೆ ತನುಶ್ರೀ ಹಾಗೂ ಪುತ್ರಿ ಅನಿತ ಭಾನುವಾರ ಬಿರುಸಿನ ಪ್ರಚಾರ ನಡೆಸಿದರು.

ಜಾಗಟೆ ಮಲ್ಲೇನಹಳ್ಳಿ ಗ್ರಾಮದ ಶ್ರೀಲಕ್ಷ್ಮಿದೇವಿ ಹಾಗೂ ಅರಳಕುಪ್ಪೆ ಈಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಪ್ರಚಾರಕ್ಕೆ ಚಾಲನೆ ನೀಡಿ, ಗ್ರಾಮದ ಪ್ರತಿ ಮನೆಗಳಿಗೆ ತೆರಳಿ ಸಿ.ಎಸ್.ಪುಟ್ಟರಾಜು ಅವರಿಗೆ ಮತ ನೀಡುವಂತೆ ಮನವಿ ಮಾಡಿದರು.

ಸಿ.ಪಿ.ಶಿವರಾಜು ಮಾತನಾಡಿ, ನಮ್ಮ ತಂದೆ, ಶಾಸಕ ಸಿ.ಎಸ್.ಪುಟ್ಟರಾಜು ಅವರ ಅಭಿವೃದ್ಧಿ ಕಾರ್ಯ ಮುಂದಿಟ್ಟುಕೊಂಡು ಪ್ರಚಾರ ಮಾಡುತ್ತಿದ್ದೇವೆ. ಕೋವಿಡ್ ಸಂದರ್ಭ ಕ್ಷೇತ್ರದ ಜನರ ಕಷ್ಟ ಸುಖ ಆಲಿಸಿದ್ದಾರೆ. ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ಕ್ಷೇತ್ರದ ಜನರಿಗೆ ಸಾಕಷ್ಟು ಅನುಕೂಲ ಮಾಡಿಕೊಟ್ಟಿದ್ದಾರೆ ಎಂದರು.

ಈ ಬಾರಿ ರಾಜ್ಯದಲ್ಲಿ ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬಂದು ಹೆಚ್.ಡಿ.ಕುಮಾರಸ್ವಾಮಿ ಮತ್ತೊಮ್ಮೆ ಮುಖ್ಯಮಂತ್ರಿಯಾಗಲಿದ್ದಾರೆ. ಈ ಹಿಂದೆ ಸಿಎಂ ಆಗಿದ್ದ ವೇಳೆ ಕುಮಾರಸ್ವಾಮಿ ಅವರು 25 ಸಾವಿರ ಕೋಟಿ ಸಾಲಮನ್ನಾ ಮಾಡಿದ್ದರು. ಈ ಪೈಕಿ ದುದ್ದ ಹೋಬಳಿ ಸೇರಿದಂತೆ ಕ್ಷೇತ್ರದ ನೂರಾರು ಕೋಟಿ ಸಾಲ ಮನ್ನಾವಾಗಿದೆ. ಈ ಬಾರಿ ಸಿ.ಎಸ್.ಪುಟ್ಟರಾಜು ಮಂತ್ರಿಯಾಗುವ ಎಲ್ಲಾ ಅವಕಾಶ ಇರುವುದರಿಂದ ದಯಮಾಡಿ ಕ್ಷೇತ್ರದ ಜನತೆ ಸಿ.ಎಸ್.ಪುಟ್ಟರಾಜು ಅವರಿಗೆ ಮತ ನೀಡುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು. ಇದೇ ವೇಳೆ ಅರಳಕುಪ್ಪೆ, ಸೀತಾಪುರ ಹಾಗೂ ಜಾಗಟೆಮಲ್ಲೇನಹಳ್ಳಿ ಗ್ರಾಮದ ಜೆಡಿಎಸ್ ಮುಖಂಡರು ಹಾಜರಿದ್ದರು.

ವಿಜಯಾನಂದ ಪರ ಶಾಸಕ ಎಂ.ಶ್ರೀನಿವಾಸ್ ಪ್ರಚಾರ



ಮಂಡ್ಯ, ಏ.30– ತಾಲೂಕಿನ ಕಸಬಾ ಹೋಬಳಿಯಲ್ಲಿ ಮಂಡ್ಯ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಕೆ.ಎಸ್.ವಿಜಯಾನಂದ ಪರ ಶಾಸಕ ಎಂ.ಶ್ರೀನಿವಾಸ್ ಪ್ರಚಾರ ನಡೆಸಿದರು.

ಬಳಿಕ ಶಾಸಕ ಎಂ.ಶ್ರೀನಿವಾಸ್ ಮಾತನಾಡಿ, ನಾನು ಪ್ರತಿ ಚುನಾವಣೆಯಲ್ಲೂ ಕಸಬಾ ಹೋಬಳಿಯ ತಂಡಸನಹಳ್ಳಿ ಗ್ರಾಮದಿಂದ ಪ್ರಚಾರ ಆರಂಭಿಸಿದ್ದೆ. ಅದೇ ರೀತಿ ವಿಜಯಾನಂದ ಸಹ ಇಲ್ಲಿಂದಲೇ ಚುನಾವಣಾ ಪ್ರಚಾರ ಆರಂಭಿಸಿದ್ದಾರೆ. ನನ್ನನ್ನು ಗೆಲ್ಲಿಸಿದ ರೀತಿ ಅವರನ್ನು ಗೆಲ್ಲಿಸಿ ಎಂದು ಮನವಿ ಮಾಡಿದರು.


ಮೇಲುಕೋಟೆ ಕ್ಷೇತ್ರದ ವ್ಯಕ್ತಿ ತಂದು ಮಂಡ್ಯದಲ್ಲಿ ಅಭ್ಯರ್ಥಿ ಮಾಡಿದ್ದಾರೆ. ಮಂಡ್ಯದ ಸ್ವಾಭಿಮಾನ ಉಳಿಯಬೇಕಾದರೆ ವಿಜಯಾನಂದ ಅವರನ್ನು ಗೆಲ್ಲಿಸಿ ಎಂದು ಮತದಾರರಲ್ಲಿ ವಿನಂತಿ ಮಾಡಿದರು.

ಪಕ್ಷೇತರ ಅಭ್ಯರ್ಥಿ ಕೆ.ಎಸ್.ವಿಜಯಾನಂದ ಮಾತನಾಡಿ, ಜನರ ಪ್ರೀತಿ ವಿಶ್ವಾಸದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ವಾಭಿಮಾನಿ ಪಡೆಯಿಂದ ನಾನು ಸ್ಪರ್ಧೆ ಮಾಡಿದ್ದೇನೆ. ನನ್ನ ಕೈ ಶುದ್ಧ ಹಸ್ತವಿದೆ ನನ್ನನ್ನು ನಂಬಿ ತಮ್ಮ ಅಮೂಲ್ಯ ಮತವನ್ನು ಕ್ರಮ ಸಂಖ್ಯೆ 14ರ ವಜ್ರದ ಗುರುತಿಗೆ ನೀಡುವ ಮೂಲಕ ಜಯಶೀಲರನ್ನಾಗಿ ಮಾಡಿ. ನಿಮ್ಮ ಋಣ ತೀರಿಸುವ ಕೆಲಸ ಮಾಡುತ್ತೇನೆ ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಯೋಗೇಶ್, ಗ್ರಾಪಂ ಮಾಜಿ ಅಧ್ಯಕ್ಷ ಮಹಾಲಿಂಗೇಗೌಡ, ತಾಪಂ ಮಾಜಿ ಸದಸ್ಯರಾದ ಟಿ.ಸಿ.ಶಂಕರೇಗೌಡ, ತಿಮ್ಮೇಗೌಡ, ಬಿ.ಎಂ. ರಘು, ಎಪಿಎಂಸಿ ಮಾಜಿ ಅಧ್ಯಕ್ಷ ಬೋರೇಗೌಡ ಗ್ರಾಪಂ ಸದಸ್ಯರಾದ ನಿರ್ಮಲ ಬೋರೇಗೌಡ, ಜಯಮ್ಮ, ಮಂಜು, ಮುಖಂಡರಾದ ಶಶಿಧರ್, ಕುಮಾರ್, ಉಮೇಶ್, ಬಾಬು, ದೇವರಾಜು ಮತ್ತಿತರರಿದ್ದರು.

ಡಾ.ಪ್ರಸನ್ನಕುಮಾರ್ ನಿಧನ

ಮಂಡ್ಯ, ಏ.30– ನಗರದ ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನ ಭೂವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ. ಎಲ್.ಪ್ರಸನ್ನಕುಮಾರ್ (59) ಭಾನುವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ ಅನಿತಾ, ಪುತ್ರಿ ಡಾ.ಅನುಶ್ರೀ ಪಿ.ಕುಮಾರ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ.



ಚಾಮುಂಡೇಶ್ವರಿ ನಗರದ 11ನೇ ಕ್ರಾಸ್‌ನಲ್ಲಿರುವ ಅವರ ಮನೆಯಲ್ಲಿ ಪಾರ್ಥಿವ ಶರೀರ ಇಡಲಾಗಿದ್ದು, ಸೋಮವಾರ ಬೆಳಗ್ಗೆ 9 ಗಂಟೆ ನಂತರ ಮೃತರ ಸ್ವಗ್ರಾಮ ಹುನಗನಹಳ್ಳಿಗೆ ಕೊಂಡೊಯ್ದು, ಬೆಳಗ್ಗೆ 11 ಗಂಟೆಗೆ ಅವರ ತೋಟದಲ್ಲಿ ಅಂತ್ಯಸಂಸ್ಕಾರ ನಡೆಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ರಾಮಚಂದ್ರ ಪರ ನಗರಸಭೆ ಅಧ್ಯಕ್ಷ ಮಂಜು ಪ್ರಚಾರ

ಮಂಡ್ಯ, ಏ.30– ಜೆಡಿಎಸ್ ಅಭ್ಯರ್ಥಿ ಬಿ.ಆರ್.ರಾಮಚಂದ್ರ ಪರ ನಗರದ ವಿವಿಧ ವಾರ್ಡ್‌ಗಳಲ್ಲಿ ನಗರಸಭಾಧ್ಯಕ್ಷ ಹೆಚ್.ಎಸ್.ಮಂಜು ನೇತೃತ್ವದಲ್ಲಿ ಸದಸ್ಯರು ಪ್ರಚಾರ ನಡೆಸಿದರು.

ನಗರದ 9ನೇ ವಾರ್ಡ್‌ನ ಕಾಳಪ್ಪ ಬಡಾವಣೆಯಲ್ಲಿ ಪ್ರಸನ್ನ ಗಣಪತಿ ದೇವಾಲಯದಲ್ಲಿ ಎಚ್.ಎಸ್.ಮಂಜು ಅವರು ಪೂಜೆ ಸಲ್ಲಿಸಿ ಪ್ರಚಾರಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಮಂಡ್ಯ ಹಾಲು ಒಕ್ಕೂಟದ ಅಧ್ಯಕ್ಷರಾಗಿರುವ ಬಿ.ಆರ್. ರಾಮಚಂದ್ರ ಅವರು ಜನಪರ ಕಾಳಜಿಯುಳ್ಳವರಾಗಿದ್ದಾರೆ. ರಾಜ್ಯದಲ್ಲಿ ಮತ್ತೊಮ್ಮೆ ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರುವ ನಿಟ್ಟಿನಲ್ಲಿ ರಾಮಚಂದ್ರ ಅವರನ್ನು ಗೆಲ್ಲಿಸಿಕೊಡುವಂತೆ ಮನವಿ ಮಾಡಿದರು. ರಾಮಚಂದ್ರ ಅವರು ಜನಸೇವೆಗಾಗಿ ಧರ್ಮಸ್ಥಳ ಯಾತ್ರೆ ಮಾಡಿಸಿದ್ದಾರೆ. ವಿದ್ಯಾರ್ಥಿಗಳಿಗೆ ಬ್ಯಾಗ್‌ಗಳು, ನೋಟ್‌ಪುಸ್ತಕಗಳನ್ನು ವಿತರಿಸಿದ್ದಾರೆ. ಬಡಜನರಿಗೆ ಹಲವಾರು ರೀತಿಯಲ್ಲಿ ನೆರವಾಗಿದ್ದಾರೆ. ಇವರು ಆಯ್ಕೆಯಾದಲ್ಲಿ ಕ್ಷೇತ್ರದಲ್ಲಿ ಮತ್ತಷ್ಟು ಜನಪರ ಸೇವೆ ಸಲ್ಲಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಜೆಡಿಎಸ್ ಯುವ ಮುಖಂಡ ಮೋಹನ್ ಕುಮಾರ್, ಮರಿಗೌಡ ಬಡಾವಣೆಯ ವಿನಯ್, ವಿಶ್ವಾಸ್, ಶರತ್, ಸುಬ್ಬೆಗೌಡ, ತಿಲಕ್, ಸಕ್ಕರೆನಗರ ಬಡಾವಣೆಯ ಬೋರೆಗೌಡ, ಗುತ್ತಲು ಮಂಜುನಾಥ್ ದೊಡ್ಡಿ ರವಿ, ಗಾಂಧಿನಗರ ಹೇಮಂತ್ ಹಾಗೂ ಕಾಳಪ್ಪ ಬಡಾವಣೆಯ ಮುಖಂಡರು ಈ ಸಂದರ್ಭದಲ್ಲಿ ಹಾಜರಿದ್ದರು.

ಏಳು ಕ್ಷೇತ್ರಗಳಲ್ಲೂ 'ಕೈ' ಅಭ್ಯರ್ಥಿಗಳಿಗೆ ಜಯ: ಕೆಬಿಸಿ

ಕೆ.ಆರ್.ಪೇಟೆ, ಏ.30– ಈ ಬಾರಿ ಕಾಂಗ್ರೆಸ್ 125ಕ್ಕೂ ಹೆಚ್ಚು ಸ್ಥಾನಗಳೊಂದಿಗೆ ಅಧಿಕಾರಕ್ಕೆ ಬರುವುದು ಖಚಿತ. ಕ್ಷೇತ್ರದ ಅಭ್ಯರ್ಥಿ ಬಿ.ಎಲ್.ದೇವರಾಜು ಸೇರಿದಂತೆ ಜಿಲ್ಲೆಯ ಏಳು ಕ್ಷೇತ್ರಗಳಲ್ಲೂ ಪಕ್ಷದ ಅಭ್ಯರ್ಥಿಗಳು ಜಯ ಗಳಿಸಲಿದ್ದಾರೆ ಎಂದು ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಕಸಬಾ ಹೋಬಳಿ ಹಿರಿಕಳಲೆ ಗ್ರಾಪಂ ವ್ಯಾಪ್ತಿಯ ತೇಗನಹಳ್ಳಿಯಲ್ಲಿ ನಡೆದ ಪ್ರಚಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಚಿವ ನಾರಾಯಣಗೌಡರ ನಿರ್ಲಕ್ಷ್ಯದಿಂದಾಗಿ ಕ್ಷೇತ್ರ ಅಭಿವೃದ್ಧಿಯಿಂದ ವಂಚಿತವಾಗಿದ್ದು, ಕ್ಷೇತ್ರಕ್ಕೆ ಅವರ ಕೊಡುಗೆ ಶೂನ್ಯ ಎಂದು ವಾಗ್ದಾಳಿ ನಡೆಸಿದರು.

ತಾಪಂ ಮಾಜಿ ಸದಸ್ಯ ರವೀಂದ್ರಬಾಬು ಮಾತನಾಡಿ, ಈ ಬಾರಿ ನಾರಾಯಣಗೌಡರನ್ನು ಸೋಲಿಸುವ ಮೂಲಕ ಸರಳ ಸಜ್ಜನ ರಾಜಕಾರಣಿ ಬಿ.ಎಲ್.ದೇವರಾಜು ಅವರನ್ನು ಕ್ಷೇತ್ರದ ಜನತೆ ಶಾಸಕರಾಗಿ ಆಯ್ಕೆ ಮಾಡುವಂತೆ ಮನವಿ ಮಾಡಿದರು.



ಈ ವೇಳೆ ತಮಿಳುನಾಡು ಶಾಸಕ ಮಾಲ್ಲುಗಿ, ಕಾಂಗ್ರೆಸ್ ಅಭ್ಯರ್ಥಿ ಬಿ.ಎಲ್.ದೇವರಾಜು, ಜಿಪಂ ಮಾಜಿ ಸದಸ್ಯರಾದ ರಾಮದಾಸ್, ಕಾಂಗ್ರೆಸ್ ಮುಖಂಡರಾದ ವಿಜಯ್ ರಾಮೇಗೌಡ, ಎಂ.ಡಿ.ಕೃಷ್ಣಮೂರ್ತಿ, ಜಿ.ಕೆ.ರುಕ್ಮಾಂಗದ, ಕೆ.ಟಿ.ಗಂಗಾಧರ್, ಪುರಸಭಾ ಸದಸ್ಯರಾದ ಡಿ.ಪ್ರೇಮಕುಮಾರ್, ಮಾಧವಪ್ರಸಾದ್, ಬಸ್ ಕೃಷ್ಣೇಗೌಡ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪ್ರತಿಮಾ, ತಾಪಂ ಮಾಜಿ ಸದಸ್ಯೆ ಕಾಂತಮಣಿ ಸೇರಿದಂತೆ ಇತರರಿದ್ದರು.

ಮೇ 3ಕ್ಕೆ ಡಿ.ಕೆ.ಶಿವಕುಮಾರ್ ಮೈಸೂರಲ್ಲಿ ಪ್ರಚಾರ

ಮೈಸೂರು, ಏ.30– ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮೇ 3ರಂದು ಮೈಸೂರಿನ ವಿವಿಧ ಕ್ಷೇತ್ರಗಳಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ. ಅಂದು ಬೆಳಗ್ಗೆ 11.30ಕ್ಕೆ ಹೆಲಿಕಾಪ್ಟರ್ ಮೂಲಕ ನಂಜನಗೂಡಿಗೆ ಆಗಮಿಸಿ, ಪ್ರಚಾರ ನಡೆಸಿದ ಬಳಿಕ ಮಧ್ಯಾಹ್ನ 2ಕ್ಕೆ ವರುಣದಲ್ಲಿ ಸಿದ್ದರಾಮಯ್ಯನವರ ಪರ ಮತಬೇಟೆ ನಡೆಸಲಿದ್ದಾರೆ. ನಂತರ ಪಾಂಡವಪುರಕ್ಕೆ ತೆರಳಿ, ಸಂಜೆ 5.30ಕ್ಕೆ ಮೈಸೂರಿಗೆ ವಾಪಸ್ಸಾಗಿ, ನಗರ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳಲ್ಲಿ ಮತ ಯಾಚಿಸಲಿದ್ದಾರೆ. ಅಂದು ಮೈಸೂರಿನಲ್ಲೇ ಉಳಿದುಕೊಂಡು, ಮರುದಿನ ಬೆಳಗ್ಗೆ ರಾಣೆಬೆನ್ನೂರಿಗೆ ಪ್ರಯಾಣಿಸಲಿದ್ದಾರೆ.





ಕಾಂಗ್ರೆಸ್ ಮುಖಂಡರಾದ ಪೋಸ್ಟ್ ಬಸವರಾಜು, ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್‌ಕುಮಾರ್, ಗ್ರಾಪಂ ಮಾಜಿ ಸದಸ್ಯ ಡಿ.ಎಂ.ಮಹದೇವು, ಛೇ. ಚಿಕ್ಕಣ್ಣ, ಡೈರಿ ಬಸಪ್ಪ, ಮಾಲಣ್ಣ ಅವರು ಕಾಂಗ್ರೆಸ್ ತೊರೆದು ಶಾಸಕ ಜಿ.ಟಿ. ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ಪ್ರಭುಸ್ವಾಮಿ, ಕೋಟೆಹುಂಡಿ ಮಹದೇವ್, ಕಾಳಲಿಂಗೇಗೌಡ, ಗ್ರಾಪಂ ಮಾಜಿ ಅಧ್ಯಕ್ಷೆ ಮಹಾಲಕ್ಷ್ಮಿ ಶಿವಲಿಂಗ, ಡಿ.ಜಿ.ರವಿ, ಟಿ.ಕೆ.ಲೇಔಟ್ ರಾಜು ಇತರರಿದ್ದರು.

ತಗಡೂರಲ್ಲಿ ಶ್ರೀನಿವಾಸಪ್ರಸಾದ್ ನೇತೃತ್ವದಲ್ಲಿ ಇಂದು ಮಹತ್ವದ ಸಭೆ

ಮೈಸೂರು: ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು ಸೋಮವಾರ (ಮೇ 1) ವರುಣ ಕ್ಷೇತ್ರ ವ್ಯಾಪ್ತಿಯ ತಗಡೂರು ಗ್ರಾಮದಲ್ಲಿ ಮಹತ್ವದ ಸಭೆ ನಡೆಸಲಿದ್ದಾರೆ. ವರುಣ ಕ್ಷೇತ್ರ ವ್ಯಾಪ್ತಿಯಲ್ಲಿ ದಲಿತ ಸಮುದಾಯದ ಮತಗಳು ನಿರ್ಣಾಯಕವಾಗಿರುವ ಹಿನ್ನೆಲೆಯಲ್ಲಿ ಶ್ರೀನಿವಾಸ ಪ್ರಸಾದ್ ಅವರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಪರವಾಗಿ ಈ ಮೂಲಕ ಅಖಾಡಕ್ಕೆ ಇಳಿಯಲಿದ್ದಾರೆ. ಸೋಮವಾರ ಮಧ್ಯಾಹ್ನ 3 ಗಂಟೆಗೆ ಗ್ರಾಮದಲ್ಲಿ ಸಭೆ ನಡೆಯಲಿದ್ದು, ಹಿಂದುಳಿದ ಸಮುದಾಯಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರ ನೀಡಿರುವ ಯೋಜನೆಗಳ ಬಗ್ಗೆ ಮನವರಿಕೆ ಮಾಡಿ ಕೊಟ್ಟು ಸೋಮಣ್ಣ ಪರ ಮತಯಾಚನೆ ಮಾಡಲಿದ್ದಾರೆ. ಶ್ರೀನಿವಾಸಪ್ರಸಾದ್ ಅವರೊಂದಿಗೆ ಅಭ್ಯರ್ಥಿ ವಿ.ಸೋಮಣ್ಣ, ಸ್ಥಳೀಯ ಬಿಜೆಪಿ ಮುಖಂಡರು ಉಪಸ್ಥಿತರಿರುವರು.



ಅತ್ಯಾಚಾರಿಯನ್ನೇ ಮದುವೆಯಾಗಲು ಯುವತಿ ನಿರ್ಧಾರ: ಆರೋಪಿ ಶಿಕ್ಷೆ ಅಮಾನತುಗೊಳಿಸಿ ಜಾಮೀನು ನೀಡಿದ ಹೈಕೋರ್ಟ್

ಬೆಂಗಳೂರು, ಏ.30– ಅತ್ಯಾಚಾರ ಎಸಗಿದ್ದವನನ್ನೇ ಮದುವೆಯಾಗಲು ಯುವತಿ ನಿರ್ಧರಿಸಿದ್ದು, ಅಪರಾಧಿಯ ಶಿಕ್ಷೆಯನ್ನು ಅಮಾನತುಗೊಳಿಸಿ ಹೈಕೋರ್ಟ್ ಷರತ್ತು ಬದ್ಧ ಜಾಮೀನು ನೀಡಿದೆ.

2017ರಲ್ಲಿ ಪ್ರಕರಣ ನಡೆದಾಗ 17 ವರ್ಷವಾಗಿದ್ದ ಯುವತಿಗೆ ಈಗ 24 ವರ್ಷ. ಆಕೆಯ ಅಪಹರಿಸಿ ಅತ್ಯಾಚಾರ ಎಸಗಿದ ಆರೋಪದ ಮೇಲೆ ಅಪರಾಧಿಗೆ 2019ರ ಮಾರ್ಚ್ 22ರಂದು ದೋಷಿ ಎಂದು ತೀರ್ಮಾನಿಸಿ ಸೆಷನ್ಸ್ ಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿತ್ತು. ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಆರೋಪಿ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದ್ದು, ಇದೇ ಅರ್ಜಿಗೆ ಮಧ್ಯಂತರ ಅರ್ಜಿ ಸಲ್ಲಿಸಿದ್ದ ಆತ ಸಂತ್ರಸ್ತೆ ಮದುವೆಯಾಗಲು ಸಿದ್ಧನಿದ್ದು, ಜೀವಾವಧಿ ಶಿಕ್ಷೆ ಅಮಾನತ್ತಿನಲ್ಲಿಟ್ಟು ಜಾಮೀನು ಮಂಜೂರು ಮಾಡಬೇಕೆಂದು ಮನವಿ ಮಾಡಿದ್ದ.

ಸಂತ್ರಸ್ತೆ ಕೂಡ ಹೈಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವಂತೆ ಕೋರಿದ್ದಳು. ನ್ಯಾಯಮೂರ್ತಿ ಬಿ. ವೀರಪ್ಪ ಹಾಗೂ ನ್ಯಾಟಿ. ವೆಂಕಟೇಶ್ ನಾಯಕ್ ಅವರಿದ್ದ ಪೀಠ ಆರೋಪಿ ತನ್ನ ಪ್ರಿಯಕರನೆಂದು ಸಂತ್ರಸ್ತೆಯೇ ಒಪ್ಪಿಕೊಂಡಿದ್ದಾಳೆ. ಆಕೆಯನ್ನು ವಿವಾಹವಾಗದಿದ್ದರೆ ಘನತೆ ಮತ್ತು ಗೌರವಕ್ಕೆ ಧಕ್ಕೆಯಾಗುತ್ತದೆ ಎಂದು ತಿಳಿಸಿದ್ದಾಳೆ. ಈ ಅಂಶಗಳನ್ನು ಪರಿಗಣಿಸಿ ವಿಚಾರಣಾ ನ್ಯಾಯಾಲಯ ವಿಧಿಸಿದ ಶಿಕ್ಷೆ ಅಮಾನತ್ತಿನಲ್ಲಿಟ್ಟು ಒಂದು ಲಕ್ಷ ರೂ. ಬಾಂಡ್ ಮತ್ತು ಅಷ್ಟೇ ಮೊತ್ತಕ್ಕೆ ಒಬ್ಬರ ಶೂರಿಟಿ ಒದಗಿಸಿ ಜಾಮೀನು ನೀಡಲಾಗಿದೆ.

ಅಪರಾಧಿ ಮತ್ತು ಅವನ ಪಾಲಕರು ಸಂತ್ರಸ್ತೆಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಸರಿಯಾಗಿ ನೋಡಿಕೊಳ್ಳದಿದ್ದರೆ ಜಾಮೀನು ರದ್ದತಿಗೆ ಕೋರಿ ಸಂತ್ರಸ್ತೆ ಅಥವಾ ಅವಳ ಪರವಾಗಿ ಪೊಲೀಸರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು ಎಂದು ಹೇಳಲಾಗಿದೆ. ಈ ಆದೇಶ ಮಧ್ಯಂತರ ಕ್ರಮವಾಗಿದ್ದು ಭವಿಷ್ಯದಲ್ಲಿ ಇಂತಹ ಪ್ರಕರಣಗಳಿಗೆ ನಿದರ್ಶನವೆಂದು ಪರಿಗಣಿಸಲಾಗುವುದಿಲ್ಲವೆಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಘಟನೆ ನಡೆದಾಗ ನಾವು ಪ್ರೀತಿಸುತ್ತಿದ್ದೆವು. ಒತ್ತಡ ಹಾಗೂ ಭಯದಿಂದ ಆರೋಪಿ ವಿರುದ್ಧ ಹೇಳಿಕೆ ನೀಡಿದ್ದೆ. ಈಗ ಆತನನ್ನು ಮದುವೆಯಾಗಲು ನಿರ್ಧರಿಸಿದ್ದೇನೆ. ಆತ ಕೂಡ ಮದುವೆಯಾಗುವುದಾಗಿ ಒಪ್ಪಿಕೊಂಡಿದ್ದಾನೆ. ಇಬ್ಬರೂ ರಾಜಿಯಾಗಲು ತೀರ್ಮಾನಿಸಿದ್ದು, ನಮ್ಮ ತಂದೆ ತಾಯಿಗಳಿಗೆ ಮೂವರು ಪುತ್ರಿಯರಿದ್ದೇವೆ. ನಾನೇ ಹಿರಿಯ ಮಗಳಾಗಿದ್ದೇನೆ. ತಂದೆ ಕಾಯಿಲೆಯಿಂದ ಬಳಲುತ್ತಿದ್ದು, ಮದುವೆಯಾಗದೆ ಉಳಿದರೆ ಊರಿನಲ್ಲಿ ಜೀವನ ನಡೆಸುವುದು ಕಷ್ಟವಾಗುತ್ತದೆ. ಊರಿನ ಜನರ ಮುಂದೆ ಘನತೆಯಿಂದ ಬದುಕಬೇಕು. ಹಾಗಾಗಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಅತ್ಯಾಚಾರ ಎಸಗಿದ್ದ ವ್ಯಕ್ತಿಗೆ ಜಾಮೀನು ಕೊಡಬೇಕೆಂದು ಸಂತ್ರಸ್ತೆ ಮನವಿ ಮಾಡಿದ್ದಳು. ಆರೋಪಿಯ ಪೋಷಕರು ಕೂಡ ನ್ಯಾಯಾಲಯಕ್ಕೆ ಹಾಜರಾಗಿ ಮದುವೆಗೆ ಯಾವುದೇ ಆಕ್ಷೇಪಣೆ ಇಲ್ಲವೆಂದು ತಿಳಿಸಿ ಒಂದು ಎಕರೆ ಜಮೀನನ್ನು ಸಂತ್ರಸ್ತೆ ಹೆಸರಿಗೆ ನೋಂದಣಿ ಮಾಡಿಕೊಡುವುದಾಗಿ ಹೇಳಿದ್ದಾರೆ.

ಶಾಸಕ ನಾಗೇಂದ್ರರಲ್ಲಿ ಮೋದಿ ಉತ್ಸಾಹ...

ಮೈಸೂರು, ಏ.30(ಎಸ್‌ಪಿಎನ್)– 2023ರ ಚುನಾವಣೆ ಸಂಬಂಧ ಮೈಸೂರಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹಮ್ಮಿಕೊಂಡಿದ್ದ ರೋಡ್ ಶೋ ಬನ್ನಿಮಂಟಪದ ಸಮೀಪ ಆಗಮಿಸಿದಾಗ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತಿದ್ದ ಶಾಸಕ ಎಲ್.ನಾಗೇಂದ್ರ ಅವರು ಮೋದಿ ಕಂಡಾಕ್ಷಣ ಮೋದಿ.. ಮೋದಿ... ಎಂದು ಘೋಷಣೆ ಕೂಗುವ ಮೂಲಕ ಸಾರ್ವಜನಿಕರ ಗಮನ ಸೆಳೆದರು.



ಸಾಮಾನ್ಯ ಪ್ರೇಕ್ಷಕರಂತೆ ಬೆಂಬಲಿಗರೊಂದಿಗೆ ಕುಳಿತು ರೋಡ್ ಶೋ ವೀಕ್ಷಣೆ ಮಾಡುತ್ತಿದ್ದ ಶಾಸಕ ಎಲ್. ನಾಗೇಂದ್ರ, ಬೆಂಬಲಿಗರು ಮೋದಿ ಆಗಮಿಸಿದಾಗ ಮೋದಿ.. ಮೋದಿ ... ಮೋದಿ.. ಎಂಬ ಘೋಷಣೆಯನ್ನು ಮೊಳಗಿಸಿದರು. ಬೆಂಬಲಿಗರ ಘೋಷಣೆಯಿಂದ ಪ್ರೇರಣೆಗೊಂಡ ಶಾಸಕರು, ಅವರೊಂದಿಗೆ ಘೋಷಣೆ ಕೂಗಿ ಬೆಂಬಲಿಗರಲ್ಲಿ ಮತ್ತಷ್ಟು ಉತ್ಸಾಹ ತುಂಬಿದರು.

ಪ್ರಧಾನಿ ಮೋದಿ ಅವರ ರೋಡ್ ಶೋ ಮುಂದೆ ಸಾಗಿದಾಗ ಗ್ಯಾಲರಿಯಲ್ಲಿದ್ದ ಮೋದಿ ಅಭಿಮಾನಿಗಳನ್ನು ಮಾತನಾಡಿಸಿ, ಬಿಜೆಪಿಗೆ ಮತ ಹಾಕುವಂತೆ ಮನವಿ ಮಾಡಿ ತೆರಳಿದರು.



ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕವೀಶ್ ಗೌಡ ಭಾನುವಾರ ಮೈಸೂರಿನ ಜನತಾ ನಗರದಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿದರು. ಬಿಜೆಪಿ ನಗರ ಮಂಡಲದ ಅಧ್ಯಕ್ಷ ಬಿ.ಎಂ. ರಘು, ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ನಿಕಟಪೂರ್ವ ಅಧ್ಯಕ್ಷ ಅರುಣ್ ಕುಮಾರ್ ಗೌಡ, ನಗರಪಾಲಿಕೆ ಮಾಜಿ ಸದಸ್ಯರಾದ ಜಗದೀಶ್, ಶಂಕರ್, ಮುಖಂಡರಾದ ರೇವಣ್ಣ, ಈರೇಗೌಡ, ಕುಮಾರ್ ಸೇರಿದಂತೆ ವಾರ್ಡ್ ನಂ. 44ರ ಬಿಜೆಪಿ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

'ಸಕುಬಾಯಿ' ನಾಟಕ ಪ್ರದರ್ಶನ



ರಂಗಾಯಣದ ಕಿರು ರಂಗಮಂದಿರದಲ್ಲಿ 'ಸಕುಬಾಯಿ' ನಾಟಕ ಪ್ರದರ್ಶನಕ್ಕೆ ರಂಗ ನಿರ್ದೇಶಕ ಬಸವಲಿಂಗಯ್ಯ ಚಾಲನೆ ನೀಡಿದರು.

ಹಿಂದಿ ಭಾಷೆಯಲ್ಲಿ ನಾದಿರಾ ಬಬ್ಬರ್ ರಚಿಸಿದ ಕಥೆಯನ್ನು, ಕನ್ನಡಕ್ಕೆ ಸಕುಬಾಯಿ ಎಂಬ ಹೆಸರಿನೊಂದಿಗೆ ಪ್ರಾಧ್ಯಾಪಕರಾದ ಡಿ.ಎಸ್.ಚೌಗಲೆ ಅನುವಾದ ಮಾಡಿದ್ದು, ನಾಟಕವನ್ನು ಹುಲುಗಪ್ಪ ಕಟ್ಟೀಮನೆ ನಿರ್ದೇಶಿಸಿದ್ದಾರೆ. ಸಂಪೂರ್ಣ ನಾಟಕ ಉತ್ತರ ಕರ್ನಾಟಕ ಶೈಲಿಯಲ್ಲಿ ಮೂಡಿಬಂದಿದೆ.

ಮೈಸೂರು, ಏ.30(ಸಿಎನ್)– ಕಲೆಗೆ ಭಾಷೆಯ ಗಡಿಯಿಲ್ಲ, ಕಲಾವಿದರ ಅಭಿನಯದ ಮೂಲಕವೇ ಕಥೆಯ ಸಾರಾಂಶ ಭಾವನಾತ್ಮಕವಾಗಿ ಮನ ಮುಟ್ಟುತ್ತದೆ ಎಂದು ಹಿರಿಯ ರಂಗಕರ್ಮಿ ಹಾಗೂ ಕೇಂದ್ರ ಅಕಾಡೆಮಿ ಪ್ರಶಸ್ತಿ ಪುರಸ್ಕೃತೆ ನಾದಿರಾ ಬಬ್ಬರ್ ತಿಳಿಸಿದರು.

ರಂಗಾಯಣದ ಕಿರು ರಂಗಮಂದಿರದಲ್ಲಿ ಶನಿವಾರ ನುಡಿರಂಗ ಸಂಸ್ಥೆ ಆಯೋಜಿಸಿದ್ದ 'ಸಕುಬಾಯಿ' ನಾಟಕ ಪ್ರದರ್ಶನದ ವೇಳೆ ಮಾತನಾಡಿದರು.

ಸಕುಬಾಯಿ ನಾಟಕ ಮನೆಗೆಲಸ ಹಾಗೂ ಮನೆ ಮಾಲೀಕರ ನಡುವಿನ ತಾರತಮ್ಯ, ಸಮಾಜದಲ್ಲಿ ಮಹಿಳೆಯರು ಅನುಭವಿಸುವ ಕಷ್ಟಗಳ ಸುತ್ತ ಹೆಣೆದ ಕಥೆಯಾಗಿದೆ. ಈ ನಾಟಕ ಹಿಂದಿ ಭಾಷೆಯಲ್ಲಿ ಸಾಕಷ್ಟು ಜನಮನ್ನಣೆ ಪಡೆದಿದೆ. ಅದೇರೀತಿ ಕನ್ನಡದಲ್ಲೂ ಉತ್ತಮ ಪ್ರದರ್ಶನದ ಮೂಲಕ ಜನರ ಪ್ರಶಂಸೆಗೆ ಪಾತ್ರವಾಗಲಿ ಎಂದು ಶುಭ ಕೋರಿದರು.

ಬಳಿಕ ಖ್ಯಾತ ನಿರ್ದೇಶಕರಾದ ಬಸವಲಿಂಗಯ್ಯ ಮಾತನಾಡಿ, ನಾಟಕದ ಮುಖ್ಯ ಪಾತ್ರ ನುಡಿ ಎಂಬ ಪಾತ್ರಧಾರಿ ಮೇಲೆ ಅವಲಂಬಿತವಾಗಿದೆ. ಸಮಾಜದಲ್ಲಿ ತೊಂದರೆಗೀಡಾದ ಮಹಿಳೆಯರು ಅನುಭವಿಸುವ ಕಷ್ಟ ಕಾರ್ಪಣ್ಯದ ಬಗ್ಗೆ ಎಳೆಎಳೆಯಾಗಿ ನಿರ್ದೇಶಕರು ನಾಟಕದ ಮೂಲಕ ಜನರಿಗೆ ತಿಳಿಸುವ ಪ್ರಯತ್ನ ಸಫಲವಾಗಿ ಎಂದು ಆಶಿಸಿದರು.



ನಾದಿರಾ ಬಬ್ಬರ್

ಕಾರ್ಯಕ್ರಮದ ಮುಖ್ಯ ಅತಿಥಿ ನಾದಿರಾ ಬಬ್ಬರ್, ರಂಗಾಯಣ ಮಾಜಿ ನಿರ್ದೇಶಕ ಸಿ.ಬಸವಲಿಂಗಯ್ಯ, ತರ್ಜುಮೆದಾರ ಡಿ.ಎಸ್.ಚೌಗಲೆ, ನಾಟಕದ ನಿರ್ದೇಶಕ ಹುಲುಗಪ್ಪ ಕಟ್ಟೀಮನಿ, ನುಡಿರಂಗ ಅಧ್ಯಕ್ಷ ಸ.ರ.ಸುದರ್ಶನ್ ಮತ್ತಿತರರು ಹಾಜರಿದ್ದರು.

ಮೈಸೂರಲ್ಲಿ ಮೋದಿ ರೋಡ್ ಶೋಗೆ ಭಾರೀ ಭದ್ರತೆ

ರಾಜಮಾರ್ಗದಲ್ಲಿ ಪಾದಯಾತ್ರೆ ಮೂಲಕ ಬಂದೋಬಸ್ತ್ ವ್ಯವಸ್ಥೆ ಖಾತರಿಪಡಿಸಿಕೊಂಡಿದ್ದ ನಗರ ಪೊಲೀಸ್ ಆಯುಕ್ತ ಬಿ.ರಮೇಶ್







ಮೈಸೂರು, ಏ. 30(ಆರ್‌ಕೆ)– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಸಂಜೆ ಮೈಸೂರಿನಲ್ಲಿ ನಡೆಸಿದ ರೋಡ್ ಶೋಗೆ ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಅಲೋಕ್‌ಕುಮಾರ್ ನೇತೃತ್ವದಲ್ಲಿ ಭಾರೀ ಬಂದೋಬಸ್ತ್ ಮಾಡಿ, ಕಟ್ಟೆಚ್ಚರ ವಹಿಸಲಾಗಿತ್ತು.

ಅರಮನೆ ದಕ್ಷಿಣ ದ್ವಾರದ ಗನ್‌ಹೌಸ್ ಸರ್ಕಲ್‌ನಿಂದ ತೆರೆದ ವಾಹನದಲ್ಲಿ ಬನ್ನಿಮಂಟಪದ ಕೆಎಸ್‌ಆರ್‌ಟಿಸಿ ಡಿಪೋವರೆಗೆ 4.5 ಕಿಮೀವರೆಗೆ ರೋಡ್ ಶೋ ನಡೆಸಿದ ಮೋದಿ ಅವರನ್ನು ನೋಡಲೆಂದು ಜಂಬೂ ಸವಾರಿ ಮಾರ್ಗದ ಇಕ್ಕೆಲಗಳಲ್ಲಿ ನೆರೆದಿದ್ದ ಸಾವಿರಾರು ಮಂದಿಯನ್ನು ನಿಯಂತ್ರಿಸಲೆಂದು ಬ್ಯಾರಿಕೇಡ್ ಅಳವಡಿಸಿ ಕಬ್ಬಿಣದ ಕಟ್ಟಡಗಳು, ಮರದ ಮೇಲೇರಿ ಜೈಕಾರ ಕೂಗುತ್ತಿದ್ದಾಗ ಪೊಲೀಸರು ಅವರನ್ನು ಸುಮ್ಮನಿರಿಸಲು ಹರಸಾಹಸ ಪಡಬೇಕಾಯಿತು.

ದೆಹಲಿಯಿಂದ ವಾರದ ಹಿಂದೆಯೇ ಬಂದು ಮೈಸೂರಿನಲ್ಲಿ ಬೀಡುಬಿಟ್ಟಿದ್ದ ಸ್ಪೆಷಲ್ ಪ್ರೊಟೆಕ್ಷನ್ ಗ್ರೂಪ್ (ಎಸ್‌ಪಿಜಿ) ಹಿರಿಯ ಅಧಿಕಾರಿಗಳು, ಪ್ರಧಾನಿಗಳ ರೋಡ್ ಶೋ ಕಾರ್ಯಕ್ರಮಕ್ಕೆ ಕಟ್ಟುನಿಟ್ಟಿನ ಭದ್ರತೆ ಒದಗಿಸಲು ನೀಡಿದ ಸೂಚನೆಯಂತೆ ಮೈಸೂರಿನ ಪೊಲೀಸರು ಬಂದೋಬಸ್ತ್ ಯೋಜಿಸಿದ್ದರು. ಶನಿವಾರ ಭಾರತ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಬಂದೋಬಸ್ತ್‌ಗೆ ನಿಯೋಜನೆಗೊಂಡಿರುವ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಪ್ರಧಾನಿ ಮೋದಿ ಅವರ ರೋಡ್ ಶೋ ಕಾರ್ಯಕ್ರಮಕ್ಕೆ ಭದ್ರತಾ ಕರ್ತವ್ಯ ನಿರ್ವಹಿಸುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಿದ್ದರು.

ಹಲವು ಬಾರಿ ಎಸ್‌ಪಿಜಿ ಅಧಿಕಾರಿಗಳೊಂದಿಗೆ ಓವಲ್ ಗ್ರೌಂಡ್, ಚಾಮರಾಜ ಜೋಡಿ ರಸ್ತೆ, ರಾಜಮಾರ್ಗ, ರಿಂಗ್ ರಸ್ತೆ, ನಂಜನಗೂಡು ರಸ್ತೆ ಹಾಗೂ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿ ಪೂರ್ವ ಸಿದ್ಧತೆ ಹಾಗೂ ಭದ್ರತಾ ವ್ಯವಸ್ಥೆಯನ್ನು ಪರಿಶೀಲಿಸಿದ ಹಿರಿಯ ಪೊಲೀಸ್ ಅಧಿಕಾರಿಗಳು, ಒಂದೇ ಒಂದು ಲೋಪವೂ ಆಗದಂತೆ ಯಶಸ್ವಿ ಬಂದೋಬಸ್ತ್ ಮಾಡಿದ್ದರು.

ಹಾಸನ ಜಿಲ್ಲೆ, ಬೇಲೂರಿನಿಂದ ಹೆಲಿಕಾಪ್ಟರ್‌ನಲ್ಲಿ ಸಂಜೆ ಮೈಸೂರಿನ ಕ್ರಾಫರ್ಡ್ ಹಾಲ್ ಎದುರಿನ ಓವಲ್ ಮೈದಾನದಲ್ಲಿ ಸಿದ್ಧಪಡಿಸಿದ್ದ ತಾತ್ಕಾಲಿಕ ಹೆಲಿಪ್ಯಾಡ್‌ಗೆ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಾರಿನಲ್ಲಿ ರಸ್ತೆ ಮೂಲಕ ಮುಡಾ ಜಂಕ್ಷನ್, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ ಮಾರ್ಗವಾಗಿ ಗನ್‌ಹೌಸ್ ಸರ್ಕಲ್‌ಗೆ ಆಗಮಿಸಿದಾಗ ನಾದಸ್ವರ ವಾದನ, ಪೂರ್ಣ ಕುಂಭದೊಂದಿಗೆ ಆತ್ಮೀಯವಾಗಿ ಸ್ವಾಗತಿಸಿದ ಬಿಜೆಪಿ ಮುಖಂಡರು, ಮೈಸೂರಿನ ಸಂಪ್ರದಾಯ ಬಿಂಬಿಸುವ ಶ್ರೀಗಂಧ, ಗಂಧದ ಕಡ್ಡಿ, ವೀಳ್ಯದೆಲೆ, ರಸಬಾಳೆ, ಸಿಲ್ಕ್‌ನಂತಹ ಮೈಸೂರು ಬ್ರಾಂಡ್ ಉತ್ಪನ್ನಗಳನ್ನು ಉಡುಗೊರೆಯಾಗಿ ನೀಡಿ, ಮೈಸೂರು ಸಾಂಪ್ರದಾಯಿಕ ಉತ್ಪನ್ನಗಳನ್ನು ವಿಶ್ವಮಟ್ಟದಲ್ಲಿ ಪರಿಚಯಿಸಲು ಪ್ರೋತ್ಸಾಹಿಸಬೇಕೆಂದು ನರೇಂದ್ರ ಮೋದಿ ಅವರಿಗೆ ಮನವಿ ಮಾಡಿಕೊಂಡರು.

ನಂತರ ಅಲಂಕೃತ ತೆರೆದ ವಾಹನದಲ್ಲಿ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ, ಶಾಸಕ ಎಸ್.ಎ. ರಾಮದಾಸ್, ಸಂಸದ ಪ್ರತಾಪ್ ಸಿಂಹರೊಂದಿಗೆ ಗನ್‌ಹೌಸ್ ಸರ್ಕಲ್‌ನಿಂದ ಬನ್ನಿಮಂಟಪದ ಕೆಎಸ್‌ಆರ್‌ಟಿಸಿ ಡಿಪೋವರೆಗೆ ರಾಜಮಾರ್ಗದಲ್ಲಿ ಒಂದು ತಾಸು ರೋಡ್ ಶೋ ನಡೆಸಿದ ನಂತರ ನರೇಂದ್ರ ಮೋದಿ ಅವರನ್ನು ಕೆಎಸ್‌ಆರ್‌ಟಿಸಿ ಡಿಪೋದಿಂದ ಎಲ್‌ಐಸಿ ಸರ್ಕಲ್, ಮಣಿಪಾಲ್ ಆಸ್ಪತ್ರೆ ಜಂಕ್ಷನ್, ರಿಂಗ್ ರಸ್ತೆ, ನಂಜನಗೂಡು ರಸ್ತೆ ಮಾರ್ಗವಾಗಿ ಮಂಡಕಳ್ಳಿ ವಿಮಾನ ನಿಲ್ದಾಣ ತಲುಪಿ ಅಲ್ಲಿಂದ ವಿಶೇಷ ವಿಮಾನದಲ್ಲಿ ರಾತ್ರಿ ಸುಮಾರು 8 ಗಂಟೆಗೆ ಹುಬ್ಬಳ್ಳಿಗೆ ಪ್ರಯಾಣ ಬೆಳೆಸಿದರು.

ಪ್ರಧಾನಮಂತ್ರಿಗಳು ಆಗಮಿಸಿ, ನಿರ್ಗಮಿಸುವವರೆಗೂ ಅವರು ಸಂಚರಿಸುವ ಮಾರ್ಗದುದ್ದಕ್ಕೂ ಹೆಚ್ಚುವರಿ ಪೊಲೀಸ್ ಸಿಬ್ಬಂದಿ, ಅರೆ ಮೀಸಲು ಪಡೆ, ಕೆಎಸ್‌ಆರ್‌ಪಿ, ಹೋಂ ಗಾರ್ಡ್ಸ್, ಮೌಂಟೆಡ್ ಕಂಪನಿ, ಜಿಲ್ಲಾ ಪೊಲೀಸ್, ಡಿಎಆರ್, ಸಿಎಆರ್ ಸೇರಿದಂತೆ 2,500ಕ್ಕೂ ಹೆಚ್ಚು ಮಂದಿ ಪೊಲೀಸರನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿತ್ತು.

ಓವಲ್ ಮೈದಾನ, ಸಂಚರಿಸುವ ಮಾರ್ಗ, ವಿಮಾನ ನಿಲ್ದಾಣದಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿ ನಿಗಾ ವಹಿಸಲಾಗಿತ್ತಲ್ಲದೆ, ಬಾಂಬ್ ಪತ್ತೆ ದಳ, ನಿಷ್ಕ್ರಿಯ ದಳ, ಡಾಗ್ ಸ್ಕ್ವಾಡ್ ಸಿಬ್ಬಂದಿಗಳು ಯಶಸ್ವಿಯಾಗಿ ಬಂದೋಬಸ್ತ್ ಕರ್ತವ್ಯ ನಿರ್ವಹಿಸಿದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ರೋಡ್ ಶೋ ಶಾಂತಿಯುತವಾಗಿ ಯಾವುದೇ ಗೊಂದಲವಿಲ್ಲದೆ ನಡೆಯಿತು.

ಮೋದಿ ರೋಡ್ ಶೋ ಹಿನ್ನೆಲೆಯಲ್ಲಿ ಅವರು ತೆರಳುವ ಮಾರ್ಗ, ರೋಡ್ ಶೋ ಮಾರ್ಗದಲ್ಲಿ ವಾಹನ ಸಂಚಾರ ನಿರ್ಬಂಧಿಸಿದ್ದರಿಂದಾಗಿ ಇಂದು ಮಧ್ಯಾಹ್ನದ ನಂತರ ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಯಿತು. ಶನಿವಾರ ಸಂಜೆ ಪೊಲೀಸರು ನಡೆಸಿದ ಭದ್ರತಾ ತಾಲೀಮು ಸಂದರ್ಭವೂ ಸುಮಾರು ಎರಡು ತಾಸು ವಾಹನ ಸಂಚಾರ ನಿರ್ಬಂಧಿಸಿದ್ದ ಕಾರಣ ವಾಹನ ಸವಾರರು ಪರದಾಡುವಂತಾಗಿತ್ತು.



ಪ್ರಧಾನಿ ಮೋದಿ ಅಭಿನಂದಿಸಿದ ಶಾಸಕ ರಾಮದಾಸ್

ನಂಜನಗೂಡು ರಸಬಾಳೆ ಹಾಗೂ ವೀಳ್ಯದೆಲೆ, ಮೈಸೂರು ಪಾಕ್ ಸೇರಿ ಮೈಸೂರು ಹೆಮ್ಮೆಯ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆ ಕಲ್ಪಿಸಲು ಮನವಿ





ರೋಡ್ ಶೋ ವೇಳೆ ಶಾಸಕ ಎಸ್.ಎ.ರಾಮದಾಸ್ ಅವರು 'ಮೈಸೂರು ಬ್ರಾಂಡ್' ವಸ್ತುಗಳನ್ನು ನೀಡಿ ಪ್ರಧಾನಿ ಮೋದಿ ಅವರನ್ನು ಸನ್ಮಾನಿಸಿದರು. ಬಲಚಿತ್ರದಲ್ಲಿ ಪ್ರಧಾನಿಗೆ ರಾಮದಾಸ್ ನೀಡಿದ ಮೈಸೂರು ಬ್ರಾಂಡ್ ವಸ್ತುಗಳನ್ನು ಕಾಣಬಹುದು.

ಮೈಸೂರು, ಏ.30(ಎಂಟಿವೈ)– ಮೈಸೂರು ಮಲ್ಲಿಗೆ, ಮೈಸೂರು ರೇಷ್ಮೆ ಸೇರಿದಂತೆ ಮೈಸೂರಿನ ಹೆಮ್ಮೆ, ಹೆಗ್ಗುರುತುಗಳಾದ 18 ವಸ್ತುಗಳಿಗೆ ಜಾಗತಿಕ ಮಟ್ಟದಲ್ಲಿ ಮಾರುಕಟ್ಟೆ ಕಲ್ಪಿಸುವಂತೆ ಗಮನ ಸೆಳೆಯುವ ನಿಟ್ಟಿನಲ್ಲಿ ಶಾಸಕ ಎಸ್.ಎ.ರಾಮದಾಸ್, ಗನ್‌ಹೌಸ್ ಬಳಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸನ್ಮಾನಿಸಿ, ಮನವಿ ಮಾಡಿದರು.

ರೋಡ್ ಶೋ ನಡೆಸಲು ಬಂದ ಮೋದಿ ಅವರಿಗೆ ಗನ್‌ಹೌಸ್ ಬಳಿ ಶಾಸಕ ಎಸ್.ಎ.ರಾಮದಾಸ್ ಮೈಸೂರು ಪೇಟ ತೊಡಿಸಿ, ಮೈಸೂರು ಸಿಲ್ಕ್ ಶಾಲು ಹೊದಿಸಿ ಸನ್ಮಾನಿಸಿದರು. ಈ ವೇಳೆ ಪ್ರಧಾನಿ ಮೋದಿ ಅವರಿಗೆ ಮೈಸೂರು ವೀಳ್ಯದೆಲೆ, ಮೈಸೂರು ಪಾಕ್, ಅಗರಬತ್ತಿ, ಮೈಸೂರು ರೇಷ್ಮೆ, ಮೈಸೂರು ಸ್ಯಾಂಡಲ್ ಸೋಪು, ಮೈಸೂರು ಅರಮನೆಯ ಕಲಾಕೃತಿ, ರೇಷ್ಮೆಯ ಪಂಚೆ, ವಲ್ಲಿ ಸೇರಿದಂತೆ 18 ವಸ್ತುಗಳನ್ನು ನೀಡಿ ಅಭಿನಂದಿಸಿದರು. ಸನ್ಮಾನ ಸ್ವೀಕರಿಸಿದ ಪ್ರಧಾನಿ ಮೋದಿ ಹಸನ್ಮುಖಿಯಾದರು.

ಜಾಗತಿಕ ಮಾರುಕಟ್ಟೆಗಾಗಿ ಮನವಿ: ಈ ಕುರಿತು ಪತ್ರಕರ್ತರೊಂದಿಗೆ ಮಾತನಾಡಿದ ಶಾಸಕ ಎಸ್.ಎ.ರಾಮದಾಸ್, ಮೈಸೂರಿನ ಹೆಮ್ಮೆಯ ಭೌಗೋಳಿಕ ಹೆಗ್ಗುರುತಾಗಿ ಗುರುತಿಸಲ್ಪಟ್ಟಿರುವ ವಸ್ತುಗಳನ್ನು ಜಾಗತಿಕ ಮಾರುಕಟ್ಟೆಗೆ ಪರಿಚಯಿಸುವ ನಿಟ್ಟಿನಲ್ಲಿ ಪ್ರಧಾನಿ ಮೋದಿ ಅವರಿಗೆ ಮನವಿ ಮಾಡಿದ್ದೇನೆ. ಮೈಸೂರು ನೆಲ ಮೂಲದ 18 ವಸ್ತುಗಳನ್ನು ಮೋದಿ ಅವರಿಗೆ ಉಡುಗೊರೆಯಾಗಿ ನೀಡಿ ಅವುಗಳನ್ನು ಪರಿಚಯಿಸಲಾಗಿದೆ. ಸನ್ಮಾನಿಸಿದ ವೇಳೆ ಮೈಸೂರು ವೀಳ್ಯದೆಲೆ, ಮೈಸೂರು ಪಾಕ್, ಗಂಧದ ಕಡ್ಡಿ, ಮೈಸೂರು ರೇಷ್ಮೆ, ಮೈಸೂರು ಸ್ಯಾಂಡಲ್ ಸೋಪು, ಮೈಸೂರು ಪೇಟ, ಮೈಸೂರು ಅರಮನೆಯ ಕಲಾಕೃತಿ, ರೇಷ್ಮೆಯ ಪಂಚೆ, ವಲ್ಲಿ ಸೇರಿದಂತೆ ಎಲ್ಲಾ 18 ವಸ್ತುಗಳನ್ನು ನೀಡಲಾಗಿದೆ. ಆತ್ಮನಿರ್ಭರ ಯೋಜನೆಯಲ್ಲಿ ಮುಂದಿನ ಹತ್ತು ವರ್ಷಗಳ ಅವಧಿಯಲ್ಲಿ ಮೈಸೂರಿನ ಈ ಎಲ್ಲಾ ಪದಾರ್ಥಗಳನ್ನು ಜಾಗತಿಕ ಮಾರುಕಟ್ಟೆಯಲ್ಲಿ ತನ್ನ ಪಾಲು ಹೊಂದುವ ಮೂಲಕ ಸ್ಥಳೀಯ ರೈತ ಸಮೂಹಕ್ಕೆ ನೆರವು ಕಲ್ಪಿಸುವುದಕ್ಕೆ ಮನವಿ ಸಲ್ಲಿಸಲಾಗಿದೆ. ಮೈಸೂರಿನ ಈ ಉತ್ಪನ್ನಗಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಬ್ರಾಂಡ್ ಕಲ್ಪಿಸುವ ಗುರಿ ಇದುವರೆಗೂ ಈಡೇರಿಲ್ಲ. ಈಗ ಅದನ್ನು ಸಾಕಾರಗೊಳಿಸಲು ಹೆಜ್ಜೆ ಇಡಲಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ 42ರಲ್ಲಿ ಮೈಸೂರಿಗೆ ಸೇರಿದ್ದು 18: ರಾಜ್ಯದಲ್ಲಿ ಒಟ್ಟು 42 ಭೌಗೋಳಿಕ ಹೆಮ್ಮೆಯ ಹೆಗ್ಗುರುತುಗಳಿದ್ದು, ಅದರಲ್ಲಿ ಮೈಸೂರಿನಲ್ಲೇ 18 ಇವೆ. ಇವುಗಳಲ್ಲಿ **'ನಂಜನಗೂಡು ರಸ ಬಾಳೆಹಣ್ಣು'** ಮೊದಲ ಸ್ಥಾನ ಪಡೆದಿದೆ. ವಿಭಿನ್ನ ರುಚಿ ಹೆಸರುವಾಸಿಯಾಗಿರುವ ಈ ತಳಿಯು ನಂಜನಗೂಡು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಬೆಳೆಯಲಾಗುತ್ತದೆ. ಪರಿಮಳ ಬೀರುವ ಹೂವುಗಳ ರಾಣಿ ಎಂದು ಕರೆಯುವ **'ಮೈಸೂರು ಮಲ್ಲಿಗೆ'** ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಸುತ್ತಮುತ್ತ ಬೆಳೆಯಲಾಗುತ್ತದೆ.

ಮೈಸೂರಿನ ನಾಲ್ಕನೇ ಪ್ರಮುಖ ಹೆಗ್ಗುರುತು ಮೈಸೂರು ಸಿಲ್ಕ್. ಕರ್ನಾಟಕವು 9,000 ಮೆಟ್ರಿಕ್ ಟನ್ ಮಲ್ಬೆರಿ ರೇಷ್ಮೆಯನ್ನು ಉತ್ಪಾದಿಸುತ್ತದೆ. ಒಟ್ಟು 20,000 ಮೆಟ್ರಿಕ್ ಟನ್ ಮಲ್ಬೆರಿ ರೇಷ್ಮೆಯನ್ನು ದೇಶದಲ್ಲಿ ಉತ್ಪಾದಿಸಲಾಗುತ್ತದೆ, ದೇಶದ ಒಟ್ಟು ಮಲ್ಬೆರಿ ರೇಷ್ಮೆಯ ಶೇ.45ರಷ್ಟು ಕೊಡುಗೆ ನೀಡುತ್ತದೆ. ಕರ್ನಾಟಕದಲ್ಲಿ ರೇಷ್ಮೆಯನ್ನು ಮುಖ್ಯವಾಗಿ ಮೈಸೂರು ಭಾಗದಲ್ಲೇ ಉತ್ಪಾದಿಸಲಾಗುತ್ತದೆ.

ಮೈಸೂರಿನ ಐದನೇ ಪ್ರಮುಖ ಹೆಗ್ಗುರುತು ಮೈಸೂರು ಅಗರಬತ್ತಿಯಾಗಿದೆ. ಇದು ಮೊದಲು ಕರ್ನಾಟಕ ರಾಜ್ಯದಲ್ಲಿ ಮಾತ್ರ ಕಂಡುಬರುವ ಸ್ಥಳೀಯವಾಗಿ ಬೆಳೆದ ಪದಾರ್ಥಗಳನ್ನು ಬಳಸಿಕೊಂಡು ಮೈಸೂರಿನಲ್ಲಿ ತಯಾರಿಸಲಾದ ವಿವಿಧ ಧೂಪ ದ್ರವ್ಯವಾಗಿದೆ. ಈ ಧೂಪದ್ರವ್ಯವು ಅದರ ಐತಿಹಾಸಿಕ ಹಿನ್ನೆಲೆ ಮತ್ತು ಬಳಸಿದ ವಸ್ತುಗಳ ದೂರದ ಲಭ್ಯತೆಯ ಕಾರಣದಿಂದ 2005 ರಲ್ಲಿ ಭಾರತ ಸರ್ಕಾರದಿಂದ ಭೌಗೋಳಿಕ ಸೂಚಕ ಟ್ಯಾಗ್ ಅನ್ನು ನೀಡಲಾಗಿದೆ.

ಮೈಸೂರು ಶ್ರೀಗಂಧದ ಎಣ್ಣೆಯು ಭಾರತದ ಕರ್ನಾಟಕದ ಮೈಸೂರು ಜಿಲ್ಲೆಯಲ್ಲಿ 'ರಾಯಲ್ ಟ್ರೀ' ಎಂದು ಕರೆಯಲ್ಪಡುವ ಶ್ರೀಗಂಧದ ಮರದಿಂದ ಹೊರತೆಗೆಯಲಾದ ಸುಗಂಧ ತೈಲವಾಗಿದೆ. ಮೈಸೂರಿನಲ್ಲಿ ಉತ್ಪಾದನೆಯಾಗುವ ಗಂಧದ ಎಣ್ಣೆಗೆ ಜಾಗತಿಕ ಮಟ್ಟದಲ್ಲಿ ಬೇಡಿಕೆಯಿದೆ ಎಂದರು.

ಮೈಸೂರು ಸ್ಯಾಂಡಲ್ ಸೋಪ್ ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಲಿಮಿಟೆಡ್ (KSDL) ನಿಂದ ತಯಾರಿಸಲ್ಪಟ್ಟ ಸಾಬೂನಿನ ಬ್ರ್ಯಾಂಡ್ ಆಗಿದೆ. ರಾಜ್ಯ ಸರ್ಕಾರದ ಒಡೆತನದಲ್ಲಿದೆ. 1916 ರಲ್ಲಿ ಮೈಸೂರಿನ ರಾಜವಂಶಸ್ಥರಾದ ಕೃಷ್ಣರಾಜ ಒಡೆಯರ್ ಅವರು ಬೆಂಗಳೂರಿನಲ್ಲಿ ಸರ್ಕಾರಿ ಸಾಬೂನು ಕಾರ್ಖಾನೆಯನ್ನು ಸ್ಥಾಪಿಸಿದ ದಿನದಿಂದಲೂ ಈ ಸಾಬೂನು ತಯಾರಿಸಲಾಗುತ್ತಿದೆ. ದಕ್ಷಿಣ ಭಾರತದ ಸಿಹಿ ತಿನಿಸಾಗಿರುವ 'ಮೈಸೂರು ಪಾಕ್' ಕರ್ನಾಟಕ ರಾಜ್ಯದಲ್ಲಿ ಜನ್ಮ ತಾಳಿದೆ. ಹೆಚ್ಚು ಪ್ರಮಾಣದಲ್ಲಿ ತುಪ್ಪ, ಸಕ್ಕರೆ, ಕಡಲೆ ಹಿಟ್ಟು ಮತ್ತು ಏಲಕ್ಕಿಯಿಂದ ತಯಾರಿಸಲಾಗುತ್ತದೆ.

ಈ ಎಲ್ಲಾ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಸೌಲಭ್ಯ ದೊರೆತರೆ ಮೈಸೂರಿಗೆ ಕೀರ್ತಿ ಇನ್ನಷ್ಟು ಹೆಚ್ಚಾಗುವುದರೊಂದಿಗೆ ರೈತರು ಹಾಗೂ ಅವಲಂಬಿತರಿಗೆ ನೆರವಾಗುತ್ತದೆ ಎಂದು ವಿವರಿಸಿದರು.

ಬಿಜೆಪಿ ಪ್ರಮುಖರಿಗೆ, ಮಾಧ್ಯಮದವರಿಗೆ ಪ್ರತ್ಯೇಕ ಸ್ಥಳ ವ್ಯವಸ್ಥೆ...

ಪ್ರಧಾನಿಗಳ ರೋಡ್ ಶೋಗೆ ಸಂಬಂಧಿಸಿದಂತೆ ಸ್ಥಳೀಯ ಮಾಧ್ಯಮದವರಿಗೆ ಹಾಗೂ ಬಿಜೆಪಿ ಪ್ರಮುಖರಿಗೆ ನಾಲ್ಕು ಸ್ಥಳಗಳಲ್ಲಿ ಕುಳಿತು ವೀಕ್ಷಣೆ ಮಾಡಲು ಅನುಕೂಲವಾಗುವಂತೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು. ಕಾಡಾ ಕಚೇರಿ ಹಿಂಭಾಗದ(ಚಾಮರಾಜ ಜೋಡಿ ರಸ್ತೆಗೆ ಹೊಂದಿಕೊಂಡಂತೆ) ಆವರಣ, ಚಿಕ್ಕಗಡಿಯಾರ, ಆರ್‌ಎಂಸಿ ಹಾಗೂ ಹೈವೇ ಸರ್ಕಲ್ ಬಳಿ ವೇದಿಕೆ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಮೋದಿ ಆಗಮಿಸುತ್ತಿದ್ದಂತೆ ಕುಳಿತ ಸ್ಥಳಗಳಿಂದ ಎದ್ದು, ಬ್ಯಾರಿಕೇಡ್ ಗಳತ್ತ ನುಗ್ಗಿದ ಜನರು ಸಾಧ್ಯವಾದಷ್ಟು ಹತ್ತಿರದಿಂದ ಪ್ರಧಾನಿಗಳತ್ತ ಕೈ ಬೀಸಿದರು.

ಅಭಿಮಾನಿಗಳು, ಕಾರ್ಯಕರ್ತರ ಹರ್ಷೋದ್ಗಾರ... ಹೂ ಮಳೆ...



ಪ್ರಧಾನಿ ನರೇಂದ್ರ ಮೋದಿ ರೋಡ್ ಶೋ ಮಾರ್ಗದುದ್ದಕ್ಕೂ ಮೋದಿ ಅಭಿಮಾನಿಗಳು, ಬಿಜೆಪಿ ಕಾರ್ಯಕರ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಮೋದಿ... ಮೋದಿ.. ಜೈ ಜೈ ಮೋದಿ... ಭಾರತ್ ಮಾತಾ ಕೀ ಜೈ.. ವಂದೇ ಮಾತರಂ... ಜೈ ಶ್ರೀರಾಮ್ ಘೋಷಣೆಗಳನ್ನು ಕೂಗಿ ಸಂಭ್ರಮಿಸಿದರು. ಗನ್‌ಹೌಸ್ ವೃತ್ತದಿಂದ ಬನ್ನಿಮಂಟಪದವರೆಗೆ ಸಯ್ಯಾಜಿರಾವ್ ರಸ್ತೆಯ ಎರಡು ಬದಿಯಲ್ಲಿ ಕಿಕ್ಕಿರಿದು ನಿಂತಿದ್ದ ಜನರು, ಪ್ರಧಾನಿ ಕಂಡು ಹರ್ಷ ವ್ಯಕ್ತಪಡಿಸಿದರಲ್ಲದೆ ಮೋದಿಯವರ ಮೇಲೆ ಹೂವಿನ ಮಳೆಗೈದರು. ಮೊಬೈಲ್‌ಗಳಲ್ಲಿ ವಿಡಿಯೋ ಮಾಡಿಕೊಂಡು, ಫೋಟೋ ಕ್ಲಿಕ್ಕಿಸಿಕೊಂಡು ಖುಷಿಪಟ್ಟರು. ಹಲವರು ಕಟ್ಟಡಗಳ ಮೇಲೆ ನಿಂತು ಬಿಜೆಪಿ ಬಾವುಟ ಹಾರಿಸಿದರು.

ಮಾಧ್ಯಮದವರೊಂದಿಗೆ ಪೊಲೀಸರ ಕಿರಿಕಿರಿ...

ಬಿಜೆಪಿ ಸ್ಥಳೀಯ ಆಯೋಜಕರಿಂದ ಮಾಧ್ಯಮದವರಿಗೆ ಪಾಸ್ ವಿತರಿಸಿ, ಸೂಕ್ತ ಸ್ಥಳ ನಿಗದಿಪಡಿಸಲಾಗಿತ್ತು. ಆದರೆ ಕೆಲ ಪೊಲೀಸರು ಬ್ಯಾರಿಕೇಡ್ ಹೊರಗಿದ್ದರೂ ಮಾಧ್ಯಮದವರನ್ನು ನೀವು ಇಲ್ಲೇಕೆ ಬಂದಿದ್ದೀರಿ, ಐಡಿ ಕಾರ್ಡ್ ತೋರಿಸಿ, ಪಾಸ್ ತೋರಿಸಿ ಎಂದು ಕಾಡಿದರು. ಬನುಮಯ್ಯ ಕಾಲೇಜು ಬಳಿ ಬಿಜೆಪಿ ಕಾರ್ಯಕರ್ತರ ನಡುವೆ ನಿಂತಿದ್ದ ನಾಲ್ಕೈದು ಮಂದಿ ಮುದ್ರಣ ಮಾಧ್ಯಮದವರನ್ನು ಪ್ರಶ್ನಿಸಿದ, ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬರು ಮಾಧ್ಯಮದವರ ಬಳಿಯಿದ್ದ ಐಡಿ ಕಾರ್ಡ್‌ಗಳನ್ನು ಕಿತ್ತುಕೊಂಡು ನಿಮಗಿಲ್ಲಿ ನಿಲ್ಲುವುದಕ್ಕೆ ಅವಕಾಶ ಇಲ್ಲ ಎಂದು ದೂಡಿದರು. ಹಾಗೆಯೇ ಚಿಕ್ಕಗಡಿಯಾರದ ಬಳಿ ರಸ್ತೆಗಿಳಿದು ವಿಡಿಯೋ ಮಾಡುತ್ತಿದ್ದ ದೃಶ್ಯ ಮಾಧ್ಯಮವೊಂದರ ಕ್ಯಾಮರಾ ಮ್ಯಾನ್‌ನನ್ನು ಸುತ್ತುವರಿದ ಪೊಲೀಸರು, ಪಾಸ್ ತೋರಿಸಿದರೂ ರಸ್ತೆಯಿಂದ ಹೊರಗಟ್ಟಿದರು.

ನೀರಿದ್ದರೂ ಬಾಯಾರಿಕೆ ತೀರಲಿಲ್ಲ...

ಪ್ರಧಾನಿಗಳ ರೋಡ್ ಶೋಗೆ ವೀಕ್ಷಣೆಗಾಗಿ ಬಿಜೆಪಿ ಪ್ರಮುಖರು ಹಾಗೂ ಮಾಧ್ಯಮದವರಿಗೆ ನಿಗದಿಪಡಿಸಿದ್ದ ಸ್ಥಳಗಳಲ್ಲಿ ಕುಡಿಯುವ ನೀರಿನ ಕ್ಯಾನ್‌ಗಳನ್ನು ಇಟ್ಟಿದ್ದರೂ ಗ್ಲಾಸ್(ಲೋಟ) ಇಲ್ಲದೆ ಕುಡಿಯದಂತಾಯಿತು. ಚಿಕ್ಕಗಡಿಯಾರ ಬಳಿ ಕುಡಿಯುವ ನೀರು ತುಂಬಿದ್ದ ಸುಮಾರು 17 ಕ್ಯಾನ್‌ಗಳನ್ನು ಇಟ್ಟಿದ್ದರೂ ಪ್ರಯೋಜನವಾಗಲಿಲ್ಲ. ಹಾಗೆಯೇ ಭದ್ರತೆ ದೃಷ್ಟಿಯಿಂದ ವಾಟರ್ ಬಾಟಲ್, ಬ್ಯಾಗ್ ತರದಂತೆ ಪೊಲೀಸರು ತಡೆದಿದ್ದರಿಂದಾಗಿ ಬಾಟಲ್ ನೀರು ಕೂಡ ಇಲ್ಲದಂತಾಯಿತು. ಮಧ್ಯಾಹ್ನ 2.30 ರಿಂದಲೂ ಕಾದು ಕುಳಿತಿದ್ದ ಜನರ ಕಣ್ಣಮುಂದೆ ನೀರಿದ್ದರೂ ಕುಡಿಯಲಾಗದೆ ಬಿಸಿಲಿನಲ್ಲಿ ಬಾಯಾರಿಕೆಯಿಂದ ಬಳಲುವಂತಾಯಿತು. ಸಿಟ್ಟಾದ ಕೆಲವರು ಆಯೋಜಕರ ಮೇಲೆ ಕಿಡಿಕಾರಿದರು.



ರೋಡ್ ಶೋ ವೇಳೆ ಗಮನ ಸೆಳೆದ ಚಿತ್ರಗಳು



ರೋಡ್ ಶೋ ವೇಳೆ ಅಭಿಮಾನಿಯೊಬ್ಬರು ಪ್ರಧಾನಿ ಮೋದಿಯವರು ಆರ್‌ಎಸ್‌ಎಸ್ ಸಮವಸ್ತ್ರದಲ್ಲಿರುವ ಭಾವಚಿತ್ರವನ್ನು ಹಿಡಿದು ಗಮನ ಸೆಳೆದರು.



ಪ್ರಧಾನಿ ಮೋದಿ ಅವರನ್ನು ಕಣ್ತುಂಬಿಕೊಳ್ಳುವ ಸಲುವಾಗಿ, ಬೆಂಗಳೂರಿನಿಂದ ಶೋಭ ಎಂಬ ಮಹಿಳೆ ತಮ್ಮ ಮೂರು ತಿಂಗಳ ಹಸುಗೂಸು, ಪತಿಯೊಂದಿಗೆ ಆಗಮಿಸಿದ್ದರು. ಹೈವೇ ಸರ್ಕಲ್ ಬಳಿ ಪ್ರಧಾನಿ ಮೋದಿ ಅವರನ್ನು ಕಣ್ತುಂಬಿಕೊಂಡು ಖುಷಿಪಟ್ಟ ದೃಶ್ಯ ನೋಡುಗರ ಗಮನ ಸೆಳೆಯಿತು.



ಪ್ರಧಾನಿ ನರೇಂದ್ರ ಮೋದಿ ಮಹತ್ವಾಕಾಂಕ್ಷಿ 'ಮನ್ ಕೀ ಬಾತ್' ಶತದಿನೋತ್ಸವ ಸಂಭ್ರಮ

ದೇಶದ ಜನತೆಗೆ ಧನ್ಯವಾದ ಹೇಳಿದ ಪ್ರಧಾನಮಂತ್ರಿ



ನವದೆಹಲಿ: ಪ್ರಧಾನಮಂತ್ರಿ ನರೇಂದ್ರ ಮೋದಿಯವರ 'ಮನ್ ಕೀ ಬಾತ್' ರೇಡಿಯೋ ಕಾರ್ಯಕ್ರಮದ 100ನೇ ಆವೃತ್ತಿ ಭಾನುವಾರ ಪ್ರಸಾರವಾಯಿತು. ಇದೇ ವೇಳೆ ದೇಶದ ಜನತೆಗೆ ಪ್ರಧಾನಿ ಮೋದಿಯವರು ಧನ್ಯವಾದಗಳನ್ನು ತಿಳಿಸಿದ್ದಾರೆ.

ನಿಮ್ಮ ಪತ್ರಗಳನ್ನು ಕಂಡಾಗ ನಾನು ಭಾವುಕನಾಗಿದ್ದೇನೆ. 'ಮನ್ ಕೀ ಬಾತ್' ಕೋಟ್ಯಾಂತರ ಭಾರತೀಯರ ಮನದಾಳದ ಭಾವನೆಗಳ ಅಭಿವ್ಯಕ್ತಿಯಾಗಿದೆ. ಭಾರತೀಯರ ಸಕಾರಾತ್ಮಕ ಭಾವನೆಗಳ ದ್ಯೋತಕ ಇದಾಗಿದೆ. ಜನತೆಯ ಜತೆಗೆ ನಿಕಟ ಸಂವಹನ ನಡೆಸಲು 'ಮನ್ ಕೀ ಬಾತ್'ನಿಂದ ಸಾಧ್ಯವಾಗಿದೆ. 2014ರಲ್ಲಿ ದೆಹಲಿಗೆ ಬಂದ ಬಳಿಕ ನನ್ನ ಕಾರ್ಯಚಟುವಟಿಕೆಗಳು ಅಗಾಧವಾಗಿ ಬದಲಾಗಿತ್ತು. ಅಂತಹ ಸಂದರ್ಭದಲ್ಲಿ ಜನ ಸಾಮಾನ್ಯರೊಡನೆ ಬೆರೆಯಲು, ಭಾವನೆಗಳನ್ನು ಹಂಚಲು 'ಮನ್ ಕೀ ಬಾತ್' ಮೂಲಕ ಸಾಧ್ಯವಾಯಿತು ಎಂದು ಹೇಳಿದರು.

ಮನ್ ಕೀ ಬಾತ್ ನನಗೆ ಒಂದು ವ್ರತ, ಪೂಜೆ ಆಗಿದೆ. ಈಶ್ವರ ರೂಪಿ ಜನರ ಜತೆ ಮಾತನಾಡಲು ಇದರಿಂದ ಸಾಧ್ಯವಾಗಿದೆ. ಇಂದು ನಾವು 100ನೇ ಪ್ರಸಾರಕ್ಕೆ ತಲುಪಿದ್ದೇವೆ ಈ 'ಮನ್ ಕೀ ಬಾತ್'ನಲ್ಲಿ ನಾನು ಮಾತನಾಡುವಾಗ ಸಾಕಷ್ಟು ಬಾರಿ ಭಾವುಕನಾಗಿದ್ದೇನೆ. ಸಾಮಾಜದ ಅನೇಕ ರಿಯಲ್ ಹೀರೋಗಳನ್ನು ನೆನೆಯಲು 'ಮನ್ ಕೀ ಬಾತ್' ಒಂದು ಉತ್ತಮ ಕಾರ್ಯಕ್ರಮವಾಗಿದೆ.

'ಮನ್ ಕೀ ಬಾತ್' ಮೂಲಕ 'ಬೇಟಿ ಬಚಾವೋ ಬೇಟಿ ಪಡಾವೋ' ಕಾರ್ಯಕ್ರಮಕ್ಕೆ ಉತ್ತೇಜನ ನೀಡಲಾಯಿತು. ಇದರಿಂದ ನಾರಿಶಕ್ತಿಯ ಅನಾವರಣವಾಯಿತು. ಹರಿಯಾಣದ ಸುನಿಲ್ ಅವರ "ಸೆಲ್ಫಿ ವಿತ್ ಬೇಟಿ" ಅಭಿಯಾನವನ್ನು ನೆನೆಯಬೇಕು. ಇವರ ಈ ಅಭಿಯಾನಕ್ಕೆ ದೇಶದಲ್ಲಿ ಸಾಕಷ್ಟು ಪ್ರಶಂಸೆ ಪಡೆಯಿತು. ಈ ಕಾರ್ಯಕ್ರಮದ ಮೂಲಕ ಸ್ವಸಹಾಯ ಮಹಿಳಾ ಸಂಘಗಳು, ಯುವ ಉದ್ಯಮಿಗಳ ಜತೆ ಸಂವಾದ ನಡೆಸಲಾಯಿತು. ಆತ್ಮನಿರ್ಭರ್ ಯೋಜನೆ ಕುರಿತು ದೇಶದ ಯುವಕರಿಗೆ ಮಾಹಿತಿ ನೀಡಲಾಯಿತು. ಶಿಕ್ಷಣ, ವೈದ್ಯಕೀಯ ಸೌಲಭ್ಯ, ಜಲ ಸಂರಕ್ಷಣೆ, ಸರ್ಕಾರಿ ಯೋಜನೆಗಳ ಬಗ್ಗೆ ತಿಳಿಯಿತು. ಸ್ಥಳೀಯ ಉದ್ಯಮಿಗಳಿಗೆ ಉತ್ತೇಜನ ನೀಡಲಾಯಿತು. ಗೊಂಬೆಗಳ ತಯಾರಿಕೆ ಮತ್ತು ಆತ್ಮ ನಿರ್ಭರ ಭಾರತಕ್ಕೆ ಸಾಕಷ್ಟು ಪ್ರಚಾರ ದೊರೆಯಿತು. ಸ್ವಚ್ಛ ಭಾರತಕ್ಕೆ ಮೈಲಿಗಲ್ಲು ದೊರೆಯಿತು.

ಪ್ರವಾಸೋದ್ಯಮ ಕೂಡ ಸಾಕಷ್ಟು ಅಭಿವೃದ್ಧಿಯಾಯಿತು. ಹರಿಯಾಣದಲ್ಲಿ ಲಿಂಗಾನುಪಾತ ಪ್ರಮಾಣ ಸುಧಾರಣೆಯಾಗಿದೆ. 'ಮನ್ ಕೀ ಬಾತ್'ನಿಂದ ಬೇರೆಯವರಿಂದ ಕಲಿಯಲು ಅನುಕೂಲವಾಯಿತು. ಈ ಕಾರ್ಯಕ್ರಮ ಸಮಾಜಕ್ಕೆ ಪ್ರೇರಣೆಯಾಗಿದೆ. ವೋಕಲ್ ಫಾರ್ ಲೋಕಲ್ ಮತ್ತಷ್ಟು ಗಟ್ಟಿಯಾಗಿದೆ.

ಯುನೆಸ್ಕೋ ಡಿಜಿ 'ಮನ್ ಕೀ ಬಾತ್' ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು. ಭಾರತದ ಶಿಕ್ಷಣ ಮತ್ತು ಸಂಸ್ಕೃತಿ ಬಗ್ಗೆ ಧ್ವನಿ ಎತ್ತಿದರು. 'ಮನ್ ಕೀ ಬಾತ್' ಪ್ರೇರಣಾದಾಯಕವಾಗಿದೆ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಮೃತ ಕಾಲದಲ್ಲಿ, ಜಿ20 ಅಧ್ಯಕ್ಷತೆ ವಹಿಸಿದ ಸುಸಂದರ್ಭದಲ್ಲಿ ಎಲ್ಲರು ಒಟ್ಟಾಗಿ ದೇಶದ ಅಭಿವೃದ್ಧಿಯತ್ತ ಸಾಗೋಣ ಮತ್ತು ನವಭಾರತ ನಿರ್ಮಾಣ ಮಾಡೋಣ ಎಂದು ದೇಶದ ಜನತೆಗೆ ಕರೆ ನೀಡಿದರು.

ಮನ್ ಕೀ ಬಾತ್‌ಗಾಗಿ ತೆರೆ ಹಿಂದೆ ಕಾರ್ಯನಿರ್ವಹಿಸಿದ ಪ್ರಸಾರ ಭಾರತಿ ತಂತ್ರಜ್ಞ ತಂಡಕ್ಕೆ ಮತ್ತು ಬೇರೆ ಬೇರೆ ಭಾಷೆಗಳಿಗೆ ಅನುವಾದ ಮಾಡಿದ ಅನುವಾದಕರಿಗೆ ಧನ್ಯವಾದಗಳು. 'ಮನ್ ಕೀ ಬಾತ್' ಅನ್ನು ಆಲಿಸಿದ ಶ್ರೋತೃಗಳಿಗೆ ಧನ್ಯವಾದಗಳು ಎಂದು ಹೇಳಿದರು.

2014ರಲ್ಲಿ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಮೋದಿಯವರು ಒಮ್ಮೆಯೂ ಇದನ್ನು ತಪ್ಪಿಸದೆ ನಡೆಸಿಕೊಂಡು ಬಂದಿದ್ದು ವಿಶೇಷವಾಗಿದೆ.

ಬಿಜೆಪಿಯ 33 ಶಾಸಕರ ಮೇಲೆ 103 ಕೇಸುಗಳಿವೆ...

ಕೊಡಗಲ್ಲಿ ಬಿಜೆಪಿಗೆ ಪ್ರತಿಸ್ಪರ್ಧಿಯೇ ಇಲ್ಲ ಎಂಬ ಅಮಿತ್ ಶಾ ಹೇಳಿಕೆಗೆ ಕಾಂಗ್ರೆಸ್ ನಾಯಕರ ವಾಗ್ದಾಳಿ

ಮಡಿಕೇರಿ, ಏ.30– ಕೊಡಗಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಪ್ರತಿಸ್ಪರ್ಧಿಗಳೇ ಇಲ್ಲ ಎಂದು ಗೃಹ ಸಚಿವ ಅಮಿತ್ ಶಾ ಅವರು ನೀಡಿರುವ ಹೇಳಿಕೆ ಹಾಸ್ಯಾಸ್ಪದವಾಗಿದೆ ಎಂದು ಕೆಪಿಸಿಸಿ ರಾಜ್ಯ ವಕ್ತಾರ ಸಂಕೇತ್ ಪೂವಯ್ಯ ತಿರುಗೇಟು ನೀಡಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಮಿತ್ ಶಾ ಅವರು ಬಿಜೆಪಿಯ ರೋಡ್ ಶೋಗೆ ಆಗಮಿಸಿದಾಗ ಜನರು ಅವರಿಗೆ ನೀಡಿದ ಸ್ವಾಗತವನ್ನು ಕಂಡಿದ್ದೇವೆ. ರೋಡ್ ಶೋಗೆ ಕೂಡ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದರು.

ಕೊಡಗಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಪ್ರತಿಸ್ಪರ್ಧಿಯೇ ಇಲ್ಲ ಎಂದು ಅಮಿತ್ ಶಾ ಹೇಳಿದ್ದು, ಅದಕ್ಕೆ ಕಾಂಗ್ರೆಸ್ ಉತ್ತರಿಸ ಬೇಕಿಲ್ಲ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮತ್ತು ಮಾಜಿ ಡಿಸಿಎಂ ಲಕ್ಷ್ಮಣ್ ಸವದಿ ಅವರೇ ಇದಕ್ಕೆ ಉತ್ತರವಾಗಿದ್ದಾರೆ ಎಂದು ವ್ಯಂಗ್ಯವಾಡಿದರು. ಹಗರಣಗಳ ಸರಮಾಲೆ ತೊಟ್ಟಿರುವ ಬಿಜೆಪಿ ಸರಕಾರದ 33 ಶಾಸಕರ ಮೇಲೆ 103 ಕೇಸ್‌ಗಳಿವೆ. ಬಿಜೆಪಿ ವಿಜಯ್ ಸಂಕಲ್ಪ ಯಾತ್ರೆ ನಡೆಸಿದ್ದು, ಅದರ ವರದಿ ಆಧಾರದಲ್ಲಿ 60 ಸೀಟ್ ಅನ್ನೂ ಗೆಲ್ಲುವುದಿಲ್ಲ. ಹೀಗಾಗಿಯೇ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ವಿಜಯ ಸಂಕಲ್ಪ ಯಾತ್ರೆ ಸಂದರ್ಭ ಕೊಡಗಿಗೆ ಬರಲಿಲ್ಲ ಎಂದು ಹೇಳಿದರು.

● ಹಾಸ್ಯಾಸ್ಪದ ಹೇಳಿಕೆ ● ಶೆಟ್ಟರ್, ಸವದಿ ಕಾಂಗ್ರೆಸ್‌ಗೆ ಬಂದಿರುವುದೇ ನಿಮಗೆ ಉತ್ತರ



20–25 ವರ್ಷಗಳಿಂದ ಜಿಲ್ಲೆಯನ್ನು ಪ್ರತಿನಿಧಿಸಿದ ಶಾಸಕರಿಂದ ಅಭಿವೃದ್ಧಿ ಕಾರ್ಯ ಮತ್ತು ಜನರ ಸಮಸ್ಯೆಗಳಿಗೆ ಸ್ಪಂದಿಸದೇ ಇರುವುದನ್ನು ಕ್ಷೇತ್ರಗಳ ಮತದಾರರು ಮನಗಂಡಿದ್ದು, ಈ ಬಾರಿ ಬದಲಾವಣೆ ಬಯಸಿದ್ದಾರೆ. ಹೀಗಾಗಿ ಕೊಡಗು ಜಿಲ್ಲೆಯ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಅತ್ಯಧಿಕ ಮತಗಳಿಂದ ಗೆಲುವು ಸಾಧಿಸುತ್ತಾರೆ ಎಂದು ಸಂಕೇತ್ ಪೂವಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಅಭಿವೃದ್ಧಿ ಬಗ್ಗೆ ಮಾತನಾಡಿ: ಚುನಾವಣೆ ಸಂದರ್ಭ ಈಗಾಗಲೇ ಮುಕ್ತಾಯದ ಅಧ್ಯಾಯವಾಗಿರುವ ಟಿಪ್ಪು ಜಯಂತಿಯನ್ನು ಪ್ರಸ್ತಾಪಿಸಲಾಗುತ್ತಿದೆ. ಟಿಪ್ಪು ಜಯಂತಿ ಬಂದ್ ಆಗಿ 4 ವರ್ಷಗಳೇ ಕಳೆದಿವೆ ಮತ್ತೆ ಅದನ್ನೇ ಪ್ರಸ್ತಾಪಿಸುವ ಬದಲು ಅಭಿವೃದ್ಧಿ ವಿಚಾರಗಳ ಕುರಿತು ಚರ್ಚಿಸಲಿ. ಆ ಮೂಲಕ ಮತದಾರರ ಬಳಿ ತೆರಳಲಿ ಎಂದು ಹಾಲಿ ಶಾಸಕರಿಗೆ ಸಲಹೆ ನೀಡಿದರು.

> ಪೊನ್ನಣ್ಣ ಹೊರಗಿನ ಅಭ್ಯರ್ಥಿ ಎಂದು ಬಿಂಬಿಸಲಾಗುತ್ತಿದೆ. ಪೊನ್ನಣ್ಣ ಹುದಿಕೇರಿಯವರಾಗಿದ್ದು, ಕ್ಷೇತ್ರದ ನಿವಾಸಿಯಾಗಿದ್ದಾರೆ. ಈಗಿರುವ ಶಾಸಕರಿಗೆ ವಿರಾಜಪೇಟೆ ಕ್ಷೇತ್ರದಲ್ಲಿ ಕನಿಷ್ಠ ಬಾಡಿಗೆ ಮನೆಯೂ ಇಲ್ಲ. ಅವರು ಮಡಿಕೇರಿ ಕ್ಷೇತ್ರದ ಕಾಲೂರು ಗ್ರಾಮದವರಾಗಿದ್ದು, ಅವರೇ ಹೊರಗಿನ ಅಭ್ಯರ್ಥಿಯಾಗಿದ್ದಾರೆ. ಪೊನ್ನಣ್ಣ ಬಗ್ಗೆ ಮಾತನಾಡುವ ನೈತಿಕತೆ ಅವರಿಗೆ ಇಲ್ಲ.
>
> -ಸಂಕೇತ್ ಪೂವಯ್ಯ

ಬಿಜೆಪಿ ಸರಕಾರ 40 ಪರ್ಸೆಂಟ್ ಸರ್ಕಾರ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷರೇ ಆರೋಪ ಮಾಡಿದ್ದು, ಇದಕ್ಕೆ ಸಾಕ್ಷಿಯೂ ಇದೆ ಎಂದು ಟೀಕಿಸಿದರು. ಜಿಲ್ಲೆಯಲ್ಲಿ ರಸ್ತೆ, ಕುಡಿಯುವ ನೀರು, ಉದ್ಯೋಗ ಸೇರಿದಂತೆ ಮೂಲಭೂತ ಸೌಕರ್ಯಗಳೇ ಇಲ್ಲವಾಗಿದೆ. ಈ ಬಗ್ಗೆ ಶಾಸಕರು ಏನು ಕ್ರಮ ಕೈಗೊಂಡಿದ್ದಾರೆ ಎಂದು ಪ್ರಶ್ನಿಸಿದ ಪ್ರೇಮಾ ಕಾರ್ಯಪ್ಪ, ಈ ಎಲ್ಲಾ ಸಮಸ್ಯೆಗಳ ಪರಿಹಾರ ಸೂಚಿಸಲು ಕಾಂಗ್ರೆಸ್ ಮಾತ್ರವೇ ಸಾಧ್ಯ ಎಂದು ಸಮರ್ಥಿಸಿಕೊಂಡರು. ಜಿಲ್ಲೆಯ ಇಬ್ಬರು ಕಾಂಗ್ರೆಸ್ ಅಭ್ಯರ್ಥಿಗಳು ಯುವ ಮತ್ತು ವಿದ್ಯಾವಂತರಿದ್ದಾರೆ. ಈ ಬಾರಿ ಮತದಾರರು ಬದಲಾವಣೆ ಬಯಸಿದ್ದು, ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ನೀಡುವ ಮೂಲಕ ರಾಜ್ಯದಲ್ಲೀ ಕಾಂಗ್ರೆಸ್ ಅಧಿಕಾರಕ್ಕೆ ತರಲು ಮತದಾರರು ಮುಂದಾಗಬೇಕೆಂದು ಪ್ರೇಮಾ ಕಾರ್ಯಪ್ಪ ಮನವಿ ಮಾಡಿದರು.

ಸಮಸ್ಯೆ ಪರಿಹರಿಸಿಲ್ಲ: ವಿರಾಜಪೇಟೆ ಕ್ಷೇತ್ರವನ್ನು ಕಳೆದ 20 ವರ್ಷಗಳಿಂದ ಪ್ರತಿನಿಧಿಸಿದವರು ಯಾವುದೇ ಮೂಲಭೂತ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗಿಲ್ಲ ಎಂದು ಮಾಜಿ ಎಂಎಲ್‌ಸಿ ಅರುಣ್ ಮಾಚಯ್ಯ ಟೀಕಿಸಿದರು. ರಾಜ್ಯ ಹಾಗೂ ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಪೂರಕವಾದ ವಾತಾವರಣ ಇದೆ. ಆಡಳಿತ ಪಕ್ಷದ ವೈಫಲ್ಯಗಳು ಹಾಗೂ ದೌರ್ಬಲ್ಯಗಳೇ ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್ ಪ್ರಬಲವಾಗಲು ಕಾರಣ ಎಂದು ಹೇಳಿದರು.

ಜಮ್ಮಾ ಬಾಣೆ, ಕಂದಾಯ, ಪರಿಶಿಷ್ಟ ಕಾಲೋನಿಗಳ ಸಮಸ್ಯೆಗಳ ಪರಿಹರಿಸುವ ಚಿಂತನೆಗಳನ್ನೂ ಈಗಿನ ಶಾಸಕರು ಮಾಡಿಲ್ಲ ಎಂದು ಅರುಣ್ ಮಾಚಯ್ಯ ಆರೋಪಿಸಿದರು. ಕೊಡಗಿಗೆ ಕೇಂದ್ರ ಸರಕಾರದಿಂದ ಯಾವುದೇ ವಿಶೇಷ ಯೋಜನೆಗಳು ಜಾರಿಯಾಗಿಲ್ಲ. ಗಡಿ ಪ್ರದೇಶದ ಅಭಿವೃದ್ಧಿಗೂ ಯಾವುದೇ ಯೋಜನೆ ಇಲ್ಲ. ಇದಕ್ಕೆ ಜಿಲ್ಲೆಯ ಶಾಸಕರು ಮತ್ತು ಸಂಸದರು ಕಾರಣರಾಗಿದ್ದಾರೆ. ಮೇ 10ರಂದು ಮತದಾರರು ಇದಕ್ಕೆ ತಕ್ಕ ಉತ್ತರ ನೀಡಲಿದ್ದಾರೆ ಎಂದು ಅರುಣ್ ಮಾಚಯ್ಯ ಹೇಳಿದರು.

ಹಿರಿಯ ಕಾಂಗ್ರೆಸ್ ಮುಖಂಡ ಕೆ.ಬಿ ಶಾಂತಪ್ಪ ಮಾತನಾಡಿ, ಈ ಬಾರಿ ಹೊಸ ಮುಖಗಳಿಗೆ ಬೇಡಿಕೆ ಇದೆ. ಆ ಮೂಲಕ ಜಿಲ್ಲೆಯ ಜನರು ಅಭಿವೃದ್ಧಿಗೆ ಮತ ನೀಡಲು ನಿರ್ಧರಿಸಿದ್ದಾರೆ. ಬಿಜೆಪಿ ಅಪಪ್ರಚಾರ ಮಾಡೋದು ಬೇಡ. ಅಭಿವೃದ್ಧಿಯ ಕುರಿತು ಮಾತನಾಡಿ, ಮತ ಪಡೆಯಲಿ. ಜನರು ಕೂಡ ಬುದ್ಧಿವಂತರಾಗಿದ್ದಾರೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಹೆಚ್.ಎಂ. ನಂದ ಕುಮಾರ್, ಎಂ.ಎ. ಮೊಹಮದ್ ಹಾಜರಿದ್ದರು.

25 ವರ್ಷಗಳಲ್ಲಿ ಆಗದ ಕೆಲಸವನ್ನು ನಾನು ಮಾಡ್ತೀನಿ

ಮಡಿಕೇರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಂಥರ್‌ಗೌಡ



ಸುಂಟಿಕೊಪ್ಪ, ಏ.30– ಈ ಬಾರಿಯ ಚುನಾವಣೆಯಲ್ಲಿ ಮತದಾರರು ಆಶೀರ್ವದಿಸಿದರೆ 25 ವರ್ಷದಲ್ಲಿ ಆಗದ ಕೆಲಸವನ್ನು ನಾನು ಮಾಡಿ ಎಲ್ಲಾ ವರ್ಗದವರಿಗೆ ತಲುಪಿಸುತ್ತೇನೆ ಎಂದು ಮಡಿಕೇರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಮಂಥರ್‌ಗೌಡ ಭರವಸೆ ನೀಡಿದ್ದಾರೆ.

ಸುಂಟಿಕೊಪ್ಪದಲ್ಲಿ ಏರ್ಪಡಿಸಲಾಗಿದ್ದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ದೇಶದ ಸುಭಿಕ್ಷೆಗೆ ಒತ್ತು ನೀಡುತ್ತಿದೆ. ಯುವಕರಿಗೆ ಉದ್ಯೋಗ ನೀಡುವುದು, ಮಹಿಳೆಯರ ಸಬಲೀಕರಣ ನಮ್ಮ ಧ್ಯೇಯವಾಗಿದೆ. ಮಾತ್ರವಲ್ಲದೇ ಎಲ್ಲಾ ಜಾತಿ, ಧರ್ಮದವರ ಶ್ರೇಯೋಭಿವೃದ್ಧಿಗೆ ಶ್ರಮಿಸಲಿದೆ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ, ಹೈಕೋರ್ಟ್ ಹಿರಿಯ ವಕೀಲ ಚಂದ್ರಮೌಳಿ ಮಾತನಾಡಿ, ಕಿರಿಯ ವಯಸ್ಸಿನಲ್ಲಿ ಶಾಸಕನಾಗಲು ಮಂಥರ್‌ಗೌಡರಿಗೆ ಕಾಂಗ್ರೆಸ್ ಗ್ರೀನ್ ಸಿಗ್ನಲ್ ನೀಡಿದ್ದು, ಅವರ ಸಮಾಜಮುಖಿ ಕೆಲಸ ಬಡವರ ಕಲ್ಯಾಣಕ್ಕಾಗಿ ನೀಡಿದ ಕೊಡುಗೆಯಾಗಿದೆ. ಅವರು ಈ ಬಾರಿ ಗೆದ್ದರೆ 30 ವರ್ಷದವರೆಗೆ ಬೇರೆ ಶಾಸಕರು ಇಲ್ಲಿ ಬರಲು ಸಾಧ್ಯವಿಲ್ಲ ಎಂದರು. ಮಾಜಿ ಶಾಸಕ ಕೆ.ಎಂ.ಇಬ್ರಾಹಿಂ, ಕಾಂಗ್ರೆಸ್ ಮುಖಂಡರಾದ ವಿ.ಪಿ.ಶಶಿಧರ್, ಜಿಪಂ ಮಾಜಿ ಸದಸ್ಯೆ ಕೆ.ಪಿ.ಚಂದ್ರಕಲಾ, ಪಿ.ಎಂ.ಲತೀಫ್, ಪ್ರಮುಖರಾದ ಎಂ.ಎ. ವಸಂತ, ಕೊಡಗು ಜಿಲ್ಲಾ ಅಲ್ಪಸಂಖ್ಯಾತ ಕಾಂಗ್ರೆಸ್ ಘಟಕದ ಅಧ್ಯಕ್ಷ ಎಂ.ಎ.ಉಸ್ಮಾನ್ ಅವರುಗಳು ಮಾತನಾಡಿದರು.

ಜಿಪಂ ಮಾಜಿ ಸದಸ್ಯೆ ಸುನೀತಾ, ಸುಂಟಿಕೊಪ್ಪ ಗ್ರಾ.ಪಂ.ಅಧ್ಯಕ್ಷೆ ಶಿವಮ್ಮ ಮಹೇಶ್, ಸದಸ್ಯರುಗಳಾದ ಪಿ.ಎಫ್.ಸಬಾಸ್ಟೀನ್, ರಫೀಕ್‌ಖಾನ್, ಪಿ.ಆರ್.ಸುಕುಮಾರ್, ರಜಾಕ್, ಹಕೀಂ, ಬೆಟ್ಟಗೇರಿ ತೋಟದ ಮಾಲೀಕ ವಿಶಾಲ್ ಶಿವಪ್ಪ ಸುಜಯ್ ಜೀವಿಜಯ ಉಪಸ್ಥಿತರಿದ್ದರು.

ಸುಡಾನ್‌ನಲ್ಲಿ ಸಿಲುಕಿದ್ದ ವಿರಾಜಪೇಟೆಯ ಕುಟುಂಬ ರಕ್ಷಣೆ

ಸುರಕ್ಷಿತವಾಗಿ ಕರೆತಂದ ವಿಪತ್ತು ನಿರ್ವಹಣಾ ಪ್ರಾಧಿಕಾರ

ಮಡಿಕೇರಿ, ಏ.30– ಸುಡಾನ್ ದೇಶದಲ್ಲಿ ಸೇನೆ ಹಾಗೂ ಅರೆ ಸೇನಾಪಡೆಗಳ ನಡುವೆ ಸಂಘರ್ಷ ಸಂಭವಿಸುತ್ತಿದ್ದು, ವಿರಾಜಪೇಟೆ ತಾಲೂಕಿನ ಒಂದು ಕುಟುಂಬವನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರಲಾಗಿದೆ.

ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನ ಮೊಹಿದ್ದೀನ್ ಅವರ ಕುಟುಂಬ ಸುಡಾನಿನ ತೀವ್ರ ಸಂಘರ್ಷದ ಪ್ರದೇಶವಾದ ಖಾರ್ಟೂಮ್‌ನಲ್ಲಿ ಸಿಲುಕಿತ್ತು. ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರಕ್ಕೆ ಈ ಬಗ್ಗೆ ಮಾಹಿತಿ ಬಂದ ಕೂಡಲೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್ ಅವರು ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತ ಆರ್.ಎಂ.ಅನನ್ಯ ವಾಸುದೇವ್ ಅವರಿಗೆ ಈ ಕಾರ್ಯಾಚರಣೆಯ ಜವಾಬ್ದಾರಿಯನ್ನು ವಹಿಸಿದ್ದರು.

ಮೊಹಿದ್ದೀನ್ ಅವರ ಕುಟುಂಬದ ಜೊತೆಗೆ ನಿರಂತರವಾದ ಸಂಪರ್ಕ ಸಾಧಿಸಿ, ಧೈರ್ಯವನ್ನು ತುಂಬಿದ ಅನನ್ಯ ವಾಸುದೇವ್, ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ವಿದೇಶಾಂಗ ಸಚಿವಾಲಯದ ಸಹಯೋಗದೊಂದಿಗೆ ನಿರಂತರ ಸಂಪರ್ಕ ಸಾಧಿಸಿದ್ದರು. ಪರಿಣಾಮ 8 ತಿಂಗಳ ಹಾಗೂ 2.5 ವರ್ಷದ ಮಕ್ಕಳು ಸೇರಿದಂತೆ ಮೊಹಿದ್ದೀನ್ ಅವರ ಕುಟುಂಬದ 6 ಸದಸ್ಯರನ್ನು ಸುರಕ್ಷಿತವಾಗಿ ಭಾರತಕ್ಕೆ ಕ್ಷೇಮವಾಗಿ ಕರೆತರುವಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಯಶಸ್ವಿಯಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ.

'ನಮ್ಮ ನಡೆ ಮತಗಟ್ಟೆ ಕಡೆಗೆ' ಜಾಥಾ, ಧ್ವಜಾರೋಹಣ

ಮಡಿಕೇರಿ, ಏ.30– ಮೇ 10 ರಂದು ನಡೆಯುವ ವಿಧಾನಸಭಾ ಚುನಾವಣೆಯ ಮತದಾನದಂದು ತಪ್ಪದೆ ಅರ್ಹರೆಲ್ಲರೂ ಮತದಾನ ಮಾಡುವಂತಾಗಲು 'ನಮ್ಮ ನಡೆ ಮತಗಟ್ಟೆಯ ಕಡೆಗೆ' ಕಾರ್ಯಕ್ರಮ ಪ್ರಯುಕ್ತ ಜಿಲ್ಲಾಡಳಿತ, ಜಿಲ್ಲಾ ಮತದಾರರ ಶಿಕ್ಷಣ ಮತ್ತು ಸಹಭಾಗಿತ್ವ ಸಮಿತಿ(ಸ್ವೀಪ್) ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ಜಾಥಾವು ಭಾನುವಾರ ನಡೆಯಿತು.

ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಜಾಥಾಗೆ ಚಾಲನೆ ನೀಡಿ ಮಾತನಾಡಿದ ಜಿ.ಪಂ.ಸಿಇಒ ಡಾ.ಎಸ್.ಆಕಾಶ್ ಅವರು, ಮೇ 10 ರಂದು ನಡೆಯುವ ವಿಧಾನಸಭಾ ಚುನಾವಣೆಯ ಮತದಾನದಂದು ಅರ್ಹರೆಲ್ಲರೂ ಮತ ಹಕ್ಕು ಚಲಾಯಿಸಬೇಕು ಎಂದು ಕೋರಿದರು.

ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರಲ್ಲಿ ಮತದಾನದ ಮಹತ್ವ ಕುರಿತು ಸ್ವೀಪ್ ಸಮಿತಿ ವತಿಯಿಂದ ಹಲವು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಆ ನಿಟ್ಟಿನಲ್ಲಿ ಅರ್ಹರು ತಪ್ಪದೆ ಮತ ಚಲಾಯಿಸಬೇಕು ಎಂದು ಸ್ವೀಪ್ ಸಮಿತಿ ಅಧ್ಯಕ್ಷ ಡಾ.ಎಸ್.ಆಕಾಶ್ ಅವರು ಹೇಳಿದರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಪ್ರಧಾನ ಆಯುಕ್ತ ಕೆ.ಟಿ.ಬೇಬಿಮ್ಯಾಥ್ಯು ಅವರು ಮಾತನಾಡಿ, ಮತದಾನಕ್ಕೆ ಅರ್ಹರಾಗಿರುವ ಎಲ್ಲರೂ ತಮ್ಮ ಅಮೂಲ್ಯ



ಮತವನ್ನು ಚಲಾಯಿಸಿ ಪ್ರಜಾಪ್ರಭುತ್ವ ಬಲಪಡಿಸಲು ಮುಂದಾಗಬೇಕು ಎಂದು ಕೋರಿದರು. ಜಾಥಾವು ಮಂಗೇರಿರ ಮುತ್ತಣ್ಣ ವೃತ್ತ, ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ವೃತ್ತದ ಮೂಲಕ ಹಿಲ್ ರಸ್ತೆಯಲ್ಲಿ ಇರುವ ಸರ್ಕಾರಿ ಪ್ರಾಥಮಿಕ ಶಾಲೆಗೆ ತಲುಪಿತು.

ವಿಧಾನಸಭಾ ಚುನಾವಣೆಯ ಜಿಲ್ಲಾ ರಾಯಭಾರಿ ಕೆ.ರವಿಮುತ್ತಪ್ಪ, ಸ್ವೀಪ್ ಸಮಿತಿಯ ನೋಡಲ್ ಅಧಿಕಾರಿ ರಾಜಗೋಪಾಲ್, ನವೀನ್, ಮಡಿಕೇರಿ ತಾಲೂಕು ಜಾನಪದ ಪರಿಷತ್ ಅಧ್ಯಕ್ಷ ಅನಿಲ್ ಎಚ್.ಟಿ., ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿ.ಟಿ.ವಿಸ್ಮಯಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಎಂ.ವಸಂತಿ, ಸಹ ಕಾರ್ಯದರ್ಶಿ ಬೊಳ್ಳಜಿರ ಅಯ್ಯಪ್ಪ, ಜಿಲ್ಲಾ ಸ್ಥಾನಿಕ ಆಯುಕ್ತ ಎಚ್.ಆರ್.ಮುತ್ತಪ್ಪ, ಡೈಸಿ, ಸಿ.ಪಿ.ಕುಟ್ಟಪ್ಪ, ವಿಲ್ಫ್ರೆಡ್ ಕ್ರಾಸ್ತ, ಕೆ.ಯು.ರಂಜಿತ್, ಕೆ.ಬಿ.ಉಷಾರಾಣಿ, ಪ್ರಸನ್ನ, ವಿನಯಿ ಜಾಯ್ಸ್, ವಸಂತ್ ಕುಮಾರ್, ಸರೋಜಿನಿ ದೇವಿ, ಬೋಪಣ್ಣ, ಬೂತ್ ಮಟ್ಟದ ಅಧಿಕಾರಿಗಳಾದ ಸುಮತಿ, ಬಷೀರ್ ಇತರರು ಇದ್ದರು.

ಧ್ವಜಾರೋಹಣ: ನಮ್ಮ ನಡೆ ಮತಗಟ್ಟೆ ಕಡೆಗೆ ಪ್ರಯುಕ್ತ ಜಿಲ್ಲೆಯ ಎಲ್ಲಾ ಮತಗಟ್ಟೆ ಕೇಂದ್ರಗಳಲ್ಲಿ ಭಾನುವಾರ ಧ್ವಜಾರೋಹಣ ಕಾರ್ಯಕ್ರಮ ಜರುಗಿತು.

ಮೇ 10ರಂದು ಪ್ರವಾಸಿ ತಾಣ ಬಂದ್‌ಗೆ ಆಗ್ರಹ


ಮಡಿಕೇರಿ, ಏ.30– ವಿಧಾನಸಭಾ ಚುನಾವಣೆಯಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ಕೊಡಗು ಜಿಲ್ಲೆಯ ಎಲ್ಲಾ ಪ್ರವಾಸಿತಾಣಗಳನ್ನು ಮೇ 10ರಂದು ಬಂದ್ ಮಾಡಬೇಕೆಂದು ಕೊಡಗು ರಕ್ಷಣಾ ವೇದಿಕೆ ಒತ್ತಾಯಿಸಿದೆ.

ಪತ್ರಿಕಾ ಹೇಳಿಕೆ ನೀಡಿರುವ ಕೊರವೇ ಅಧ್ಯಕ್ಷ ಅಚ್ಚಂಡೀರ ಪವನ್ ಪೆಮ್ಮಯ್ಯ, ಮತದಾರರು ಚುನಾವಣೆ ಬಗ್ಗೆ ತಾತ್ಸಾರ ಮನೋಭಾವ ತೋರಿ ಪ್ರವಾಸಿ ತಾಣಗಳೆಡೆಗೆ ಮುಖ ಮಾಡುವುದನ್ನು ತಪ್ಪಿಸಲು ಒಂದು ದಿನ ಬಂದ್ ಮಾಡುವುದು ಸೂಕ್ತ ಎಂದು ಅಭಿಪ್ರಾಯಪಟ್ಟಿದ್ದಾರೆ. ಮತದಾನ ಮಾಡುವ ಮೂಲಕ ಕೊಡಗು ಜಿಲ್ಲೆ ಮಾತ್ರವಲ್ಲದೆ ಇತರ ಜಿಲ್ಲೆಗಳಲ್ಲೂ ದಾಖಲೆ ಪ್ರಮಾಣದ ಮತ ಚಲಾವಣೆಯಾಗಬೇಕು. ಮತದಾನ ಎನ್ನುವುದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಅಸ್ತ್ರವಾಗಿದೆ. ಕೊಡಗು ಜಿಲ್ಲೆಯಲ್ಲಿ ಅತ್ಯಧಿಕ ಮತದಾನವಾಗಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ ಎಂದರು.


ನಾಳೆ ಹನೂರಿಗೆ ಅಮಿತ್ ಶಾ

ಬಿಜೆಪಿ ಅಭ್ಯರ್ಥಿ ಡಾ. ಪ್ರೀತನ್ ನಾಗಪ್ಪ ಪರ ಪ್ರಚಾರ

ಹನೂರು, ಏ.30– ಕೇಂದ್ರ ಗೃಹ ಮಂತ್ರಿ, ರಾಜಕೀಯ ಚಾಣಕ್ಯ ಅಮಿತ್ ಶಾ ಅವರು ಮೇ 2ರಂದು ಹನೂರಿಗೆ ಆಗಮಿಸಲಿದ್ದು, ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಪ್ರೀತ್‌ನ್ ನಾಗಪ್ಪ ಪರ ಚುನಾವಣಾ ಪ್ರಚಾರ ನಡೆಸಲಿದ್ದಾರೆ. ಪಕ್ಷದ ಕಾರ್ಯಕರ್ತರು, ಮುಖಂಡರುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ ಮನವಿ ಮಾಡಿದ್ದಾರೆ.



ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 2ರಂದು ಅಮಿತ್ ಶಾ ಅವರ ಸೂಚನೆಯಂತೆ ಸಾರ್ವಜನಿಕರ ಬೃಹತ್ ಸಮಾವೇಶವನ್ನು ಆಯೋಜಿಸಲಾಗಿದ್ದು, ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಲಿದ್ದಾರೆ. ಇವರ ಜೊತೆಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಇನ್ನಿತರೆ ನಾಯಕರುಗಳು ಆಗಮಿಸಲಿದ್ದಾರೆ. ಹನೂರಿನಲ್ಲಿ ಕಮಲ ಅರಳಿಸಲೇಬೇಕು ಎಂಬ ಉದ್ದೇಶದಿಂದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಗೆ ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಧಾರ್ಮಿಕ ಪುಣ್ಯಸ್ಥಳ ಮಲೆಮಹದೇಶ್ವರ ಬೆಟ್ಟದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಚಾಲನೆ ನೀಡಿದ್ದರು. ಇದೀಗ ಹನೂರಿಗೆ ಅಮಿತ್ ಶಾ ಬರುತ್ತಿದ್ದಾರೆ ಎಂದರು.



ಬಿಜೆಪಿ ಒಬಿಸಿ ರಾಜ್ಯ ಕಾರ್ಯಕಾರಿಣಿ ಜನಧ್ವನಿ ಬಿ. ವೆಂಕಟೇಶ್ ಮಾತನಾಡಿ, ಅಂದು ಇರುವುದು ಬಿಜೆಪಿಯಲ್ಲೆ, ಇಂದು ಇರುವುದು ಬಿಜೆಪಿಯಲ್ಲೇ, ಮುಂದೆಯೂ ಬಿಜೆಪಿಯಲ್ಲೇ ಇರಲಿದ್ದೇನೆ. ನಮ್ಮ ಗುರಿ ಒಂದೇ ಹನೂರಿನಲ್ಲಿ ಬಿಜೆಪಿ ಗೆಲ್ಲಿಸುವುದೇ ಆಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಚಾಮರಾಜನಗರ ಉಸ್ತುವಾರಿ ದಿಲೀಪ್‌ಕುಮಾರ್ ಜೈಸ್ವಾಲ್, ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿ ಸದಸ್ಯ ನೂರೊಂದು ಶೆಟ್ಟಿ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಡಾ. ದತ್ತೇಶ್ ಕುಮಾರ್, ಬಿಜೆಪಿ ಅಭ್ಯರ್ಥಿ ಡಾ. ಪ್ರೀತನ್ ನಾಗಪ್ಪ, ಹನೂರು ಮಂಡಲ ಅಧ್ಯಕ್ಷ ಸಿದ್ದಪ್ಪ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಉಪಾಧ್ಯಕ್ಷ ಜಗನಾಥ್ ನಾಯ್ಡು, ಮಾಧ್ಯಮ ವಕ್ತಾರ ಬಿ.ಕೆ. ಶಿವಕುಮಾರ್, ಕಾಮಗೆರೆ ಮಧು, ಮುಖಂಡರಾದ ವೆಂಕಟರಾಜು, ವೆಂಕಟೇಗೌಡ, ಮಂಜು, ಲೋಕೇಶ್ ಜತ್ತಿ, ಅರವಿಂದ್ ಸೇರಿದಂತೆ ಇನ್ನಿತರರು ಹಾಜರಿದ್ದರು.

145 ಪದವೀಧರರಿಗೆ ವೈದ್ಯಕೀಯ ಪ್ರಮಾಣಪತ್ರ ಪ್ರದಾನ

ಚಾಮರಾಜನಗರ, ಏ.30– ನಗರದ ಸಮೀಪದ ಯಡಬೆಟ್ಟದ ಬಳಿ ಇರುವ ಚಾಮರಾಜನಗರ ಸರ್ಕಾರಿ ವೈದ್ಯಕೀಯ ಕಾಲೇಜಿನ ಆವರಣದಲ್ಲಿ ನಡೆದ ಎರಡನೇ ಘಟಿಕೋತ್ಸವದಲ್ಲಿ ಎಂಬಿಬಿಎಸ್ ಪದವಿಯನ್ನು ಪೂರ್ಣಗೊಳಿಸಿದ 145 ಪದವೀಧರರಿಗೆ ಆದಿಚುಂಚನಗಿರಿ ವಿವಿ ಕುಲಪತಿ ಡಾ.ಎಂ.ಎ. ಶೇಖರ್ ಪ್ರಮಾಣಪತ್ರ ವಿತರಿಸಿದರು.



ನಂತರ ಮಾತನಾಡಿ, ವೈದ್ಯ ವೃತ್ತಿಯಲ್ಲಿ ನಂಬಿಕೆ, ತಾಳ್ಮೆ ಸಹನೆ ಅಗತ್ಯ. ನಾವು ಎಲ್ಲ ದಿನಾಚರಣೆಗಳನ್ನು ಆಚರಣೆ ಮಾಡುತ್ತೇವೆ. ಆದರೆ ಜೀವನದಲ್ಲಿ ಒಮ್ಮೆ ಬರಲಿರುವ ಯಾವುದಾದರೂ ದಿನ ಇದ್ದರೆ ಅದು 'ಪ್ರೆಸರ್ಸ್ ಡೇ' ಎಂಬುದೇ ವಿಶೇಷ. ನಿಮ್ಮ ಮುಂದಿನ ವೈದ್ಯ ವೃತ್ತಿ ಆರೋಗ್ಯಕರವಾಗಿ ಮುಂದುವರೆಯಲಿ ಎಂದು ಸಲಹೆ ನೀಡಿದರು. ರೋಗಿಗಳ ಸೇವೆ ಮಾಡುವುದು ಒಂದು ಅವಿಸ್ಮರಣೀಯ ಕ್ಷಣ, ನೀವು ಮಾಡುವ ಸೇವೆ ನಿಮ್ಮನ್ನು ಎತ್ತರಕ್ಕೆ ಕೊಂಡೊಯ್ಯಲಿದೆ. ವೈದ್ಯ ವೃತ್ತಿ ತ್ಯಾಗದ ಪ್ರತೀಕವೇ ಆಗಿದೆ. ವೈದ್ಯ ವೃತ್ತಿಯಲ್ಲಿ ನಂಬಿಕೆ, ತಾಳ್ಮೆ ಸಹನೆ ಅಗತ್ಯ ಎಂದರು.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ರಾಷ್ಟ್ರೀಯ ಆರೋಗ್ಯ ವ್ಯವಸ್ಥೆ ಸಂಪನ್ಮೂಲ ಕೇಂದ್ರದ ಸಲಹೆಗಾರರಾದ ಡಾ.ಎಂ.ಎ. ಬಾಲಸುಬ್ರಹ್ಮಣ್ಯ ಮಾತನಾಡಿ, ದೇಶ ಅಭಿವೃದ್ಧಿ ಹೊಂದಿರುವ ದೇಶ ಮಾತ್ರವಲ್ಲ. 2047ರ ಹೊತ್ತಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಶೇ 100ರಷ್ಟು ಸಾಧನೆ ಮಾಡುವ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದೆ ಎಂದರು.

ಎಂಬಿಬಿಎಸ್ ಪದವಿ ಪ್ರಮಾಣಪತ್ರ ಪಡೆದ ಡಾ.ಹರ್ಷವರ್ಧನ್, ಡಾ.ಸುಜನ್ ತಮ್ಮ ಐದೂವರೆ ವರ್ಷಗಳ ವೈದ್ಯಕೀಯ ಶಿಕ್ಷಣ ಕುರಿತ ತಮ್ಮ ಅನಿಸಿಕೆಯನ್ನು ಹಂಚಿಕೊಂಡರು. ಬಯೋಕೆಮಿಸ್ಟ್ರಿ ವಿಭಾಗದ ಮುಖ್ಯಸ್ಥೆ ಡಾ.ದೇವಕಿ ಪ್ರತಿಜ್ಞಾವಿಧಿ ಬೋಧಿಸಿದರು.

ಟಾಪರ್ ಅನ್ನತೇರೆ ಸಾಜೋಸೆಫ್, ವಿ.ನೀತು, ಸಿ.ಅಶ್ವಿನಿ, ಫಿದಾತ್ನಿಸಿಮ್ ಸೇರಿದಂತೆ 145 ವೈದ್ಯಕೀಯ ಶಿಕ್ಷಣ ಪೂರೈಸಿ ವೈದ್ಯರಾಗಿ ಪ್ರಮಾಣಪತ್ರ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಸಿಮ್ಸ್ ಡೀನ್ ಮತ್ತು ನಿರ್ದೇಶಕ ಡಾ.ಜಿ.ಎಂ. ಸಂಜೀವ್, ಪ್ರಾಂಶುಪಾಲ ಡಾ.ಗಿರೀಶ್ ಪಾಟೀಲ್, ಆಡಳಿತಾಧಿಕಾರಿ ಮಂಜುನಾಥ್, ಜಿಲ್ಲಾಸ್ಪತ್ರೆ ಶಸ್ತ್ರಚಿಕಿತ್ಸಕ ಡಾ.ಎಚ್.ಎಸ್. ಕೃಷ್ಣಪ್ರಸಾದ್ ಸೇರಿದಂತೆ ನಾನಾ ವಿಭಾಗಗಳ ಮುಖ್ಯಸ್ಥರು, ಬೋಧಕೇತರ ಸಿಬ್ಬಂದಿ ಹಾಜರಿದ್ದರು.

ಅಬಕಾರಿ ಕಾರ್ಯಾಚರಣೆ: ಅಕ್ರಮ ಮದ್ಯ ವಶ

ಚಾಮರಾಜನಗರ, ಏ.30– ಅಬಕಾರಿ ಇಲಾಖೆ ಅಧಿಕಾರಿಗಳು ವಿವಿಧೆಡೆ ತಪಾಸಣೆ ಕಾರ್ಯ ಮುಂದುವರೆಸಿದ್ದು, ಶುಕ್ರವಾರ(ಏ. 28) ದಂದು ಗುಂಡ್ಲುಪೇಟೆ ತಾಲೂಕಿನ ಹಂಗಳ ಹೋಬಳಿಯ ಬೊಮ್ಮಲಾಪುರ ಗ್ರಾಮದಲ್ಲಿರುವ ಲಕ್ಷ್ಮೀ ವೆಂಕಟೇಶ್ವರ ವೈನ್‌ಶಾಪ್‌ಗೆ ಭೇಟಿ ನೀಡಿ ತಪಾಸಣೆ ನಡೆಸಿದ ವೇಳೆ ಭೌತಿಕ ದಾಸ್ತಾನು ಲೆಕ್ಕದಲ್ಲಿ ವ್ಯತ್ಯಾಸ ಕಂಡು ಬಂದಿದ್ದು, ಈ ಹಿನ್ನೆಲೆಯಲ್ಲಿ ಅಂದಾಜು ಒಟ್ಟು 27 ಲಕ್ಷ ರೂ. ಮೌಲ್ಯದ ಮದ್ಯವನ್ನು ವಶಪಡಿಸಿಕೊಂಡಿದ್ದು, ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ.

ಕೊಳ್ಳೇಗಾಲ ವಲಯ ವ್ಯಾಪ್ತಿಯ ರಾಮಾಪುರದಲ್ಲಿ ಶನಿವಾರ ಗಸ್ತು ನಡೆಸುತ್ತಿದ್ದ ವೇಳೆ ಮಾಹಿತಿ ಮೇರೆಗೆ ದ್ವಿಚಕ್ರ ವಾಹನದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 10434 ರೂ. ಮೌಲ್ಯ ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ. ವಾಹನದ ಮೌಲ್ಯ 65 ಸಾವಿರ ರೂ.ಗಳಾಗಿವೆ. ಆರೋಪಿಯನ್ನು ಬಂಧಿಸಿ ಮೊಕದ್ದಮೆ ದಾಖಲಿಸಲಾಗಿದೆ ಎಂದು ಅಬಕಾರಿ ಇಲಾಖೆ ಪ್ರಕಟಣೆ ತಿಳಿಸಿದೆ.

ಚಾ.ನಗರ ಕ್ಷೇತ್ರ ಗುಡಿಸಲು ಮುಕ್ತ ಮಾಡಲು ನನಗೊಂದು ಅವಕಾಶ ಕೊಡಿ

ಮತದಾರರಲ್ಲಿ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಮನವಿ



ಚಾಮರಾಜನಗರ, ಏ.30– ಚಾಮರಾಜನಗರ ಕ್ಷೇತ್ರವನ್ನು ಗುಡಿಸಲು ಮುಕ್ತ ಮಾಡಲು ನನಗೊಂದು ಅವಕಾಶ ಕೊಡಿ ಎಂದು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಮನವಿ ಮಾಡಿದರು.

ಕ್ಷೇತ್ರದ ಉಪ್ಪಾರ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿ ವಾಸವಿರುವ ಬಂಡಿಗೆರೆ ಗ್ರಾಮದಲ್ಲಿ ಭರ್ಜರಿ ಮತಬೇಟೆ ನಡೆಸಿ ಅವರು ಮಾತನಾಡಿದರು. ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ಬಂಡಿಗೆರೆ ಗ್ರಾಮಕ್ಕೆ ಎಲ್ಲ ಸವಲತ್ತು ಕಲ್ಪಿಸಿಕೊಡಲಾಗಿದೆ. ಗ್ರಾಮಕ್ಕೆ 250 ಮನೆಯಲ್ಲ ಇನ್ನೊಂದು ವರ್ಷದಲ್ಲಿ ಬಂಡಿಗೆರೆ ಸೇರಿದಂತೆ ಕ್ಷೇತ್ರದಲ್ಲಿ ಒಂದು ಗುಡಿಸಲು ಮನೆ ಇರಬಾರದು. ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಕ್ಷೇತ್ರಕ್ಕೆ ಮಾಡಿಕೊಡುತ್ತೇನೆ ಎಂದರು.

ನಾನು ಜಾತಿ ರಾಜಕಾರಣ ಮಾಡಲು ಸಮಾಜವನ್ನು ಇಬ್ಭಾಗ ಮಾಡಲು ಬಂದಿಲ್ಲ. ಜನಸೇವೆ ಮಾಡುವ ಬಯಕೆಯಿಟ್ಟುಕೊಂಡು ಬಂದಿದ್ದೇನೆ. ಮೂರು ಬಾರಿ ಪುಟ್ಟರಂಗಶೆಟ್ಟರಿಗೆ ಅವಕಾಶ ಕೊಟ್ಟಿದ್ದೀರಿ. ಈ ಬಾರಿ ನನಗೊಂದು ಬಾರಿ ಅವಕಾಶ ಕೊಟ್ಟು ನೋಡಿ ಅಭಿವೃದ್ಧಿ ಹೇಗೆ ಮಾಡುತ್ತೇನೆ ಎಂಬುವುದು 6 ತಿಂಗಳಲ್ಲೇ ಬೆಂಗಳೂರಿನ ಗೋವಿಂದರಾಜನಗರ ಮಾದರಿಯಲ್ಲೇ ಚಾಮರಾಜನಗರ ಕ್ಷೇತ್ರವನ್ನು ಅಭಿವೃದ್ಧಿ ಮಾಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ಚಿತ್ರನಟ ಶಂಕರಬಾಬು, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಕೂಡ್ಲೂರು ಹನುಮಂತಶೆಟ್ಟಿ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಂಗಲಶಿವಕುಮಾರ್, ಓಬಿಸಿ ಜಿಲ್ಲಾ ಉಪಾಧ್ಯಕ್ಷ ಪ್ರಕಾಶ್‌ಶೆಟ್ಟಿ, ತಾಲೂಕು ಉಪ್ಪಾರ ಸಂಘದ ಉಪಾಧ್ಯಕ್ಷ ಆರ್.ಮಹದೇವಶೆಟ್ಟಿ, ಕಾರ್ಯದರ್ಶಿ ಮಂಜುಳ, ರವಿ, ಬಂಗಾರಶೆಟ್ಟಿ, ಗಣೇಶ್, ಕುಮಾರ್, ಶಿವನಂಜಶೆಟ್ಟಿ, ನಾಗೇಂದ್ರ, ಗೋವಿಂದ, ಕೃಷ್ಣಶೆಟ್ಟಿ, ತಾಂಡವಮೂರ್ತಿ, ಜಯಗಣೇಶ್, ಸಿದ್ದಪ್ಪಾಜಿ, ಸಿದ್ದರಾಜು, ಮಹೇಶ್, ಗಿರೀಶ್, ಮಹದೇವಸ್ವಾಮಿ ತಬಲ ಶಿವಸ್ವಾಮಿ, ನಾಗರಾಜು ಇತರರು ಹಾಜರಿದ್ದರು.

'ನಮ್ಮ ನಡೆ ಮತಗಟ್ಟೆ' ಕಡೆ ಮತದಾನ ಜಾಗೃತಿ ಕಾರ್ಯಕ್ರಮ



ಚಾಮರಾಜನಗರ, ಏ. 30– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಕಮಿಟಿ ಮತ್ತು ನಗರಸಭೆ, ತಾಲೂಕು ಪಂಚಾಯತ್ ಸಂಯುಕ್ತಾಶ್ರಯದಲ್ಲಿ ಭಾನುವಾರ ನಮ್ಮ ನಡೆ ಮತಗಟ್ಟೆ ಕಡೆ ಮತದಾನ ಜಾಗೃತಿ ಕಾರ್ಯಕ್ರಮ ನಗರದಲ್ಲಿ ನಡೆಯಿತು.

ನಗರಸಭಾ ಕಚೇರಿ ಮುಂಭಾಗದಿಂದ ಆರಂಭವಾದ ಮತದಾನ ಜಾಗೃತಿ ಜಾಥಾ ಭುವನೇಶ್ವರಿ ವೃತ್ತಕ್ಕೆ ತೆರಳಿ ಅಲ್ಲಿ ಕೆಲಕಾಲ ಮತದಾನ ಕುರಿತು ಜಾಗೃತಿ ಮೂಡಿಸಲಾಯಿತು. ನಗರಸಭಾ ಪೌರಾಯುಕ್ತ ರಾಮ್‌ದಾಸ್ ಮತದಾರರ ಪ್ರತಿಜ್ಞಾ ವಿಧಿ ಬೋಧಿಸಿದರು.

ಮತದಾನ ಮಾಡುವುದು ಪ್ರತಿಯೊಬ್ಬರ ಹಕ್ಕು: ಮತದಾನ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿದ ಚುನಾವಣಾಧಿಕಾರಿ ಯೋಗಾನಂದ ಮಾತನಾಡಿ, ಮತದಾನ ಮಾಡುವುದು ಪ್ರತಿಯೊಬ್ಬರ ಹಕ್ಕು. ಯಾವುದೇ ಆಸೆ, ಆಮಿಷಗಳಿಗೆ ಒಳಗಾಗದೇ ಯಾವ ಭಯವಿಲ್ಲದೆ ನಿರ್ಭೀತಿಯಿಂದ ಮೇ 10 ರಂದು ನಡೆಯುವ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಎಲ್ಲಾ ಮತದಾರರು ಮತಗಟ್ಟೆಗೆ ತೆರಳಿ ತಪ್ಪದೆ ಕಡ್ಡಾಯವಾಗಿ ಮತದಾನ ಮಾಡುವ ಮೂಲಕ ಸುಭದ್ರ ಸರ್ಕಾರ ರಚನೆ ಮಾಡಲು ಕಾರಣೀಭೂತರಾಗಿ ಎಂದು ಹೇಳಿದರು.

ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ತಾ.ಪಂ.ಇಓ ಪೂರ್ಣಿಮಾ, ಬಿಇಓ ಸೋಮಣ್ಣೇಗೌಡ, ನಗರಸಭೆಯ ರಾಜಸ್ವ ನಿರೀಕ್ಷಕ ನಾರಾಯಣ್, ಕಂದಾಯಾಧಿಕಾರಿ ಶರವಣ, ಆರೋಗ್ಯ ನಿರೀಕ್ಷಕರಾದ ಮಂಜು, ಪುಷ್ಪಾ ಇತರರು ಭಾಗವಹಿಸಿದ್ದರು.


ಪಾಪಣ್ಣ ನಿಧನ

ಚಾಮರಾಜನಗರ, ಏ.30– ತಾಲೂಕಿನ ಉಡಿಗಾಲ ಗ್ರಾಮದ ನಿವಾಸಿ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಉಡಿಗಾಲ ಪಾಪಣ್ಣ (65) ಅವರು ಭಾನುವಾರ ಬೆಳಗ್ಗೆ ನಿಧನರಾದರು.



ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಉಡಿಗಾಲ ಗ್ರಾಮದ ಅವರ ತೋಟದಲ್ಲಿ ಸಂಜೆ ನಡೆಯಿತು.

ನಕ್ಷತ್ರ ಆಮೆ, ಜಿಂಕೆ ಕೊಂಬು ಮಾರುತ್ತಿದ್ದ ಇಬ್ಬರ ಬಂಧನ







ಮಂಜಚಾರಿ



ಫೈರೋಜ್ ಖಾನ್

ಕೊಳ್ಳೇಗಾಲ, ಏ. 30– ಕೊಳ್ಳೇಗಾಲದ ಸಿಐಡಿ ಫಾರೆಸ್ಟ್ ಮೊಬೈಲ್ ಸ್ಕ್ವಾಡ್ ದಾಳಿ ನಡೆಸಿ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಜಿಂಕೆ ಕೊಂಬು ಮತ್ತು ಜೀವಂತ ನಕ್ಷತ್ರ ಆಮೆ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿ, ಅವರಿಂದ ಮಾಲುಗಳನ್ನು ವಶಪಡಿಸಿಕೊಂಡಿದ್ದಾರೆ. ತುಮಕೂರು ಜಿಲ್ಲೆ ಕುಣಿಗಲ್ ತಾಲೂಕು ಚಟ್ನಹಳ್ಳಿ ಗ್ರಾಮದ ಫೈರೋಜ್ ಖಾನ್(36) ಎಂಬಾತ ಪಟ್ಟಣದ ಸರಗೂರು ಬಸ್ ನಿಲ್ದಾಣದ ಬಳಿ ಜೀವಂತ ನಕ್ಷತ್ರ ಆಮೆಯನ್ನು ಮಾರಾಟ ಮಾಡುತ್ತಿದ್ದಾಗ, ಸಿಐಡಿ ಅರಣ್ಯ ಸಂಚಾರ ದಳದ ಪೊಲೀಸರು ದಾಳಿ ನಡೆಸಿ, ಆಮೆಯನ್ನು ರಕ್ಷಿಸುವುದರೊಂದಿಗೆ ಆರೋಪಿಯನ್ನು ಬಂಧಿಸಿ ನಗದನ್ನು ವಶಪಡಿಸಿಕೊಂಡಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಮೈಸೂರು ತಾಲೂಕು ಕೂರ್ಗಳ್ಳಿ ಹೊಸ ಬಡಾವಣೆಯ ನಿವಾಸಿ ಮಂಜಚಾರಿ(42) ಎಂಬಾತನು ಇಲ್ಲಿನ ನರಿಪುರ ಗ್ರಾಮದ ಬಸ್ ನಿಲ್ದಾಣದ ಬಳಿ ಜಿಂಕೆಯ ಕೊಂಬುಗಳನ್ನು ಮಾರುತ್ತಿದಾಗ ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ದಾಳಿ ನಡೆಸಿ ಅವರನ್ನು ಬಂಧಿಸಿ, ಜಿಂಕೆಯ ಕೊಂಬು, ಮೊಬೈಲ್ ಮತ್ತು ನಗದನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಗೋಕುಲಂನಲ್ಲಿ ನಾಗೇಂದ್ರ ಬಿರುಸಿನ ಪ್ರಚಾರ



ಮೈಸೂರು,ಏ.30–ಮೈಸೂರಿನ ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಲ್.ನಾಗೇಂದ್ರ ಅವರು ಗೋಕುಲಂನ 1ನೇ ಹಂತದಲ್ಲಿ ಬಿರುಸಿನ ಮತ ಪ್ರಚಾರ ನಡೆಸಿದರು. ತಮ್ಮ ಶಾಸಕ ಅವಧಿಯಲ್ಲಿ ತಾವು ಕೈಗೊಂಡ ಅಭಿವೃದ್ಧಿ ಕಾರ್ಯವನ್ನು ಮತದಾರರಿಗೆ ಮನವರಿಕೆ ಮಾಡಿದರು. ಈ ಮೂಲಕ ಮತ್ತೊಮ್ಮೆ ಆಶೀರ್ವದಿಸಲು ಮನವಿ ಮಾಡಿದರು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಗಿರೀಶ್ ಪ್ರಸಾದ್, ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ವಿ.ಮಧು, ಕ್ಷೇತ್ರ ಅಧ್ಯಕ್ಷ ಸೋಮಶೇಖರ ರಾಜು, ಎಂ.ಚಿಕ್ಕವೆಂಕಟು, ವಾರ್ಡ್ ಅಧ್ಯಕ್ಷ ಅಶೋಕ್, ಜಯಣ್ಣ, ಬುಲೆಟ್ ಬಸವರಾಜು, ದಶರಥ, ಸರ್ವಿಸ್ ಸ್ಟೇಷನ್ ಪ್ರಕಾಶ್, ಪೇಪರ್ ಪ್ರಕಾಶ್, ಹನುಮಂತ, ರಂಗಸ್ವಾಮಿನಾಯಕ, ಮಹೇಶ್, ಎನ್.ಜನಾರ್ಧನ್, ಜೀವನ್ ಪ್ರಕಾಶ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ ಎಸ್‌ಆರ್‌ಎಸ್ ಶಿವಕುಮಾರ್, ಪೇಂಟ್ ಪ್ರಕಾಶ್, ಪಾಲ್ಸನ್ ಪ್ರಸನ್ನ, ಚಂದ್ರಶೇಖರ್, ಈ.ಬಸವರಾಜು, ಗೋಪಾಲ, ನಾರಾಯಣಗೌಡ, ಗಜ, ರವಿಕುಮಾರ್, ಗಣೇಶ್ ಮತ್ತಿತರರಿದ್ದರು.



ಕೆಪಿಸಿಸಿ ಕಾರ್ಯದರ್ಶಿ ಹಾಗೂ ನಾಗವಾಲ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ ಅವರು ಇಲವಾಲ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕಮರಹಳ್ಳಿ ಸಂತೋಷ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಧನಳ್ಳಿ ಪ್ರವೀಣ್, ಚಾಮುಂಡೇಶ್ವರಿ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಸ್.ಆರ್.ಎಸ್. ವಿನೋದ್, ಗ್ರಾಪಂ ಸದಸ್ಯ ನಾಗವಾಲ ಮಂಜು, ಕಾಂಗ್ರೆಸ್ ಮುಖಂಡರಾದ ಬೊಮ್ಮೇನಹಳ್ಳಿ ಶಿವರಾಜು, ನಾಗವಾಲ ಶಿವು, ನಂದಕುಮಾರ್ ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಮೋದಿ ಮಂತ್ರ

ತೆರೆದ ವಾಹನದಿಂದಿಳಿದ ಮೋದಿ ಜನರತ್ತ ಕೈಬೀಸಿ, ಕಾರನ್ನೇರಿ ರಿಂಗ್ ರಸ್ತೆ ಮೂಲಕ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ತೆರಳಿದರು. ಮೋದಿ ರೋಡ್ ಶೋಗೆ ಸಂಸದ ಪ್ರತಾಪ್ ಸಿಂಹ, ಶಾಸಕ ಎಸ್.ಎ.ರಾಮದಾಸ್, ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಸಾಥ್ ನೀಡಿದರು. ಕೃಷ್ಣರಾಜ, ಚಾಮರಾಜ ಹಾಗೂ ನರಸಿಂಹರಾಜ ವಿಧಾನಸಭಾ ಕ್ಷೇತ್ರಗಳ ಭೌಗೋಳಿಕ ವ್ಯಾಪ್ತಿಯಲ್ಲಿ ಮೋದಿ ರೋಡ್ ಶೋ ನಡೆಸುವ ಮೂಲಕ ಬಿಜೆಪಿ ಕಾರ್ಯಕರ್ತರಿಗೆ ಬೂಸ್ಟರ್ ನೀಡುವುದರೊಂದಿಗೆ, ಪಕ್ಷದ ಅಭ್ಯರ್ಥಿಗಳ ಪರ ಮತಬೇಟೆ ನಡೆಸಿದರು. ಮಾರ್ಗದುದ್ದಕ್ಕೂ ಇಕ್ಕೆಲಗಳಲ್ಲಿ ಬಿಜೆಪಿ ಕಾರ್ಯಕರ್ತರು, ಸಾರ್ವಜನಿಕರು ಕಿಕ್ಕಿರಿದಿದ್ದರು. ಮಹಿಳೆಯರು, ಮಕ್ಕಳು, ವೃದ್ಧರಾದಿಯಾಗಿ ಮೋದಿ ಅವರನ್ನು ನೋಡಲು ಸಾವಿರಾರು ಜನ ಆಗಮಿಸಿದ್ದರು. ಕೇಸರಿ ರುಮಾಲು, ಶಲ್ಯ, ಮೈಸೂರು ಪೇಟ ಧರಿಸಿದ್ದ 150ಕ್ಕೂ ಅಧಿಕ ಕಾರ್ಯಕರ್ತರು ಬಿಜೆಪಿ ಬಾವುಟ ಹಿಡಿದು ಮೋದಿ ಅವರ ವಾಹನಕ್ಕಿಂತ 100 ಮೀಟರ್ ಮುಂದೆ ಸಾಗಿದರು. ಮಹಿಳೆಯರು ಹಾಗೂ ಯುವತಿಯರೂ ಭಾಗಿಯಾದರು. ಗನ್‌ಹೌಸ್ ವೃತ್ತ, ಪಾಠಶಾಲೆ ಜಂಕ್ಷನ್, ಚಿಕ್ಕಗಡಿಯಾರ ಸೇರಿದಂತೆ ಮಾರ್ಗದುದ್ದಕ್ಕೂ ನಿಗದಿತ ಸ್ಥಳದಲ್ಲಿ ವಿಭಿನ್ನ ಕಲಾ ಪ್ರಕಾರಗಳ ಪ್ರದರ್ಶನದಲ್ಲಿ ರೋಡ್ ಶೋ ಮೆರಗು ಹೆಚ್ಚಿಸಿತು.

ದಸರಾ ಮಾರ್ಗದಲ್ಲಿ ರೋಡ್ ಶೋ: ಜಂಬೂಸವಾರಿ ಸಾಗುವ ಮಾರ್ಗದಲ್ಲೇ ಪ್ರಧಾನಿ ಮೋದಿ ರೋಡ್ ಶೋ ನಡೆದಿದ್ದು ವಿಶೇಷ. ಇದಕ್ಕಾಗಿ ದಸರಾ ಮಾದರಿಯಲ್ಲೇ ರಾಜಮಾರ್ಗದ ಇಕ್ಕೆಲಗಳಲ್ಲಿ ಬ್ಯಾರಿಕೇಡ್ ನಿರ್ಮಿಸುವುದರ ಜೊತೆಗೆ ಅಲ್ಲಲ್ಲಿ ಫೋಕಸ್ ಲೈಟ್‌ಗಳನ್ನು ಅಳವಡಿಸಲಾಗಿತ್ತು. ಮೈಸೂರು ಹಾಗೂ ಸುತ್ತಮುತ್ತಲ ಊರುಗಳಿಂದ ಜನ ಆಗಮಿಸಿ, ರಸ್ತೆಯ ಇಕ್ಕೆಲಗಳಲ್ಲಿ ನೆರೆದಿದ್ದರು. ತೆರೆದ ವಾಹನದಲ್ಲಿ ಮೋದಿ ಬರುತ್ತಿದ್ದಂತೆ ಜಯಘೋಷ ಕೂಗಿ ಹರ್ಷ ವ್ಯಕ್ತಪಡಿಸಿದರು. ಮುಂಭಾಗ ನಿಂತಿದ್ದವರು ಮೋದಿಗೆ ಹೂಮಳೆಗರೆದರು. ಮಳೆಯ ಆತಂಕದ ನಡುವೆಯೂ ಮೋದಿ ಅವರ ರೋಡ್ ಶೋ ಯಶಸ್ವಿಯಾಯಿತು.

ಸಿಂಗಾರಗೊಂಡಿದ್ದ ವೃತ್ತ: ಮೋದಿ ರೋಡ್ ಶೋ ಆರಂಭವಾದ ಗನ್‌ಹೌಸ್ ಬಳಿಯ ವೃತ್ತವನ್ನು ಸಿಂಗರಿಸಲಾಗಿತ್ತು. ಮೋದಿ ಅವರ ಅಪರೂಪದ ಫೋಟೋಗಳಿಂದ ನಿರ್ಮಿಸಿದ್ದ ಉದ್ದವಾದ ಬ್ಯಾನರ್ ಅನ್ನು ವೃತ್ತದ ಸುತ್ತಲೂ ಅಳವಡಿಸಲಾಗಿತ್ತು. ವೃತ್ತದ ಮಧ್ಯೆ ತಾತ್ಕಾಲಿಕ ಗೋಪುರವಿಟ್ಟು ಅದರ ಸುತ್ತಲೂ ಮೋದಿ ಅವರ ಫೋಟೋ ಅಳವಡಿಸಲಾಗಿತ್ತು. ಮೋದಿ ತಮ್ಮ ತಾಯಿ ಹೀರಾಬೆನ್ ಜೊತೆಗಿರುವ ಫೋಟೋ ಸೇರಿದಂತೆ ವಿಶೇಷ ಭಾವಚಿತ್ರವಿರುವ ಫ್ಲೆಕ್ಸ್‌ಗಳನ್ನು ಅಲ್ಲಲ್ಲಿ ಅಳವಡಿಸಲಾಗಿತ್ತು. ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸುತ್ತಿರುವ ಪ್ರಧಾನಿ ಮೋದಿ ಅವರಿಗೆ ಸುಸ್ವಾಗತ ಎಂಬ ಸ್ವಾಗತ ಕಮಾನು ನಿರ್ಮಿಸಲಾಗಿತ್ತು. ವೃತ್ತದಲ್ಲಿ ಬಿಜೆಪಿ ಬಾವುಟಗಳು ರಾರಾಜಿಸಿದ್ದವು. ಅಲ್ಲದೆ ವರ್ಣಮಯ ರಂಗೋಲಿಯಿಂದ ವೃತ್ತವನ್ನು ಸಿಂಗರಿಸಲಾಗಿತ್ತು. ಗನ್‌ಹೌಸ್ ವೃತ್ತ ಸೇರಿದಂತೆ ರೋಡ್ ಶೋ ಮಾರ್ಗ ಕೇಸರಿಮಯವಾಗಿತ್ತು.

ಕಾರ್ಯಕರ್ತರ ಉತ್ಸಾಹ: ಗನ್‌ಹೌಸ್ ಸಂಪರ್ಕಿಸುವ ಎಲ್ಲಾ ರಸ್ತೆಗಳಲ್ಲೂ ಜನ ಕಿಕ್ಕಿರಿದಿದ್ದರು. ನೂರಾರು ಮಂದಿ ಸಂಜೆ 4 ಗಂಟೆಗೆ ಸಮೀಪದ ಕಟ್ಟಡ ಮೇಲೆ ಅವರಣದಲ್ಲಿದ್ದ ಕುರ್ಚಿಗಳಲ್ಲಿ ಆಸೀನರಾಗಿದ್ದರು. ಹಲವರು ಕಾಂಪೌಂಡ್ ಮೇಲೆ ಕುಳಿತಿದ್ದರು. ಮೋದಿ ಆಗಮಿಸುವ ಮುನ್ನವೇ ವಂದೇ ಮಾತರಂ, ಭಾರತ್ ಮಾತಾ ಕೀ ಜೈ, ಹರ ಹರ ಮೋದಿ ಘೋಷಣೆಗಳು ಮೊಳಗಿದವು. ಮುಂಚಿತವಾಗಿ ಆಗಮಿಸಿದ್ದ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ, ಸಂಸದ ಪ್ರತಾಪ್ ಸಿಂಹ, ಶಾಸಕ ಎಸ್.ಎ.ರಾಮದಾಸ್ ವೃತ್ತದ ಬಳಿ ನೆರೆದಿದ್ದ ಜನರತ್ತ ಕೈಬೀಸಿ, ನಮಸ್ಕರಿಸಿದರು. ಎಡಿಜಿಪಿ ಅಲೋಕ್ ಕುಮಾರ್, ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್ ಇನ್ನಿತರ ಅಧಿಕಾರಿಗಳು ಬಂದೋಬಸ್ತ್ ನಿರ್ವಹಿಸಿದರು.

ಶನಿವಾರ ತಡರಾತ್ರಿವರೆಗೂ ಬಿರುಸಿನ ಮಳೆಯಾಗಿತ್ತಲ್ಲದೆ ಇಂದೂ ಕೂಡ ಮೋಡ ಕವಿದಿತ್ತು. ಮಳೆಯ ಆತಂಕದ ನಡುವೆಯೂ ಮೈಸೂರಿನಲ್ಲಿ ಪ್ರಧಾನಿ ಮೋದಿ ಹವಾ ಸೃಷ್ಟಿಸಿದರು. ಸುಮಾರು 4 ಕಿ.ಮೀ. ಬೃಹತ್ ರೋಡ್ ಶೋ ನಡೆಸುವ ಮೂಲಕ ಚುನಾವಣಾ ಕಣ ರಂಗೇರಿಸಿದರು. ನಿಗದಿತ ಸಮಯಕ್ಕಿಂತ ತಡವಾಗಿ ಆಗಮಿಸಿದರೂ ಒಂದು ಗಂಟೆಗೂ ಹೆಚ್ಚು ಕಾಲ(ಸಂಜೆ 6.30–ರಾತ್ರಿ 7.42) ರೋಡ್ ಶೋ ನಡೆಸಿ, ಪಕ್ಷದ ಅಭ್ಯರ್ಥಿಗಳ ಪರ ಮತಬೇಟೆ ನಡೆಸಿದರು. ಮಳೆ ಆತಂಕದಿಂದ ಆರಂಭದಲ್ಲಿ ಜನಸಂಖ್ಯೆ ಕಡಿಮೆಯಿತ್ತಾದರೂ ರೋಡ್ ಶೋ ಆರಂಭವಾಗುತ್ತಿದ್ದಂತೆ ಇಕ್ಕೆಲಗಳಲ್ಲಿ ಕಿಕ್ಕಿರಿದರು. ದೇಶದ ಪ್ರಧಾನಿಯನ್ನು ಹತ್ತಿರದಿಂದ ನೋಡಬಹುದೆಂದು ವಿವಿಧೆಡೆಯಿಂದಲೂ ಜನ ಆಗಮಿಸಿದ್ದರು. ತಡವಾಗಿದ್ದರೂ ತೆರೆದ ವಾಹನದಲ್ಲಿ ನಿಧಾನವಾಗಿ ಸಾಗುವ ಮೂಲಕ ಮೋದಿ ನೆರೆದಿದ್ದವರತ್ತ ಕೈ ಬೀಸಿ, ಧನ್ಯವಾದ ತಿಳಿಸಿದರು. ಮಾರ್ಗದುದ್ದಕ್ಕೂ ಮೋದಿ ಮೋದಿ ಉದ್ಘೋಷ ಮೊಳಗಿತಲ್ಲದೆ, ಅವರಿಗೆ ಪುಷ್ಪವೃಷ್ಟಿಗರೆಯಲಾಯಿತು. ಮತದಾನಕ್ಕೆ ಇನ್ನು 10 ದಿನ ಬಾಕಿ ಇರುವ ಹೊತ್ತಿನಲ್ಲಿ ನಡೆದ ಮೋದಿ ರೋಡ್ ಶೋ, ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರಲ್ಲಿ ಉತ್ಸಾಹ ಹೆಚ್ಚಿಸಿತು. ಪಕ್ಷದ ಹೈಕಮಾಂಡ್ ಸೂಚನೆಯಂತೆ ಚುನಾವಣಾ ರಾಜಕೀಯದಿಂದ ನಿವೃತ್ತಿ ಪಡೆದ ಕೆ.ಎಸ್.ಈಶ್ವರಪ್ಪ ಹಾಗೂ ಟಿಕೆಟ್ ವಂಚಿತರಾದ ಎಸ್.ಎ.ರಾಮದಾಸ್ ಅವರನ್ನೂ ರೋಡ್ ಶೋನಲ್ಲಿ ಭಾಗಿಯಾಗಿಸುವ ಮೂಲಕ ಪಕ್ಷನಿಷ್ಠರ ಕೈಬಿಡಲ್ಲ ಎಂಬ ಸಂದೇಶ ಸಾರಿದಂತಿತ್ತು.


ಆಸ್ತಿ ತೆರಿಗೆ ಪಾವತಿ

352.71 ಲಕ್ಷ ರೂ., ಉದ್ದಿಮೆ ಪರವಾನಗಿ ಶುಲ್ಕದಿಂದ 668.21 ಲಕ್ಷ ರೂ., ಜಾಹೀರಾತು ಶುಲ್ಕದಿಂದ 64.71 ಲಕ್ಷ ರೂ., ನೀರಿನ ಸಂಪರ್ಕ ಶುಲ್ಕದಿಂದ 9,309.92 ಲಕ್ಷ ರೂ. ಹಾಗೂ ಇತರ ಜಮೆಗಳಿಂದ 2,313.19 ಲಕ್ಷ ರೂ. ಸೇರಿ ಒಟ್ಟು 310.49 ಕೋಟಿ ರೂ. ತೆರಿಗೆ ಸಂದಾಯವಾಗಿತ್ತು. 2021–22ನೇ ಸಾಲಿನಲ್ಲಿ 280.69 ಕೋಟಿ ರೂ., 2020–21ರಲ್ಲಿ 204.96 ಕೋಟಿ ರೂ., 2019–20ರಲ್ಲಿ 218.15 ಕೋಟಿ ರೂ., 2018–19ರಲ್ಲಿ 210.47 ಕೋಟಿ ರೂ., 2017–18ರಲ್ಲಿ 194.80 ಕೋಟಿ ರೂ. ಹಾಗೂ 2016–17ನೇ ಸಾಲಿನಲ್ಲಿ 175.97 ಕೋಟಿ ರೂ. ತೆರಿಗೆ ಸಂಗ್ರಹವಾಗಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಕಳೆದ ಸಾಲುಗಳಿಗೆ ಹೋಲಿಸಿ ಕೊಂಡರೆ ಈ ವರ್ಷ ಅತೀ ಹೆಚ್ಚು ಮೊತ್ತದ ತೆರಿಗೆ ಜಮಾ ಆಗಿರುವುದು ಗಮನಾರ್ಹವಾಗಿದೆ. ತೆರಿಗೆ, ಇತರ ಶುಲ್ಕವನ್ನೇ ಅವಲಂಬಿಸಿರುವ ಮೈಸೂರು ಪಾಲಿಕೆಗೆ ಆರ್ಥಿಕ ಸಂಪನ್ಮೂಲ ಕ್ರೋಢೀಕರಣ ದಿಂದಲೇ ಸ್ವಚ್ಛತೆ, ಕುಡಿಯುವ ನೀರು ಪೂರೈಕೆ, ಬೀದಿ ದೀಪ, ಒಳ ಚರಂಡಿ, ಉದ್ಯಾನವನ ನಿರ್ವಹಣೆಯಂತಹ ಮೂಲಭೂತ ಸೌಲಭ್ಯವನ್ನು ನಾಗರಿಕರಿಗೆ ಒದಗಿಸಬೇಕಾಗಿರುವುದರಿಂದ ಪಾಲಿಕೆ ಕಂದಾಯ ವಿಭಾಗದ ಅಧಿಕಾರಿಗಳು ತೆರಿಗೆ ವಸೂಲಾತಿಯನ್ನು ಪರಿಣಾಮಕಾರಿಯಾಗಿ ಮಾಡಲೇಬೇಕಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

'ನಮ್ಮ ನಡೆ ಮತಗಟ್ಟೆ ಕಡೆ' ಧ್ಯೇಯದೊಂದಿಗೆ ಮತಗಟ್ಟೆಗಳಲ್ಲಿ ಧ್ವಜಾರೋಹಣ

ಪ್ರತಿಯೊಬ್ಬ ಮತದಾರರು ನೈತಿಕ ಮತದಾನ ಮಾಡಲೇಬೇಕು

ಮೈಸೂರು ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಕರೆ



ಮೈಸೂರು,ಏ.30(ಪಿಎಂ)– ರಾಜ್ಯದ ಉಜ್ವಲ ಭವಿಷ್ಯಕ್ಕಾಗಿ ಮೇ 10ರಂದು ನಡೆಯುವ ವಿಧಾನಸಭಾ ಚುನಾವಣೆಯ ಮತದಾನ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಮತದಾರರು ಕಡ್ಡಾಯವಾಗಿ ನೈತಿಕ ಮತದಾನ ಮಾಡಬೇಕೆಂದು ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಕರೆ ನೀಡಿದರು.

ಮೈಸೂರಿನ ಒಂಟಿಕೊಪ್ಪಲಿನ ಮಾತೃ ಮಂಡಳಿ ಶಾಲೆ ಆವರಣದಲ್ಲಿ (ಈ ಶಾಲೆ ಆವರಣದಲ್ಲಿ ನಾಲ್ಕು ಮತಗಟ್ಟೆಗಳಿವೆ) ಕರ್ನಾಟಕ ಸಾರ್ವತ್ರಿಕ ವಿಧಾನಸಭಾ ಚುನಾವಣೆ–2023ರ ಪ್ರಯುಕ್ತ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಸ್ವೀಪ್ ಸಮಿತಿ ಸಂಯುಕ್ತಾಶ್ರಯದಲ್ಲಿ ಮತದಾರರಿಗೆ ಮತಗಟ್ಟೆಗಳನ್ನು ಪರಿಚಯಿಸಿ, ಮತದಾನಕ್ಕೆ ಉತ್ತೇಜಿಸುವ ನಿಟ್ಟಿನಲ್ಲಿ 'ನಮ್ಮ ನಡೆ ಮತಗಟ್ಟೆ ಕಡೆ' ಧ್ಯೇಯದೊಂದಿಗೆ 'ಪ್ರಜಾಪ್ರಭುತ್ವದ ಹಬ್ಬ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ ಮತದಾನದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ, ಅವರು ಮಾತನಾಡಿದರು.

ರಾಜ್ಯದ ಭವಿಷ್ಯಕ್ಕಾಗಿ ಮತದಾರರು ಪ್ರಜ್ಞಾವಂತಿಕೆ ಪ್ರದರ್ಶಿಸಬೇಕಿದೆ. ಜಾತಿ–ಧರ್ಮ ಸೇರಿದಂತೆ ಯಾವುದೇ ಪ್ರಭಾವಕ್ಕೆ ಒಳಗಾಗದೇ ಮತ ಚಲಾಯಿಸಬೇಕು. ಸ್ವಾತಂತ್ರ್ಯ ಬಂದಾಗಿನಿಂದಲೂ ನಮ್ಮ ದೇಶದಲ್ಲಿ ಪ್ರಧಾನಮಂತ್ರಿ, ರಾಷ್ಟ್ರಪತಿಗಳು, ಮಂತ್ರಿಗಳು ಸೇರಿದಂತೆ ಯಾರೇ ಇದ್ದರೂ ಅವರು ಮತ್ತು ಸಾಮಾನ್ಯ ನಾಗರಿಕರು ಇಬ್ಬರಿಗೂ ಸಮಾನ ಹಕ್ಕು ಎಂದರೆ ಅದು ಮತದಾನ. ಅದರಲ್ಲೂ ನಮ್ಮ ದೇಶದಲ್ಲಿ ಮಹಿಳಾ ಸಮುದಾಯಕ್ಕೆ ದೇಶದ ಮೊದಲ ಚುನಾವಣೆಯಿಂದಲೇ ಮತದಾನದ ಹಕ್ಕು ನೀಡಲಾಗಿದೆ. ಇಂತಹ ಮಹತ್ವದ ಹಿನ್ನೆಲೆ ಅರಿತು ಜವಾಬ್ದಾರಿಯುತ ಸರ್ಕಾರ ರಚನೆಗೆ ಪ್ರತಿಯೊಬ್ಬರೂ ತಮ್ಮ ಮತದಾನದ ಹಕ್ಕು ಚಲಾವಣೆ ಮಾಡಬೇಕು ಎಂದು ಮನವಿ ಮಾಡಿದರು.

ಮೇ 10ರಂದು ನಮ್ಮ ಜಿಲ್ಲೆಯಲ್ಲಿ ಶೇ.90ಕ್ಕಿಂತಲೂ ಹೆಚ್ಚು ಪ್ರಮಾಣದ ಮತದಾನ ಆಗಬೇಕೆಂಬುದು ನಮ್ಮ ಉದ್ದೇಶ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದ ಮತದಾನ ಆಗುತ್ತದೆ. ಆದರೆ ನಗರ ಪ್ರದೇಶದಲ್ಲಿ ಸುಶಿಕ್ಷಿತರು ಎಂದು ಕರೆಸಿಕೊಳ್ಳುವವರೇ ಮತದಾನದ ಪ್ರಕ್ರಿಯೆಯಲ್ಲಿ ದೂರ ಉಳಿಯುವುದು ಹೆಚ್ಚಾಗುತ್ತಿದೆ. ಮತಗಟ್ಟೆಗಳಲ್ಲಿ ಜನದಟ್ಟಣೆ ಇರುವುದೂ ಸೇರಿದಂತೆ ಮೂಲಸೌಲಭ್ಯದ ಕೊರತೆ ಕಾರಣಕ್ಕೆ ಹೀಗೆ ದೂರ ಉಳಿಯುತ್ತಿರಬಹುದು ಎಂದು ಚುನಾವಣಾ ಆಯೋಗದ ನಿರ್ದೇಶನದಂತೆ ಕಳೆದ 6 ತಿಂಗಳ ಹಿಂದೆಯೇ ಮತಗಟ್ಟೆಗಳಲ್ಲಿ ಕನಿಷ್ಠ ಮೂಲಸೌಲಭ್ಯ ಕಲ್ಪಿಸುವ ಕೆಲಸ ಆರಂಭಿಸಲಾಯಿತು ಎಂದರು.

ಇಂದಿನ ಕಾರ್ಯಕ್ರಮದ ಮೂಲಕ ಸುಶಿಕ್ಷಿತರು, ಸಾಮಾಜಿಕ ಕಾಳಜಿಯುಳ್ಳವರು ಒಮ್ಮೆ ಮತಗಟ್ಟೆಗೆ ಭೇಟಿ ನೀಡಿ, ಅಲ್ಲಿನ ಸೌಲಭ್ಯಗಳನ್ನು ತಿಳಿದು, ಉಳಿದ ಮತದಾರರಿಗೆ ಮಾಹಿತಿ ನೀಡುವಂತಾಗಬೇಕು ಎಂಬುದು ಚುನಾವಣಾ ಆಯೋಗದ ಉದ್ದೇಶ. ಮತದಾನದ ದಿನಾಂಕದ ಬಗ್ಗೆ ಗೊತ್ತಿಲ್ಲದವರು ಇನ್ನೂ ಇದ್ದಾರೆ. ಜಿಲ್ಲೆಯ ನಗರ ಪ್ರದೇಶದ ಕೆಲವೊಂದು ಮತಗಟ್ಟೆಯಲ್ಲಿ ಈ ಹಿಂದೆ ಕೇವಲ ಶೇ.34ರಷ್ಟು ಮತದಾನ ಆಗಿರುವುದಿದೆ. ಅದರಲ್ಲೂ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ 3 ಕ್ಷೇತ್ರಗಳಲ್ಲೂ ಶೇ.50 ಕ್ಕಿಂತಲೂ ಕಡಿಮೆ ಮತದಾನ ಆಗುತ್ತಿರುವುದು ಕಳವಳಕಾರಿ. ಹೀಗಾಗಿ ಜಿಲ್ಲಾ ಸ್ವೀಪ್ ಸಮಿತಿ ಸಾಕಷ್ಟು ಕಾರ್ಯಕ್ರಮಗಳ ಮೂಲಕ ಕಡ್ಡಾಯ ಮತ್ತು ನೈತಿಕ ಮತದಾನದ ಕುರಿತು ಜಾಗೃತಿ ಮೂಡಿಸುತ್ತಿದೆ ಎಂದು ಹೇಳಿದರು.

ನಮ್ಮ ಅಧಿಕಾರಿ ಮತ್ತು ಸಿಬ್ಬಂದಿ ರಾತ್ರಿಯಿಂದ ಇಂದು ಬೆಳಗ್ಗೆ 6.30ರವರೆಗೆ ಕೆಲಸ ಮಾಡಿ ಮೈಸೂರು ನಗರದ ಮೂರು ಕ್ಷೇತ್ರಗಳ ಓಟಿಂಗ್ ಯಂತ್ರಗಳನ್ನು ಸಜ್ಜುಗೊಳಿಸಿದ್ದಾರೆ. ಅಲ್ಲದೆ, ಓಟಿಂಗ್ ಯಂತ್ರಗಳ ಸಮರ್ಪಕವಾಗಿ ಕೆಲಸ ಮಾಡುವ ಬಗ್ಗೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಇದೇ ವೇಳೆ ಖಾತ್ರಿ ಮಾಡಿಕೊಡಲಾಗಿದೆ. ಅಧಿಕಾರಿಗಳು ಮತ್ತು ಸಿಬ್ಬಂದಿ ಶ್ರಮವಹಿಸುತ್ತಿದ್ದು, ಅನೈತಿಕ ಮತದಾನ ಮತ್ತು ಅನೈತಿಕ ಪ್ರಚಾರದ ಮೇಲೂ ನಿಗಾ ವಹಿಸಿದ್ದಾರೆ ಎಂದು.

'ಸಿ–ವಿಜಿಲ್' ಮೊಬೈಲ್ ಆ್ಯಪ್ ಬಳಸಿ, ಆಯೋಗದ ಕಣ್ಣು, ಕಿವಿಗಳಾಗಿ

ಮೈಸೂರು,ಏ.30(ಪಿಎಂ)– ಚುನಾವಣಾ ಅಕ್ರಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರಜ್ಞಾವಂತ ಮತದಾರರು 'ಸಿ–ವಿಜಿಲ್' ಮೊಬೈಲ್ ಆ್ಯಪ್ ಸದ್ಬಳಕೆ ಮಾಡಿಕೊಳ್ಳುವ ಮೂಲಕ ಚುನಾವಣಾ ಆಯೋಗದ ಕಣ್ಣು ಮತ್ತು ಕಿವಿಗಳಾಗಬೇಕೆಂದು ಡಾ.ಕೆ.ವಿ.ರಾಜೇಂದ್ರ ಮನವಿ ಮಾಡಿದರು. 'ಸಿ–ವಿಜಿಲ್' ಮೊಬೈಲ್ ಆಪ್ ಮೂಲಕ ಚುನಾವಣಾ ಅಕ್ರಮಗಳ ಬಗ್ಗೆ ಮತದಾರರು ವರದಿ ಮಾಡಬಹುದು. ಈ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಫೋಟೋ ಸಹಿತ ಅಕ್ರಮದ ಮಾಹಿತಿ ನೀಡಿದರೆ ಅಧಿಕಾರಿಗಳು ಕ್ರಮ ವಹಿಸಲಿದ್ದಾರೆ ಎಂದು ತಿಳಿಸಿದರು.

ನಮ್ಮ ಜಿಲ್ಲೆಯಲ್ಲಿ 11 ಕ್ಷೇತ್ರಗಳಿದ್ದು, ಈವರೆಗೆ ಕೇವಲ 120 ದೂರುಗಳು ಸಿ–ವಿಜಿಲ್ ಮೂಲಕ ದಾಖಲಾಗಿವೆ. ಒಂದು ಚುನಾವಣಾ ಅಕ್ರಮ ಕಡಿಮೆ ಇರಬಹುದು. ಇಲ್ಲವೇ ಆಗುತ್ತಿದ್ದರೂ ಯಾರೂ ಗಮನಿಸಿಲ್ಲ ಎಂದೂ ಹೇಳಬಹುದು. ಎಲ್ಲಾ ಕಡೆಗಳಲ್ಲಿ ಅಧಿಕಾರಿಗಳ ತಂಡವೇ ಇರಲು ಸಾಧ್ಯವಿಲ್ಲ. ಹಾಗಾಗಿ ನೀವು ಆಯೋಗದ ಕಣ್ಣು ಮತ್ತು ಕಿವಿಗಳಾಗಬೇಕು. ಸಿ–ವಿಜಿಲ್ ಮೂಲಕ ಅಕ್ರಮಗಳು ನಡೆಯುತ್ತಿದ್ದರೆ ಅದನ್ನು ವರದಿ ಮಾಡುವಂತಹ ಪ್ರಜ್ಞಾವಂತರಾಗಬೇಕು. ಆ ಮೂಲಕ ಅಕ್ರಮ ಮುಕ್ತ ಚುನಾವಣೆ ನಡೆಸಲು ಸಹಕಾರ ನೀಡಬೇಕೆಂದು ಕೋರಿದರು.

ಚುನಾವಣಾ ಆಯೋಗವು ಚುನಾವಣೆ ಬಗ್ಗೆ ಮಾಹಿತಿ ಒದಗಿಸಲು ತನ್ನದೇ ವೆಬ್‌ಸೈಟ್ ಮೂಲಕ ಆನ್‌ಲೈನ್ ವ್ಯವಸ್ಥೆ ಕಲ್ಪಿಸಿದೆ. ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿ ಅಭ್ಯರ್ಥಿಗಳ ಸಾಕಷ್ಟು ಮಾಹಿತಿ ಲಭ್ಯವಿದೆ. ಈ ಎಲ್ಲವನ್ನೂ ಅವಲೋಕಿಸಿದರೆ, ಸೂಕ್ತ ಅಭ್ಯರ್ಥಿ ಆಯ್ಕೆಗೆ ಸಹಕಾರಿಯಾಗಲಿದೆ ಎಂದರು.

ಏಕಕಾಲದಲ್ಲಿ 1,816 ಮತಗಟ್ಟೆಗಳಲ್ಲಿ ಧ್ವಜಾರೋಹಣ

ಚುನಾವಣಾ ಆಯೋಗದ ನಿರ್ದೇಶನದಂತೆ 'ನಮ್ಮ ನಡೆ ಮತಗಟ್ಟೆ ಕಡೆ' ಕಾರ್ಯಕ್ರಮ ಆಯೋಜಿಸಲಾಗಿದೆ ಮತದಾರರು ಮತದಾನದ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಜಾಗೃತಿ ಮೂಡಿಸುವುದು ಇದರ ಉದ್ದೇಶ. ನೈತಿಕ ಮತದಾನ ಕುರಿತು ಜಾಗೃತಿ ಮೂಡಿಸುವ ಉದ್ದೇಶವೂ ಇದ್ದು, ಇಡೀ ರಾಜ್ಯದಲ್ಲಿಂದು ಈ ಕಾರ್ಯಕ್ರಮ ನಡೆಯುತ್ತಿದೆ. ಅದರಂತೆ ಜಿಲ್ಲೆಯಲ್ಲಿ 2,905 ಮತಗಟ್ಟೆಗಳಿದ್ದು, ಈ ಪೈಕಿ ಒಂದೇ ಕಡೆ ಇರುವ ಮೂರ್‍ನಾಲ್ಕು ಮತಗಟ್ಟೆಗಳನ್ನು ಒಗ್ಗೂಡಿಸಿ ಒಂದೆಡೆ ಕಾರ್ಯಕ್ರಮ ನಡೆಸಲಾಗುತ್ತಿದೆ. ಅದರಂತೆ 1,816 ಮತಗಟ್ಟೆಗಳಲ್ಲಿ ಇಂದು ಏಕಕಾಲದಲ್ಲಿ ಧ್ವಜಾರೋಹಣ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಪ್ರತಿಯೊಬ್ಬ ನಾಗರಿಕರಿಗೂ ತಮ್ಮ ತಮ್ಮ ಮತಗಟ್ಟೆಗಳನ್ನು ಪರಿಚಯಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇಶ.

-ಡಾ.ಕೆ.ವಿ.ರಾಜೇಂದ್ರ

ಮೇ 5ರೊಳಗೆ ಎಪಿಕ್ ಕಾರ್ಡ್ ವಿತರಣೆ: ನವ ಮತದಾರರಿಗೆ ಮೇ 5ರೊಳಗೆ ಎಪಿಕ್ ಕಾರ್ಡ್‌ಗಳನ್ನು ವಿತರಣೆ ಮಾಡಲಾಗುವುದು. ಅಲ್ಲದೆ, ಮೇ 5ರೊಳಗೆ ಪ್ರತಿ ಮನೆ ಮನೆಗೆ ಭೇಟಿ ನೀಡಿ, ಮತದಾರರ ಮಾಹಿತಿ ಚೀಟಿಗಳನ್ನು ನೀಡಲಾಗುವುದು. ಮತದಾರರಿಗೆ ಅವರ ಮತಗಟ್ಟೆ ಹಾಗೂ ಕ್ರಮ ಸಂಖ್ಯೆ ಬಗ್ಗೆ ಇದರಲ್ಲಿ ಮಾಹಿತಿ ದೊರೆಯಲಿದೆ. ಎಪಿಕ್ ಕಾರ್ಡ್ ಇಲ್ಲದೆಯೂ 11ಕ್ಕಿಂತಲೂ ಹೆಚ್ಚು ದಾಖಲೆಗಳನ್ನು ಒದಗಿಸಿ ಮತದಾನ ಮಾಡಲು ಚುನಾವಣಾ ಆಯೋಗ ಅವಕಾಶ ನೀಡಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಮತದಾರರ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು. ನೃತ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು. ಯುವ ಮತದಾರರು ಸೇರಿದಂತೆ ಸ್ಥಳೀಯ ಸಾರ್ವಜನಿಕರು ಪಾಲ್ಗೊಂಡಿದ್ದರು. ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರೂ ಆದ ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ಜಿಪಂ ಉಪಕಾರ್ಯದರ್ಶಿ ಡಾ.ಎಂ.ಕೃಷ್ಣರಾಜು, ಪಾಲಿಕೆ ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ಬಿ.ನಾಗರಾಜು ಮತ್ತಿತರರು ಹಾಜರಿದ್ದರು.

ಇವಿಎಂಗಳಿಗೆ ಅಭ್ಯರ್ಥಿಗಳ ಹೆಸರು, ಚಿಹ್ನೆ ಅಳವಡಿಸುವ ಈ ಕಾರ್ಯದಲ್ಲಿ ತೊಡಗಿದ್ದಾರೆ 22 ಇಂಜಿನಿಯರ್‌ಗಳು



ಮೈಸೂರು, ಏ.30(ಜಿಎ)–ಮೈಸೂರು ಜಿಲ್ಲೆಯ ಚುನಾವಣಾ ಅಭ್ಯರ್ಥಿಗಳ ಹೆಸರು, ಚಿಹ್ನೆಗಳನ್ನು ಇವಿಎಂಗಳಲ್ಲಿ ಅಳವಡಿಸಲು 22 ಇಂಜಿನಿಯರ್‌ಗಳ ತಂಡ ಮೈಸೂರಿಗೆ ಆಗಮಿಸಿದ್ದು, ಇಂದು ನರಸಿಂಹರಾಜ ಮತ್ತು ಚಾಮರಾಜ ಕ್ಷೇತ್ರದ ಅಭ್ಯರ್ಥಿಗಳ ಮಾಹಿತಿಯನ್ನು ಅಳವಡಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ.

ಕೇಂದ್ರ ಚುನಾವಣಾ ಆಯೋಗದ ಆದೇಶದಂತೆ ರಾಜ್ಯದ ಎಲ್ಲಾ ವಿಧಾನಸಭಾ ಚುನಾವಣೆ ಕೇಂದ್ರಗಳಿಗೆ ಹೈದರಾಬಾದ್‌ನ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್(ECIL)ನ ಇಂಜಿನಿಯರ್‌ಗಳ ಆಗಮಿಸಿದ್ದು, ಅದರಂತೆ ಮೈಸೂರಿಗೂ ಬಂದಿದ್ದಾರೆ.

ECIL ತಯಾರಿಸಿರುವ ಈ ಹೊಸ ಇವಿಎಂಗಳು ಮತ್ತು ವಿವಿಪ್ಯಾಟ್‌ಗಳನ್ನು ಈಗಾಗಲೇ ಮೈಸೂರಿನ ಬನ್ನೂರು ರಸ್ತೆಯಲ್ಲಿನ ಜಿಲ್ಲಾ ಕಚೇರಿಗಳ ಸಂಕೀರ್ಣದ ಬಳಿ ಇರುವ ವೇರ್ ಹೌಸ್‌ನಲ್ಲಿ ಇರಿಸಲಾಗಿದೆ. ಎಂಜಿನಿಯರ್‌ಗಳ ತಂಡವು ಟೆಕ್ನಿಕಲ್ ಮ್ಯಾನೇಜರ್ ಮತ್ತು ಪ್ರಕ್ರಿಯೆಗಳ ಉಸ್ತುವಾರಿ ಸುರೇಶ್ ಬಾಬು ಕಾಗಿತಾ ನೇತೃತ್ವದಲ್ಲಿ ಅವುಗಳ ಪರಿಶೀಲನೆ ನಡೆಸಿತು.

ಈ ಕುರಿತು ಮೈಸೂರು ಜಿಲ್ಲೆ ಇವಿಎಂ ಮತ್ತು ವಿವಿಪ್ಯಾಟ್ ನೋಡಲ್ ಅಧಿಕಾರಿ ಹಾಗೂ ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಮಾತನಾಡಿ, ಜಿಲ್ಲೆಯ 11 ಕ್ಷೇತ್ರಗಳಿಂದ ಅಂತಿಮಗೊಂಡಿರುವ 143 ಅಭ್ಯರ್ಥಿಗಳ ಮಾಹಿತಿಗಳನ್ನು ಸಂಗ್ರಹಿಸಿ ಜಿಲ್ಲಾ ಚುನಾವಣಾಧಿಕಾರಿಗಳ ಮೂಲಕ ಚುನಾವಣಾ ಆಯೋಗಕ್ಕೆ ಕಳಿಸಲಾಗಿದ್ದು, ಅದರಂತೆ ಇಂಜಿನಿಯರ್‌ಗಳು ಇವಿಎಂ ಮತ್ತು ವಿವಿಪ್ಯಾಟ್‌ಗಳಲ್ಲಿ ಅಭ್ಯರ್ಥಿಗಳ ಹೆಸರು ಮತ್ತು ಚಿಹ್ನೆ ಸೇರಿದಂತೆ ನೋಟಾವನ್ನು ಅಳವಡಿಸುವ ಕಾರ್ಯದಲ್ಲಿ ತೊಡಗಿದ್ದಾರೆ ಎಂದು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.



ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಚ್.ಕೆ.ರಮೇಶ್ ಅವರು ಭಾನುವಾರ ಮುಂಜಾನೆ ಕುಕ್ಕರಹಳ್ಳಿ ಕೆರೆಯಲ್ಲಿ ವಾಯುವಿಹಾರಕ್ಕೆ ಬಂದವರಲ್ಲಿ ಮತಯಾಚನೆ ಮಾಡಿದರು.

ಮೈಸೂರಿಗೆ ಬಿಜೆಪಿ ಸರ್ಕಾರದ ಕೊಡುಗೆ ಏನು: ಕೆ. ಹರೀಶ್‌ಗೌಡ




ಮೈಸೂರು ಏ. 30– ಮೈಸೂರಿಗೆ ಬಿಜೆಪಿ ಸರ್ಕಾರದ ಕೊಡುಗೆ ಏನು, ಕಾಂಗ್ರೆಸ್ ಪಕ್ಷದ ಕೊಡುಗೆ ಏನು ಎಂಬುದಕ್ಕೆ ಬಿಜೆಪಿಯವರು ಚರ್ಚೆಗೆ ಬರಲಿ ಎಂದು ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ. ಹರೀಶ್‌ಗೌಡ ಸವಾಲೆಸೆದಿದ್ದಾರೆ.

ಚಾಮರಾಜ ಕ್ಷೇತ್ರದ ಕುಂಬಾರಕೊಪ್ಪಲಿನಲ್ಲಿ ಪಾದಯಾತ್ರೆ ಮೂಲಕ ಮನೆಮನೆಗೆ ತೆರಳಿ ಮತಯಾಚಿಸಿ ಮಾತನಾಡಿದ ಅವರು, ಬಿಜೆಪಿಯವರು ಯಾವುದೇ ಅಭಿವೃದ್ಧಿ ಮಾಡದೆ ಮೋದಿ ನೋಡಿ ಮತ ಕೊಡಿ ಎನ್ನುತ್ತಿದ್ದಾರೆ. ಆದರೆ ಮೈಸೂರಿಗೆ ಮೋದಿ ಕೊಡುಗೆ ಏನು. ಸುಳ್ಳಿನ ಮೇಲೆ ಸುಳ್ಳನ್ನು ಹೇಳುತ್ತಿರುವ ಬಿಜೆಪಿಗೆ ಈ ಬಾರಿ ಜನರು ತಕ್ಕಪಾಠ ಕಲಿಸುತ್ತಾರೆ. ಸಿದ್ದರಾಮಯ್ಯರವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಮೈಸೂರು ನಗರದ ಚಿತ್ರಣವನ್ನೇ ಬದಲಾಯಿಸಿದ್ದಾರೆ.

ಸಾವಿರಾರು ಕೋಟಿ ರೂ.ಗಳನ್ನು ನೀಡಿ ರಾಮಸ್ವಾಮಿ ಸರ್ಕಲ್‌ನಿಂದ ಚಾಮರಾಜ ಡಬಲ್ ರೋಡ್, ಸಯ್ಯಾಜಿರಾವ್ ರಸ್ತೆಯನ್ನು ಬನ್ನಿಮಂಟಪದವರೆಗೆ ಕಾಂಕ್ರಿಟ್ ರಸ್ತೆ ಮಾಡಿಸಿದ್ದರು. ಇರ್ವಿನ್ ರಸ್ತೆ ಅಗಲೀಕರಣ, ದೇವೇಗೌಡ ಸರ್ಕಲ್‌ನಿಂದ ಡೈರಿವರೆಗೆ ರಸ್ತೆ ಅಗಲೀಕರಣ, ಜಿಲ್ಲಾ ಕಚೇರಿಗಳ ಸಂಕೀರ್ಣ, ಮೆಗಾ ಡೈರಿ, ಕುಪ್ಪಣ್ಣ ಪಾರ್ಕ್‌ನಲ್ಲಿ ಗಾಜಿನ ಮನೆ, ಡಾ. ಅಂಬೇಡ್ಕರ್, ಜಯಚಾಮರಾಜೇಂದ್ರ ಒಡೆಯರ್ ಪ್ರತಿಮೆ ನಿರ್ಮಾಣ, ಜಯದೇವ ಆಸ್ಪತ್ರೆ, ಟ್ರಾಮಾ ಸೆಂಟರ್, ಜಿಲ್ಲಾ ಆಸ್ಪತ್ರೆ, ಆಯುರ್ವೇದಿಕ್ ಆಸ್ಪತ್ರೆ, ಕೋರ್ಟ್ ಕಟ್ಟಡ, ಪೊಲೀಸ್ ವಸತಿ ನಿಲಯಗಳು, ಪಡುವಾರಳ್ಳಿಯಲ್ಲಿ ಮಹಾರಾಣಿ ಕಾಲೇಜು ಮತ್ತು ಹಾಸ್ಟೆಲ್ ರಸ್ತೆಗಳ ಅಭಿವೃದ್ಧಿಪಡಿಸಿ ಮೈಸೂರನ್ನು ಸುಂದರನಗರವನ್ನಾಗಿ ಮಾಡಿದ್ದಾರೆ. ಈ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳೇ ನನ್ನ ಗೆಲುವಿಗೆ ಶ್ರೀರಕ್ಷೆಯಾಗಲಿದೆ ಎಂದ ಅವರು, ಹೆಚ್ಚು ಮತಗಳ ಅಂತರದಿಂದ ನನ್ನನ್ನು ಆಶೀರ್ವದಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕಮಲಮ್ಮ, ಆಶಾ, ಮಹೇಶ್, ಶೋಭಾ, ಲಾರಿರಘು, ಸುರೇಶ್‌ಗೌಡ, ಡಾಬಾ ಪ್ರಸನ್ನ, ಕೃಷ್ಣಪ್ಪ ರಘುಡೈರಿ, ಲೋಕೇಶ್, ಮೋಹನ್ ಹಾಜರಿದ್ದರು.

ಭಾರತ ಮಹಾಕಾವ್ಯದಲ್ಲಿ ಮಹಿಳೆಯರ ಪ್ರಭಾವ ಹೆಚ್ಚು: ಪ್ರಮೋದಾದೇವಿ



ಮೈಸೂರು,ಏ.30(ಎಂಟಿವೈ)– ಭಾರತದ ಮಹಾಕಾವ್ಯದಲ್ಲಿ ಹಲವು ಮಹಿಳೆಯರು ತಮ್ಮ ಪ್ರಭಾವವನ್ನು ಮೂಡಿಸಿದ್ದಾರೆ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಇಂಡಿಕಾ ಪ್ರಕಾಶನ ಸಂಸ್ಥೆ ಆಯೋಜಿಸಿದ್ದ ಐಟಿ ಉದ್ಯೋಗಿ ಜಿ.ವಿ.ಶಿವಕುಮಾರ್ ರಚಿಸಿರುವ 'ಆರ್ಯ' ಇಂಗ್ಲಿಷ್ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಮಹಾಕಾವ್ಯದಲ್ಲಿ ಗಾರ್ಗಿ, ಸತ್ಯವತಿ, ಶಕುಂತಲಾ, ಮೇನಕೆ ಸೇರಿದಂತೆ ಇನ್ನಿತರ ಮಹಿಳಾ ಪಾತ್ರಗಳು ಬರುತ್ತವೆ. ಈ ಎಲ್ಲಾ ಮಹಿಳಾ ಪಾತ್ರಗಳು ಸಮಾಜದ ಮೇಲೆ ತಮ್ಮದೇ ಆದ ರೀತಿಯಲ್ಲಿ ಗಾಢವಾದ ಪ್ರಭಾವ ಬೀರಿವೆ. ಇವುಗಳಿಂದ ಮಹಾಕಾವ್ಯದ ಮಹತ್ವ ಹೆಚ್ಚಿದೆ ಎಂದರು.

ಸತಿ ಸಾವಿತ್ರಿಯ ಯಾತನೆಗಳು ಗಾರ್ಗಿ, ಸತ್ಯವತಿ, ಶಕುಂತಲಾ ಅವರ ನೃತ್ಯ ಶೈಲಿಗಳು ವೈದಿಕ ಸಾಹಿತ್ಯದಲ್ಲಿ ಸಾಕಷ್ಟು ಛಾಪು ಮೂಡಿಸಿವೆ. ಅವರು ಶ್ರದ್ಧೆ, ದೈವಭಕ್ತಿ, ಮಕ್ಕಳಿಗೆ ಬೋಧಿಸಿದ ಧರ್ಮ ನೀತಿಗಳು, ಅವರು ಎದುರಿಸಿದ ಸಂಕಷ್ಟಗಳನ್ನು ಲೇಖಕ ಶಿವಕುಮಾರ್ ತಮ್ಮ 'ಆರ್ಯ' ಕೃತಿಯಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ. ಇಂತಹ ಕೃತಿಗಳು ರಚನೆಯಾಗಬೇಕು ಎಂದರು.

ಲೇಖಕ ಜಿ.ವಿ.ಶಿವಕುಮಾರ್ ಮಾತನಾಡಿ, ನಾನು ಚಿಕ್ಕವನಿದ್ದಾಗಲೇ ರಾಮಾಯಣ, ಮಹಾಭಾರತ ಮಹಾಕಾವ್ಯಗಳಲ್ಲಿ ಕಂಡು ಬರುವ ಶ್ರದ್ಧಾ ಭಕ್ತಿಯುಳ್ಳ ಸತಿ ಸಾವಿತ್ರಿ ಓದಿ ನಾನು ಹೆಚ್ಚು ಪ್ರೇರೇಪಿತನಾಗಿದ್ದೇನೆ. ಸಮಾಜದಲ್ಲಿ ಸತಿ ಸಾವಿತ್ರಿ ಪಾತ್ರ ಹೆಚ್ಚು ಗೌರವಕ್ಕೆ ಪಾತ್ರವಾಗಿದೆ. ಸಾವಿತ್ರಿ ಮದುವೆ ಮಾಡಿಕೊಂಡ ಸತ್ಯವನ ಒಂದು ವರ್ಷದಲ್ಲೇ ಮರಣ ಹೊಂದುತ್ತಾನೆ. ಅಂತಹ ಕಠಿಣ ಸಮಯದಲ್ಲೂ ಆಕೆ ಎದೆಗುಂದದೇ ಬದುಕನ್ನು ಸಾಕ್ಷಾತ್ಕಾರ ಮಾಡಿಕೊಂಡ ಮಹಾನ್ ಮಹಿಳೆ ಎಂದು ಬಣ್ಣಿಸಿದರು.

ಮೈಸೂರು ರಾಜವಂಶಸ್ಥರು ಮಹಿಳೆಯರ ಶಿಕ್ಷಣಕ್ಕೆ ಹಲವು ಕೊಡುಗೆ ನೀಡಿದ್ದಾರೆ. ಮೈಸೂರು ಸೇರಿದಂತೆ ಹಲವೆಡೆ ಶಾಲಾ–ಕಾಲೇಜು ಸ್ಥಾಪಿಸಿದ್ದಾರೆ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಅಪಾರ. ಮುಮ್ಮಡಿ ಕೃಷ್ಣರಾಜ ಒಡೆಯರ್ ಬಗ್ಗೆ ನಾವೆಲ್ಲರೂ ಹೆಮ್ಮೆ ಪಡಬೇಕು. ನಾನು ರಚಿಸಿರುವ ಆರ್ಯ ಇಂಗ್ಲಿಷ್ ಕೃತಿಯಲ್ಲಿ ಮಹಾಕಾವ್ಯಗಳಲ್ಲಿ ಬರುವ ಒಟ್ಟು ಹತ್ತು ಮಹಿಳೆಯರ ಬಗ್ಗೆ ಹತ್ತು ಲೇಖಕರು ಅಭಿಪ್ರಾಯ ಮಂಡಿಸಿದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಇಂಡಿಕಾ ಬುಕ್ಸ್ ಸಂಸ್ಥೆಯ ಪದ್ಮಾವತಿ ಎಸ್.ಭಟ್, ನಿತೀಶ್ ಶ್ರೀಧರ್ ಇದ್ದರು.

ಮೈಸೂರು ಮಿತ್ರ









ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	8	6	2	0	12
ಲಕ್ನೋ	8	5	3	0	10
ರಾಜಸ್ಥಾನ್	9	5	4	0	10
ಸಿಎಸ್‌ಕೆ	9	5	4	0	10
ಪಂಜಾಬ್	9	5	4	0	10
ಆರ್‌ಸಿಬಿ	8	4	4	0	8
ಮುಂಬೈ	8	4	4	0	8
ಕೋಲ್ಕತ್ತಾ	9	3	6	0	6
ಎಸ್‌ಆರ್‌ಹೆಚ್	8	3	5	0	6
ಡೆಲ್ಲಿ	8	2	6	0	4

ಚೆಪಾಕ್‌ನಲ್ಲಿ ಸಿಎಸ್‌ಕೆ ಮಣಿಸಿದ ಪಂಜಾಬ್ ಕಿಂಗ್ಸ್





ಚೆನ್ನೈ, ಏ.30– ಕ್ರಿಕೆಟ್ ಅಭಿಮಾನಿಗಳು ಅಕ್ಷರಶಃ ತುದಿಗಾಲಿನಲ್ಲಿ ನಿಲ್ಲುವಂತೆ ಮಾಡಿದ್ದ ಪಂದ್ಯದಲ್ಲಿ ಕೊನೆಗೂ ಪಂಜಾಬ್ ಕಿಂಗ್ಸ್ ಚೆನ್ನೈ ಸೂಪರ್ ಕಿಂಗ್ಸ್ ಎದುರು ಅವರದ್ದೇ ನೆಲದಲ್ಲಿ 4 ವಿಕೆಟ್‌ಗಳ ದಾಖಲೆಯ ಜಯ ಸಾಧಿಸಿದೆ. ಇದರೊಂದಿಗೆ ಚೆಪಾಕ್ ಮೈದಾನದಲ್ಲಿ 200+ ರನ್ ಗುರಿ ಯಶಸ್ವಿಯಾಗಿ ಚೇಸ್ ಮಾಡಿದ ಮೊದಲ ತಂಡ ಎನ್ನುವ ದಾಖಲೆಗೆ ಪಂಜಾಬ್ ಕಿಂಗ್ಸ್ ಭಾಜನವಾಗಿದೆ.

ಚೆನ್ನೈ ನೀಡಿದ 201 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಪಂಜಾಬ್ ಕಿಂಗ್ಸ್‌ಗೆ ಪ್ರಭ್‌ಸಿಮ್ರನ್ ಸಿಂಗ್ ಹಾಗೂ ನಾಯಕ ಶಿಖರ್ ಧವನ್ ಜೋಡಿ 50 ರನ್‌ಗಳ ಜತೆಯಾಟವಾಡುವ ಮೂಲಕ ತಂಡಕ್ಕೆ ಭರ್ಜರಿ ಆರಂಭ ಒದಗಿಸಿಕೊಟ್ಟರು. ಧವನ್ 15 ಎಸೆತಗಳಲ್ಲಿ 4 ಬೌಂಡರಿ, 1 ಸಿಕ್ಸರ್ ಒಳಗೊಂಡ 28 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮತ್ತೊಂದು ತುದಿಯಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ಪ್ರಭ್‌ಸಿಮ್ರನ್ ಸಿಂಗ್ 24 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಸಹಿತ 42 ರನ್ ಬಾರಿಸಿ ಜಡೇಜಾ ಬೌಲಿಂಗ್‌ನಲ್ಲಿ ಸ್ಟಂಪೌಟ್ ಆಗಿ ಪೆವಿಲಿಯನ್ ಸೇರಿದರು. ಕೆಲವೇ ಹೊತ್ತಿನಲ್ಲೇ ಅಥರ್ವ ಟೈಡೆ 13 ರನ್ ಬಾರಿಸಿ ವಿಕೆಟ್ ಒಪ್ಪಿಸಿದಾಗ ಪಂಜಾಬ್ ಪಾಳಯದಲ್ಲಿ ಆತಂಕ ಮನೆ ಮಾಡಿತು.

ಈ ವೇಳೆ 4ನೇ ವಿಕೆಟ್‌ಗೆ ಜತೆಯಾದ ಸ್ಯಾಮ್ ಕರ್‍ರನ್ ಹಾಗೂ ಲಿಯಾಮ್ ಲಿವಿಂಗ್‌ಸ್ಟೋನ್ 57 ರನ್‌ಗಳ ಜತೆಯಾಟವಾಡುವ ಮೂಲಕ ಗೆಲುವಿನ ಭರವಸೆ ಮೂಡಿಸಿದರು. ಕೊನೆ 5 ಓವರ್‌ಗಳಲ್ಲಿ ಗೆಲ್ಲಲು 72 ರನ್ ಅಗತ್ಯವಿದ್ದಾಗ, ತುಷಾರ್ ಪಾಂಡೆ ಬೌಲಿಂಗ್‌ನಲ್ಲಿ ಪಂಜಾಬ್ 24 ರನ್ ಕಲೆಹಾಕಿತು. ಲಿವಿಂಗ್‌ಸ್ಟೋನ್ 24 ಎಸೆತಗಳಲ್ಲಿ 1 ಬೌಂಡರಿ, 4 ಸಿಕ್ಸರ್ ಸಹಿತ 40 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಇವರ ಬೆನ್ನಲ್ಲೇ ಸ್ಯಾಮ್ ಕರ್‍ರನ್ 29 ರನ್ ಬಾರಿಸಿ ಮತೀಶ್ ಪತಿರಣ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆದರು.

ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಜಿತೇಶ್ ಶರ್ಮಾ 10 ಎಸೆತಗಳಲ್ಲಿ 2 ಬೌಂಡರಿ, 1 ಸಿಕ್ಸರ್ ಸಹಿತ 21 ರನ್ ಬಾರಿಸಿ ಶೇಕ್ ರಶೀದ್ ಹಿಡಿದ ಅದ್ಭುತ ಕ್ಯಾಚ್‌ಗೆ ಬಲಿಯಾದರು. ಕೊನೆಯ ಓವರ್‌ನಲ್ಲಿ ಗೆಲ್ಲಲು 9 ರನ್‌ಗಳ ಅಗತ್ಯವಿತ್ತು. ಮೊದಲ 3 ಎಸೆತದಲ್ಲಿ ಪಂಜಾಬ್ ಕೇವಲ 2 ರನ್ ಗಳಿಸಿತು. ಇದಾದ ಬಳಿಕ ಸಿಕಂದರ್ ರಾಜಾ 4 ಹಾಗೂ 5ನೇ ಎಸೆತದಲ್ಲಿ ತಲಾ 2 ರನ್ ಗಳಿಸಿದರು. ಕೊನೆ ಎಸೆತದಲ್ಲಿ ಪಂಜಾಬ್ ಗೆಲ್ಲವಿಗೆ ಅಗತ್ಯವಿದ್ದ 3 ರನ್ ಗಳಿಸುವ ಮೂಲಕ ರಾಜಾ ತಂಡಕ್ಕೆ ರೋಚಕ ಜಯ ತಂದುಕೊಟ್ಟರು. ಸಿಎಸ್‌ಕೆ ಪರ ತುಷಾರ್ ದೇಶಪಾಂಡೆ 3, ಜಡೇಜಾ 2, ಮತೀಶ ಪ್ರತಿರಣ 1 ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 200 ರನ್ ಸಿಡಿಸಿತು. ತಂಡದ ಪರ ಡೆವೊನ್ ಕಾನ್‌ವೇ 92, ಋತುರಾಜ್ ಗಾಯಕ್ವಾಡ್ 37, ಶಿವಂ ದುಬೆ 28 ರನ್ ಗಳಿಸಿದರು. ಪಂಜಾಬ್ ಪರ ಅರ್ಷದೀಪ್ ಸಿಂಗ್, ಸ್ಯಾಮ್ ಕರ್‍ರನ್, ರಾಹುಲ್ ಚಹರ್, ರಾಜಾ ತಲಾ ಒಂದೊಂದು ವಿಕೆಟ್ ಪಡೆದರು. ಡೆವೊನ್ ಕಾನ್‌ವೇ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.



ಹ್ಯಾಟ್ರಿಕ್ ಸಿಕ್ಸರ್ ಸಿಡಿಸಿ ಮುಂಬೈ ಗೆಲ್ಲಿಸಿದ ಡೇವಿಡ್



ಮುಂಬೈ, ಏ.30– ಇನ್ನಿಂಗ್ಸ್‌ನ ಕೊನೆ ಓವರ್‌ನಲ್ಲಿ ಹ್ಯಾಟ್ರಿಕ್ ಸಿಕ್ಸರ್ ಸಿಡಿಸುವ ಮೂಲಕ ಟೀಮ್ ಡೇವಿಡ್ ರಾಜಸ್ಥಾನ್ ರಾಯಲ್ಸ್ ವಿರುದ್ಧ ಮುಂಬೈ ಇಂಡಿಯನ್ಸ್‌ಗೆ 6 ವಿಕೆಟ್‌ಗಳ ರೋಚಕ ಗೆಲುವು ತಂದುಕೊಟ್ಟಿದ್ದಾರೆ.

213 ರನ್‌ಗಳ ಬೃಹತ್ ಟಾರ್ಗೆಟ್ ಪಡೆದ ಮುಂಬೈ ಇಂಡಿಯನ್ಸ್ ಒತ್ತಡಕ್ಕೆ ಸಿಲುಕಿತು. ನಾಯಕ ರೋಹಿತ್ ಶರ್ಮಾ ಕೇವಲ 3 ರನ್ ಸಿಡಿಸಿ ನಿರ್ಗಮಿಸಿದರು. ಈ ವೇಳೆ ಒಂದಾದ ಇಶಾನ್ ಕಿಶನ್ ಹಾಗೂ ಕ್ಯಾಮರೂನ್ ಗ್ರೀನ್ 2ನೇ ವಿಕೆಟ್‌ಗೆ 62 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ ಇಶಾನ್ ಕಿಶನ್ 23 ಎಸೆತದಲ್ಲಿ 28 ರನ್ ಸಿಡಿಸಿ ನಿರ್ಗಮಿಸಿದರು. ಇತ್ತ ಗ್ರೀನ್ 26 ಎಸೆತದಲ್ಲಿ 4 ಬೌಂಡರಿ, 2 ಸಿಕ್ಸರ್ ಮೂಲಕ 44 ರನ್ ಗಳಿಸಿ ಔಟಾದರು. ಈ ವೇಳೆ ಆಗಮಿಸಿದ ಸೂರ್ಯಕುಮಾರ್ ಯಾದವ್ 29 ಎಸೆತದಲ್ಲಿ 8 ಬೌಂಡರಿ, 2 ಸಿಕ್ಸರ್ ಒಳಗೊಂಡ 55 ರನ್ ಸಿಡಿಸಿ ನಿರ್ಗಮಿಸಿದರು. ಈ ಸಂದರ್ಭ ಒಂದಾದ ತಿಲಕ್ ವರ್ಮಾ ಹಾಗೂ ಟಿಮ್ ಡೇವಿಡ್ ಸ್ಫೋಟಕ ಬ್ಯಾಟಿಂಗ್ ಮೂಲಕ ಸೋಲಿನಿಂದ ತಂಡವನ್ನು ಪಾರು ಮಾಡಿದರು. ಡೇವಿಡ್ ಅಂತಿಮ ಓವರ್‌ನಲ್ಲಿ ಹ್ಯಾಟ್ರಿಕ್ ಸಿಕ್ಸರ್ ಸಿಡಿಸಿದ ಪರಿಣಾಮ ಮುಂಬೈ 19.3 ಓವರ್‌ಗಳಲ್ಲಿ ಇನ್ನೂ 3 ಎಸೆತ ಬಾಕಿ ಇರುವಂತೆ 6 ವಿಕೆಟ್‌ಗಳಿಂದ ಪಂದ್ಯ ಗೆದ್ದುಕೊಂಡಿತು. ಡೇವಿಡ್ 14 ಎಸೆತಗಳಲ್ಲಿ 5 ಸಿಕ್ಸರ್, 2 ಬೌಂಡರಿ ಒಳಗೊಂಡ 45ರನ್ ಗಳಿಸಿದರೇ, ತಿಲಕ್ ವರ್ಮಾ 29 ರನ್ ಗಳಿಸಿದರು. ರಾಜಸ್ಥಾನ್ ಪರ ಅಶ್ವಿನ್ 2, ಟ್ರೆಂಟ್ ಬೌಲ್ಟ್, ಸಂದೀಪ್ ಶರ್ಮಾ ತಲಾ ಒಂದೊಂದು ವಿಕೆಟ್ ಒಪ್ಪಿಸಿದರು.

ಇದಕ್ಕೂ ಮುನ್ನಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ರಾಯಲ್ಸ್ ಯಶಸ್ವಿ ಜೈಸ್ವಾಲ್ ಅವರ ಚೊಚ್ಚಲ ಶತಕದ ನೆರವಿನಿಂದ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 212ರನ್ ಗಳಿಸಿತು. ತಂಡದ ಪರ ಯಶಸ್ವಿ ಜೈಸ್ವಾಲ್ 62 ಎಸೆತಗಳಲ್ಲಿ 16 ಬೌಂಡರಿ, 8 ಸಿಕ್ಸರ್ ಒಳಗೊಂಡ 124ರನ್ ಗಳಿಸಿ ನಿರ್ಗಮಿಸಿದರು. ಜೋಸ್ ಬಟ್ಲರ್ 18, ನಾಯಕ ಸಂಜು ಸ್ಯಾಮ್ಸನ್ 14, ದೇವದತ್ ಪಡಿಕ್ಕಲ್ 2 ರನ್, ಜೇಸನ್ ಹೋಲ್ಡರ್ 11, ಶಿಮ್ರೊನ್ ಹೆಟ್ಮೆಯರ್ 8 ರನ್, ಧ್ರುವ್ ಜುರೆಲ್ 2 ರನ್, ಆರ್ ಅಶ್ವಿನ್ ಅಜೇಯ 8 ರನ್ ಸಿಡಿಸಿದರು. ಮುಂಬೈ ಇಂಡಿಯನ್ಸ್ ಪರ ಅರ್ಷದ್ ಖಾನ್ 3, ಪಿಯೂಷ್ ಚಾವ್ಲಾ 2, ಜೋಫ್ರಾ ಅರ್ಚರ್, ರೀಲೆ ಮೆಡೆಡಿತ್ ತಲಾ ಒಂದೊಂದು ವಿಕೆಟ್ ಪಡೆದರು. ಶತಕ ಸಿಡಿಸಿದ ಜೈಸ್ವಾಲ್ ಪಂದ್ಯ ಪುರುಷ ಪ್ರಶಸ್ತಿ ಪಡೆದರು.

ಸ್ಕೋರ್ ವಿವರ
ರಾಜಸ್ಥಾನ್ ರಾಯಲ್ಸ್ 212/7
ಮುಂಬೈ ಇಂಡಿಯನ್ಸ್ 214/4
(ಮುಂಬೈಗೆ 6 ವಿಕೆಟ್ ಜಯ)



[ಮೇ 1]
ಲಕ್ನೋ V/S ಬೆಂಗಳೂರು
ಸ್ಥಳ: ಅಟಲ್ ಬಿಹಾರಿ ವಾಜಪೇಯಿ ಕ್ರಿಕೆಟ್ ಮೈದಾನ, ಲಕ್ನೋ
ಸಮಯ: ಸಂಜೆ 7.30





ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಮಾಬಾಯಿ ನಗರದ ಗ್ರಾಮ ಪಂಚಾಯಿತಿ ಸದಸ್ಯರಾದ ಶಿವಲಿಂಗಪ್ಪ, ಸಿದ್ದರಾಜು, ಗುರುಸ್ವಾಮಿ, ಸೋಮಶೇಖರ್, ಮಾಜಿ ಗ್ರಾಪಂ ಸದಸ್ಯರಾದ ಶಶಿಕಲಾ, ಮುಖಂಡರಾದ ಮಹೇಶ್, ಮಲ್ಲಾರಾಧ್ಯ, ಗ್ರಾಮದ ಅನೇಕ ಮುಖಂಡರು ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷ ತೊರೆದು ಗೆಜ್ಜಗಳ್ಳಿ ಮಹೇಶ್ ನೇತೃತ್ವದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕವೀಶ್‌ಗೌಡರ ಸಮ್ಮುಖದಲ್ಲಿ ಭಾರತೀಯ ಜನತಾ ಪಾರ್ಟಿಗೆ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಈರಪ್ಪ, ಕಾರ್ಯದರ್ಶಿ ಶ್ರೀಕಂಠಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಭಾಗ್ಯಶ್ರೀ ಭಟ್, ಬ್ಯಾತಹಳ್ಳಿ ಮಧು, ಮೋಹನ್, ಕೃಷ್ಣ (ಕಿಟ್ಟಿ) ಹಾಗೂ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

ಬಳಕೆದಾರರು ಟ್ವಿಟರ್‌ನಲ್ಲಿ ಸುದ್ದಿಗಳನ್ನು ಓದಲು ಹಣ ಪಾವತಿಸಬೇಕು: ಮಸ್ಕ್ ಘೋಷಣೆ



ನವದೆಹಲಿ: ಟ್ವಿಟರ್ ಮಾಲೀಕ ಎಲೋನ್ ಮಸ್ಕ್ ಅವರು ಮಾಧ್ಯಮ ಪ್ರಕಾಶಕರಿಗೆ ದೊಡ್ಡ ಘೋಷಣೆ ಮಾಡಿದ್ದಾರೆ. ಮುಂದಿನ ತಿಂಗಳಿನಿಂದ ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್‌ನಲ್ಲಿ ಲೇಖನಗಳನ್ನು ಓದಲು ಬಳಕೆದಾರರಿಗೆ ಶುಲ್ಕ ವಿಧಿಸಲು ಟ್ವಿಟರ್ ಈಗ ಮಾಧ್ಯಮ ಪ್ರಕಾಶಕರಿಗೆ ಅವಕಾಶ ನೀಡಲಿದೆ. ಎಲೋನ್ ಮಸ್ಕ್ ಅವರು ಹೊಸ ಪ್ರಕಟಣೆಯನ್ನು ಮಾಧ್ಯಮ ಸಂಸ್ಥೆಗಳು ಮತ್ತು ಸಾರ್ವಜನಿಕರಿಗೆ ಜಯ ಎಂದು ಕರೆದಿದ್ದಾರೆ. ಮುಂದಿನ ತಿಂಗಳಿನಿಂದ, ಪ್ಲಾಟ್ ಫಾರ್ಮ್ ಮಾಧ್ಯಮ ಪ್ರಾಶಕರಿಗೆ ಪ್ರತಿ ಲೇಖನದ ಆಧಾರದ ಮೇಲೆ ಬಳಕೆ ದಾರರಿಗೆ ಶುಲ್ಕ ವಿಧಿಸಲು ಅನುವು ಮಾಡಿಕೊಡುತ್ತದೆ ಎಂದು ಮಸ್ಕ್ ಹೇಳಿದರು. ಇದು ಮಾಸಿಕ ಚಂದಾದಾರಿಕೆಗೆ ಸೈನ್ ಅಪ್ ಮಾಡದ ಬಳಕೆದಾರರು ಸಾಂದರ್ಭಿಕ ಲೇಖನಗಳನ್ನು ಓದಲು ಬಯಸಿದರೆ ಪ್ರತಿ ಲೇಖನಕ್ಕೆ ಹೆಚ್ಚಿನ ಬೆಲೆಯನ್ನು ಪಾವತಿಸಲು ಅನುವು ಮಾಡಿಕೊಡುತ್ತದೆ. ಈ ಪ್ರಕಟಣೆಯು ಮಾಧ್ಯಮ ಸಂಸ್ಥೆಗಳಿಗೆ ಮತ್ತು ಸಾರ್ವಜನಿಕರಿಗೆ ದೊಡ್ಡ ಗೆಲುವಾಗಬೇಕು ಎಂದು ಎಲೋನ್ ಮಸ್ಕ್ ಹೇಳಿದರು.

ಮೇ 2, 3ರಂದು ಮತಗಟ್ಟೆ ಅಧಿಕಾರಿಗಳಿಗೆ 2ನೇ ತರಬೇತಿ

ಗೈರು ಹಾಜರಾದರೆ ಶಿಸ್ತು ಕ್ರಮದ ಎಚ್ಚರಿಕೆ

ಮೈಸೂರು, ಏ.30(ಆರ್‌ಕೆ)–ಮೇ 2 ಮತ್ತು 3ರಂದು ಮೈಸೂರು ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳ ಮತಗಟ್ಟೆ ಅಧಿಕಾರಿಗಳಿಗೆ 2ನೇ ಹಂತದ ತರಬೇತಿ ಆಯೋಜಿಸಲಾಗಿದೆ.

ಮೇ 5ರಂದು ಹೆಚ್.ಡಿ.ಕೋಟೆ, ನಂಜನಗೂಡು ಕೃಷ್ಣರಾಜ–1, ಚಾಮರಾಜ–1, ವರುಣ ವಿಧಾನಸಭಾ ಕ್ಷೇತ್ರಗಳ ಮತಗಟ್ಟೆ ಅಧಿಕಾರಿಗಳಿಗೆ, ಮೇ 3ರಂದು ಪಿರಿಯಾಪಟ್ಟಣ, ಕೃಷ್ಣರಾಜ–2, ಚಾಮರಾಜ–2, ನರಸಿಂಹರಾಜ, ಟಿ.ನರಸೀಪುರ ಕ್ಷೇತ್ರದ ಪೋಲಿಂಗ್ ಆಫೀಸರ್‌ಗಳಿಗೆ ಮತದಾನ ಪ್ರಕ್ರಿಯೆ ನಡೆಸುವ ಬಗ್ಗೆ ಮಾಸ್ಟರ್ ಟ್ರೇನರ್‌ಗಳು ತರಬೇತಿ ನೀಡುವರು.

ಮತಗಟ್ಟೆಗಳಲ್ಲಿ ಸಿದ್ಧತೆ, ವಿದ್ಯುನ್ಮಾನ ಮತಯಂತ್ರಗಳ ಜೋಡಣೆ, ಮತದಾನದ ತಾಲೀಮು ನಡೆಸಿ ಖಚಿತಪಡಿಸಿಕೊಳ್ಳುವುದು, ಮತದಾನದಲ್ಲಿ ಅನುಸರಿಸಬೇಕಾದ ಕ್ರಮಗಳು ಮತದಾರರ ಪಟ್ಟಿಯಲ್ಲಿ ಹೆಸರಿರುವುದನ್ನು ದೃಢಪಡಿಸಿ ಹಕ್ಕು ಚಲಾಯಿಸಲು ಅವಕಾಶ ನೀಡುವ ಬಗ್ಗೆ ಮಾಹಿತಿ ನೀಡಲಾಗುವುದು. ತರಬೇತಿಗೆ ಯಾವುದೇ ಕಾರಣ ನೀಡದೆ ಹಾಜರಾಗಬೇಕು. ಗೈರು ಹಾಜರಾದಲ್ಲಿ ಪ್ರಜಾಪ್ರತಿನಿಧಿ ಕಾಯ್ದೆ 1951ರ ಅನ್ವಯ ಎಫ್‌ಐಆರ್ ದಾಖಲಿಸಿ ಇಲಾಖಾ ವಿಚಾರಣೆಗೆ ಶಿಫಾರಸು ಮಾಡಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ತಿಳಿಸಿದ್ದಾರೆ.

ದಾರಿಪುರದಲ್ಲಿ 'ನಮ್ಮ ನಡೆ ಮತಗಟ್ಟೆ ಕಡೆ'



ಮೈಸೂರು, ಏ.30(ಎಂಕೆ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದಾರಿಪುರ ಗ್ರಾಮದಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ 'ನಮ್ಮ ನಡೆ ಮತಗಟ್ಟೆಯ ಕಡೆ' ಕಾರ್ಯಕ್ರಮದ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು.

ಧ್ವಜಾರೋಹಣ ನೆರವೇರಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ ಕಮಲಾಬಾಯಿ ಮಾತನಾಡಿ, ಚುನಾವಣೆಯು ಪ್ರಜಾಪ್ರಭುತ್ವದ ಹಬ್ಬವಾಗಿದ್ದು, ಪ್ರತಿಯೊಬ್ಬರೂ ಮೇ 10 ರಂದು ಮತದಾನ ಮಾಡುವ ಮೂಲಕ ಈ ಹಬ್ಬದಲ್ಲಿ ಪಾಲ್ಗೊಳ್ಳಬೇಕು ಎಂದು ತಿಳಿಸಿದರು.

ಮತದಾನ ಮಾಡುವುದು ನಮ್ಮ ಹಕ್ಕು ಮತ್ತು ಕರ್ತವ್ಯವಾಗಿದೆ. ಮತ ಚಲಾಯಿಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆ ಬಲಪಡಿಸಬೇಕು. ಯಾವುದೇ ಆಸೆ, ಆಮಿಷ ಹಾಗೂ ಒತ್ತಡಕ್ಕೆ ಒಳಗಾಗದೆ ನೈತಿಕ ಮತದಾನ ಮಾಡುವ ಮೂಲಕ ಸಂವಿಧಾನ ನಮಗೆ ನೀಡಿರುವ ಹಕ್ಕನ್ನು ಚಲಾಯಿಸಬೇಕು ಎಂದು ಕರೆ ನೀಡಿದರಲ್ಲದೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಗುರುತಿಸಿರುವ ಎಲ್ಲಾ ವಯೋವೃದ್ಧರು ಹಾಗೂ ವಿಶೇಷ ಚೇತನರಿಂದ ಚುನಾವಣಾ ಆಯೋಗದ ನಿಯಮದಂತೆ ಮನೆಯಲ್ಲೇ ಮತದಾನ ಮಾಡಿಸಲಾಗುತ್ತಿದೆ. ಈಗಾಗಲೇ ಗುರುತಿಸಿರುವ ಎಲ್ಲರಿಗೂ ಮತದಾನ ಮಾಡಲು ಸೂಕ್ತ ವ್ಯವಸ್ಥೆ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಸಾಂಸ್ಕೃತಿಕ ಕಲಾತಂಡಗಳು ಭಾಗಿ: 'ನಮ್ಮ ನಡೆ ಮತಗಟ್ಟೆಯ ಕಡೆ' ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹತ್ತಾರು ಸಾಂಸ್ಕೃತಿಕ ಕಲಾತಂಡಗಳ ಕಲಾವಿದರು, ದಾರಿಪುರ ಗ್ರಾಮದಿಂದ ಜಯಪುರ ಗ್ರಾಮದವರೆಗೆ ಕಾಲ್ನಡಿಗೆ ಜಾಥಾ ನಡೆಸಿದರಲ್ಲದೇ ವೇದಿಕೆ ಕಾರ್ಯಕ್ರಮದಲ್ಲಿ ನೃತ್ಯದ ಮೂಲಕ ಮತದಾನದ ಅರಿವು ಮೂಡಿಸಿದರು. ತಾಲ್ಲೂಕು ಸ್ವೀಪ್ ನೋಡಲ್ ಅಧಿಕಾರಿ ಹೆಚ್.ಡಿ.ಗಿರೀಶ್ ಮತದಾರರ ಪ್ರತಿಜ್ಞಾವಿಧಿ ಬೋಧಿಸಿದರು. ತಾಲೂಕು ಹಾಗೂ ಗ್ರಾಪಂ ಅಧಿಕಾರಿ ಸಿಬ್ಬಂದಿ ಹಾಗೂ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಸೇರಿದಂತೆ ಹಲವರು ಭಾಗವಹಿಸಿದ್ದರು.

ಇಂದು ಸೋಮಣ್ಣ ಪರ ಕೆ.ಶಿವರಾಂ ಮತಯಾಚನೆ



ಮೈಸೂರು: ವರುಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಪರವಾಗಿ ಮೇ 1ರಿಂದ ನಿವೃತ್ತ ಐಎಎಸ್ ಅಧಿಕಾರಿ ಹಾಗೂ ಬಿಜೆಪಿ ಮುಖಂಡ ಕೆ.ಶಿವರಾಂ ಪ್ರಚಾರ ಕಾರ್ಯ ಕೈಗೊಳ್ಳಲಿದ್ದಾರೆ. ಪಕ್ಷದ ಪ್ರಮುಖರೊಂದಿಗೆ ಕ್ಷೇತ್ರದಾದ್ಯಂತ ಸೋಮಣ್ಣ ಅವರ ಪರವಾಗಿ ಪ್ರಚಾರ ಕಾರ್ಯ ಕೈಗೊಳ್ಳಲಿರುವ ಅವರು ಗ್ರಾಮಗಳಲ್ಲಿ ಪಾದಯಾತ್ರೆ ಮಾಡಲಿದ್ದಾರೆ.

ಇಂದು ಮೈಸೂರಿನ ಕೆಆರ್, ಚಾಮರಾಜ ಕ್ಷೇತ್ರದಲ್ಲಿ ಸಿಎಂ ರೋಡ್ ಶೋ



ಮೈಸೂರು, ಏ.30(ಆರ್‌ಕೆ)–ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಮೈಸೂರಿನ ರಾಜಮಾರ್ಗದಲ್ಲಿ ಭರ್ಜರಿ ರೋಡ್ ಶೋ ನಡೆಸಿದ ಬೆನ್ನಲ್ಲೇ ನಾಳೆ(ಮೇ 1) ಕೆಆರ್, ಚಾಮರಾಜ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರೋಡ್ ಶೋ ನಡೆಸಿ ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ಮಾಡುವರು.

ಸೋಮವಾರ ಮಧ್ಯಾಹ್ನ 12 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಹೊರಟು ಮಧ್ಯಾಹ್ನ 12.35 ಗಂಟೆಗೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿರುವ ಮುಖ್ಯಮಂತ್ರಿಗಳು, ಮಧ್ಯಾಹ್ನ 1 ಗಂಟೆಗೆ ಕೃಷ್ಣರಾಜ ಕ್ಷೇತ್ರ ಹಾಗೂ ಮಧ್ಯಾಹ್ನ 3.30 ಗಂಟೆಗೆ ಚಾಮರಾಜ ವಿಧಾನಸಭಾ ಕ್ಷೇತ್ರಗಳಲ್ಲಿ ರೋಡ್ ಶೋ ಹಾಗೂ ಬಹಿರಂಗ ಸಭೆಗಳನ್ನು ನಡೆಸುವರು.

ನಂತರ ಸಂಜೆ 5.30 ಗಂಟೆಗೆ ಮಂಡ್ಯ ಹಾಗೂ ಸಂಜೆ 6.30 ಗಂಟೆಗೆ ಮದ್ದೂರು ವಿಧಾನಸಭಾ ಕ್ಷೇತ್ರಗಳಲ್ಲಿ ರೋಡ್ ಶೋ ನಡೆಸಿ ರಾತ್ರಿ 9 ಗಂಟೆಗೆ ಬೆಂಗಳೂರಿಗೆ ತೆರಳುವರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೋಗಾದಿ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಮತಯಾಚಿಸಿದರು. ಇದೇ ವೇಳೆ ಕೆಪಿಸಿಸಿ ಸದಸ್ಯ ಕೆ.ಮರೀಗೌಡ, ಸ್ಥಳೀಯ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಮತ್ತು ಗ್ರಾಮಸ್ಥರು ಸಿದ್ದೇಗೌಡರವರನ್ನು ಬೃಹತ್ ಹಣ್ಣಿನ ಹಾರ ಹಾಕಿ ಸ್ವಾಗತಿಸಿದರು.

ಕಾಂಗ್ರೆಸ್, ಜೆಡಿಎಸ್ ಗೆದ್ದರೆ ಕುಟುಂಬಗಳಿಗೆ ಅನುಕೂಲ

● ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ ● ಇವೆರಡೂ ಪಕ್ಷಗಳ ನಡುವೆ ವಿಚಿತ್ರ ಸಾಮ್ಯತೆ ● ಕಾಂಗ್ರೆಸ್‌ಗೆ ದೆಹಲಿ ಕುಟುಂಬ; ಜೆಡಿಎಸ್‌ಗೆ ಪರಿವಾರ ಮುಖ್ಯ



ಬೆಂಗಳೂರು: ಭಾನುವಾರ ಸಂಜೆ ಮೈಸೂರಿನಲ್ಲಿ ರೋಡ್ ಶೋ ನಡೆಸುವ ಮುನ್ನ ದಿನವಿಡೀ ಜೆಡಿಎಸ್ ಭದ್ರಕೋಟೆಯಾಗಿರುವ ಚನ್ನಪಟ್ಟಣ, ಹಾಸನ ಮತ್ತು ಕೋಲಾರಕ್ಕೆ ಲಗ್ಗೆಯಿಟ್ಟ ಪ್ರಧಾನಿ ಮೋದಿಯವರು ತಮ್ಮ ಭಾಷಣದುದ್ದಕ್ಕೂ ಕಾಂಗ್ರೆಸ್ ಮತ್ತು ಜೆಡಿಎಸ್ ವಿರುದ್ಧ ಕಿಡಿಕಾರಿದರು.

ಕಾಂಗ್ರೆಸ್ ಮತ್ತು ಜೆಡಿಎಸ್ ಮಧ್ಯೆ ಒಂದು ವಿಚಿತ್ರ ಸಾಮ್ಯತೆ ಇದೆ. ಕಾಂಗ್ರೆಸ್ ಯಾವುದೇ ನಿರ್ಧಾರ ಕೈಗೊಳ್ಳುವ ಮೊದಲು ದೆಹಲಿಯಲ್ಲಿರುವ ಕುಟುಂಬವನ್ನು ಕೇಳಬೇಕು. ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಅಭ್ಯರ್ಥಿ, ಬಹುಮತ ಬಂದರೆ ಮುಖ್ಯಮಂತ್ರಿ ಮುಂತಾದ ಎಲ್ಲಾ ನಿರ್ಧಾರಗಳನ್ನು ಕೈಗೊಳ್ಳಲು ದೆಹಲಿ ಕುಟುಂಬವನ್ನು ಕೇಳಲೇಬೇಕಾಗುತ್ತದೆ. ಆ ಕುಟುಂಬದ ಮುಂದೆ ಮಂಡಿಯೂರಿದವರು ಮಾತ್ರ ಆ ಪಕ್ಷದಲ್ಲಿ ಉಳಿಯಬಹುದು ಎಂದು ಹೇಳಿದರು.

ಬಿಜೆಪಿಗೆ ಜನರೇ ಪರಿವಾರ: ಅದೇ ರೀತಿ ರಾಜ್ಯದಲ್ಲಿ ಇರುವ ಇನ್ನೊಂದು ಪಕ್ಷ ಜೆಡಿಎಸ್ ಒಂದು ಪರಿವಾರದ ಪ್ರೈವೇಟ್ ಲಿಮಿಟೆಡ್ ಆಗಿದೆ. ಈ ಪಕ್ಷವು ತಮ್ಮ ಪರಿವಾರವನ್ನು ಉಳಿಸಿಕೊಳ್ಳುವುದಕ್ಕೆ ಶ್ರಮಿಸುತ್ತಿದೆ. ಕುಟುಂಬದಲ್ಲಿ ಯಾವ ಸದಸ್ಯನ ಪ್ರಭಾವ ಹೆಚ್ಚಿದೆ ಎನ್ನುವುದನ್ನು ಲೆಕ್ಕ ಹಾಕಲಾಗುತ್ತಿದೆಯೇ ಹೊರತು, ಅವರು ಎಷ್ಟು ಮಟ್ಟಿಗೆ ಜನರಿಗೆ ಹತ್ತಿರವಾಗಿದ್ದಾರೆ ಎಂಬುದನ್ನು ಪರಿಗಣಿಸುತ್ತಿಲ್ಲ ಎಂದರು. ಆದರೆ ಬಿಜೆಪಿ ಮಾತ್ರ ದೇಶದ ಜನಸಾಮಾನ್ಯರನ್ನೇ ತನ್ನ ಪರಿವಾರ ಎಂದು ಪರಿಗಣಿಸಿದೆ. ಅದಕ್ಕಾಗಿ ಉಚಿತ ವೈದ್ಯಕೀಯ ಸೌಲಭ್ಯ, ಉಚಿತ ಲಸಿಕೆ, ಮನೆ, ವಿದ್ಯುತ್, ನೀರು, ಕೃಷಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಿದೆ ಎಂದು ಹೇಳಿದರು.

> ಕಾಂಗ್ರೆಸ್ ನಾಯಕರು ನನ್ನನ್ನು ವಿಷದ ಸರ್ಪ ಎನ್ನುತ್ತಾರೆ. ಹಾವು ಯಾವಾಗಲೂ ಶಿವನ ಕೊರಳಿನಲ್ಲಿರುತ್ತದೆ ನನಗೆ ಜನತಾ ಜನಾರ್ಧನರೇ ಶಿವನ ಸ್ವರೂಪಿಗಳು. ಹೀಗಾಗಿ ಕಾಂಗ್ರೆಸ್‌ನವರ ಆ ಟೀಕೆಯನ್ನು ಸ್ವಾಗತಿಸುತ್ತೇನೆ. ಮನ್ ಕೀ ಬಾತ್ ಈಗಷ್ಟೇ ನೂರು ಸಂಚಿಕೆ ಪೂರೈಸಿದೆ. ಇದರ ಜೊತೆಗೆ ಕಾಂಗ್ರೆಸ್ ಬಹುಶಃ ನನ್ನ ವಿರುದ್ಧದ ಟೀಕೆಗಳ ಸೆಂಚುರಿಯನ್ನೂ ಈ ಚುನಾವಣೆಯಲ್ಲೇ ಬಾರಿಸಬಹುದು.
> – ಪ್ರಧಾನಿ ಮೋದಿ

ಜೆಡಿಎಸ್‌ಗೆ ಕಾಂಗ್ರೆಸ್‌ನ ಬಿ–ಟೀಂ: ಜೆಡಿಎಸ್‌ಗೆ ನೀಡುವ ಪ್ರತಿಯೊಂದು ಮತವೂ ಕಾಂಗ್ರೆಸ್‌ಗೆ ಹೋಗುತ್ತದೆ. ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರ ಹಿಡಿದರೆ ಬಿಜೆಪಿ ಸರ್ಕಾರದ ಎಲ್ಲಾ ಯೋಜನೆಗಳನ್ನು ಕೈಬಿಡಲಿದೆ. ಕಾಂಗ್ರೆಸ್‌ನ ಬಿ–ಟೀಮ್ ಆಗಿರುವ ಜೆಡಿಎಸ್ ಅವೆಲ್ಲವನ್ನೂ ಒಪ್ಪಲಿದೆ. ಇದರಿಂದ ರಾಜ್ಯದ ಆಡಳಿತ ರಿವರ್ಸ್ ಗೇರ್‌ನಲ್ಲಿ ಚಲಿಸುವ ಅಪಾಯವಿದೆ. ಜನರು ಇದಕ್ಕೆ ಅವಕಾಶ ಕೊಡದೆ ಡಬ್ಬಲ್ ಇಂಜಿನ್ ಸರ್ಕಾರವನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ತೋರಿಕೆಯ ಜಗಳ: ಕಾಂಗ್ರೆಸ್ ಮತ್ತು ಜೆಡಿಎಸ್ ನೋಡಲು ಬೇರೆ ಬೇರೆ ಪಕ್ಷಗಳಾಗಿದ್ದರೂ, ಒಳಗಿನಿಂದ ಇಬ್ಬರೂ ಒಂದೇ ಆಗಿದ್ದಾರೆ. ಸಂಸತ್‌ನಲ್ಲಿ ಕೂಡ ಇಬ್ಬರೂ ಜೊತೆಯಾಗಿದ್ದು, ಸಂಸತ್‌ನಲ್ಲಿ ಕಾಂಗ್ರೆಸ್‌ನ ತೀರ್ಮಾನಗಳನ್ನು ಜೆಡಿಎಸ್ ಬೆಂಬಲಿಸುತ್ತಿದೆ. ಜೆಡಿಎಸ್‌ನವರಂತೂ ಹದಿನೈದಿಪ್ಪತ್ತು ಸೀಟು ಗೆದ್ದರೂ ತಾವೇ ಕಿಂಗ್ ಮೇಕರ್ ಎಂದು ಬಹಿರಂಗವಾಗಿ ಹೇಳತೊಡಗಿದ್ದಾರೆ. ಈ ಪಕ್ಷಗಳು ಅಧಿಕಾರಕ್ಕೆ ಬಂದಾಗಲೆಲ್ಲಾ ಕೆಲವೇ ಕುಟುಂಬಗಳಿಗೆ ಅನುಕೂಲವಾಗುತ್ತಿದೆ ಎಂದ ಅವರು, 2018ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ನಾಯಕರು ಪರಸ್ಪರ ಒಬ್ಬರನ್ನೊಬ್ಬರು ದೂರುತ್ತಿದ್ದು. ಆದರೆ ಚುನಾವಣೆ ಮುಗಿಯುತ್ತಿದ್ದಂತೆಯೇ ಇವೆರಡೂ ಪಕ್ಷಗಳು ಕೈಜೋಡಿಸಿದವು. ಇದೇ ರೀತಿ ಇವರಿಬ್ಬರಲ್ಲೂ ತೋರಿಕೆಯ ಜಗಳ ನಡೆಯುತ್ತಲೇ ಇರುತ್ತದೆ. ಅದನ್ನು ಜನರು ಅರ್ಥ ಮಾಡಿಕೊಳ್ಳಬೇಕು ಎಂದು ಮೋದಿ ಹೇಳಿದರು.

ಕಾಂಗ್ರೆಸ್‌ನ ಪ್ರತೀ ಗ್ಯಾರಂಟಿ ಮತ್ತು ಘೋಷಣೆ ಸುಳ್ಳಿನ ಕಂತೆ. ಹಿಮಾಚಲ ಪ್ರದೇಶದಲ್ಲಿ ಚುನಾವಣೆ ಸಂದರ್ಭ ಪ್ರತೀ ಕುಟುಂಬದ ಮಹಿಳೆಗೆ 1500 ರೂ. ನೀಡುವುದಾಗಿ ಕಾಂಗ್ರೆಸ್ ಗ್ಯಾರಂಟಿ ನೀಡಿತ್ತು. ಆದರೆ ಅಧಿಕಾರಕ್ಕೆ ಬಂದ ಮೊದಲ ಸಂಪುಟ ಸಭೆಯಲ್ಲೇ ಡೀಸೆಲ್ ದರ ಹೆಚ್ಚಳ ನಿರ್ಧಾರ ಕೈಗೊಂಡಿತ್ತು. ಈವರೆವಿಗೂ ಅಲ್ಲಿನ ಮಹಿಳೆಗೆ ಕಾಂಗ್ರೆಸ್ ಗ್ಯಾರಂಟಿ ನೀಡಿದ್ದ ಹಣ ಸಿಕ್ಕಲಿಲ್ಲ ಎಂದರು.

ಗ್ಯಾರಂಟಿ ಕಾರ್ಡ್ ಹೆಸರಲ್ಲಿ ಕಾಂಗ್ರೆಸ್‌ನಿಂದ ವಂಚನೆ

ಶಾಸಕ ಸಾ.ರಾ.ಮಹೇಶ್ ಪರ ಎಂಎಲ್‌ಸಿ ಸಿ.ಎನ್.ಮಂಜೇಗೌಡ ಮತಯಾಚನೆ



ಕೆ.ಆರ್.ನಗರ ಏ.30– ರಾಜ್ಯದ ಮುಖ್ಯಮಂತ್ರಿಯಾಗಿ 5 ವರ್ಷ ಆಡಳಿತ ನಡೆಸಿದ ಸಿದ್ದರಾಮಯ್ಯ ಜನಪರ ಆಡಳಿತ ನಡೆಸದೆ ಈಗ ಗ್ಯಾರಂಟಿ ಕಾರ್ಡ್ ಹೆಸರಲ್ಲಿ ಜನರನ್ನು ವಂಚಿಸುತ್ತಿದ್ದು, ಅದಕ್ಕೆ ಮರಳಾಗದೇ ಚುನಾವಣೆಯಲ್ಲಿ ರಾಜ್ಯದ ಜನತೆ ಬುದ್ಧಿ ಕಲಿಸಲಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕಿಡಿಕಾರಿದರು.

ಪಟ್ಟಣದ ಮಾಜಿ ಸಚಿವ ದಿ.ಎಸ್.ನಂಜಪ್ಪ ಅವರ ಮನೆಗೆ ಭೇಟಿ ನೀಡಿ ಅವರ ಪತ್ನಿ ಲಲಿತಮ್ಮ ನಂಜಪ್ಪರ ಆಶೀರ್ವಾದ ಪಡೆದು ಶಾಸಕ ಸಾ.ರಾ.ಮಹೇಶ್ ಪರ ಮತಯಾಚಿಸಿ ಮಾತನಾಡಿದ ಅವರು, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ಬಜೆಟ್‌ಗಿಂತ ಹೆಚ್ಚಿನ ಸಾಲ ಮಾಡಿದ್ದು, ಇದೀಗ ರಾಜ್ಯದಲ್ಲಿ ಉಚಿತ ಯೋಜನೆಗಳನ್ನು ಜಾರಿಗೆ ತರುತ್ತೇವೆ ಎಂದು ಸುಳ್ಳು ಭರವಸೆ ನೀಡುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ನೀಡಿದರೆ ಮತ್ತಷ್ಟು ಸಾಲದ ಸುಳಿಗೆ ರಾಜ್ಯವನ್ನು ಸಿಲುಕಿಸಲಿದೆ. ಆದ್ದರಿಂದ ಈ ಬಾರಿ ಜೆಡಿಎಸ್ ಹಾಗೂ ಕ್ಷೇತ್ರದ ಅಭ್ಯರ್ಥಿ ಮಹೇಶ್ ಅವರನ್ನು ಅತಿ ಹೆಚ್ಚು ಮತಗಳ ಅಂತರಗಳಿಂದ ಗೆಲ್ಲಿಸುವಂತೆ ಮನವಿ ಮಾಡಿದರು.

ಕೆ.ಆರ್.ನಗರದಲ್ಲಿ ಕಾಂಗ್ರೆಸ್‌ನವರು 2 ಬಾರಿ ಸೋತಿದ್ದೇವೆ. ಆದ್ದರಿಂದ ಈ ಬಾರಿ ನಮ್ಮನ್ನು ಗೆಲ್ಲಿಸಿ ಎಂದು ಅನುಕಂಪ ಪಡೆಯಲು ಯತ್ನಿಸುತ್ತಿದ್ದು, ಸೋತಿದ್ದಾರೆ ಎಂಬುದಕ್ಕಾಗಿ ಗೆಲ್ಲಿಸಲು ಹೋದರೇ ಅಭಿವೃದ್ಧಿ ಸಾಧ್ಯವೇ ಎಂದು ವ್ಯಂಗ್ಯವಾಡಿದರು.

ನಮ್ಮ ನಾಯಕರಾದ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರು, ರಾಜ್ಯದ ಮುಖ್ಯಮಂತ್ರಿಯಾಗಬೇಕು ಎಂಬುದು ಮತದಾರರ ಹಂಬಲವಾಗಿದ್ದು, ಇದು ಸಮೀಕ್ಷೆಗಳ ಮೂಲಕ ತಿಳಿದುಬಂದಿದೆ. ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದು ಶಾಸಕ ಸಾ.ರಾ.ಮಹೇಶ್ ಮತ್ತೊಮ್ಮೆ ಕ್ಷೇತ್ರದಲ್ಲಿ ಆಯ್ಕೆಯಾಗಿ ಸಚಿವರಾಗಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕ್ಷೇತ್ರದಲ್ಲಿ ಸಾ.ರಾ.ಮಹೇಶ್ ಅವರು ನೀರಾವರಿ, ಶಿಕ್ಷಣ, ಆರೋಗ್ಯ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳಿಗೂ ಒತ್ತು ನೀಡಿದ್ದು, ಮಹಿಳೆಯರಿಗಾಗಿ ಗಾರ್ಮೆಂಟ್ಸ್, ಕೊರೊನಾ ವೇಳೆ ಫುಡ್ ಕಿಟ್ ವಿತರಣೆ, ವೈದ್ಯಕೀಯ ಸೇವೆ, ಬಡವರಿಗೆ ಆರ್ಥಿಕ ಸಹಾಯ, ಉಚಿತ ನೋಟ್‌ಬುಕ್, ಉಚಿತ ಆಂಬುಲೆನ್ಸ್ ಸೇರಿದಂತೆ ಸಾಕಷ್ಟು ಸಮಾಜ ಸೇವೆ ಮಾಡಿದ್ದು, ಅವರ ಅಭಿವೃದ್ಧಿ ಕಾರ್ಯಗಳನ್ನು ಮನಗಂಡಿರುವ ಕ್ಷೇತ್ರದ ಜನತೆ ಮಹೇಶ್ ಅವರನ್ನು ನಾಲ್ಕನೇ ಬಾರಿಗೆ ಶಾಸಕರನ್ನಾಗಿ ಮಾಡಲು ಉತ್ಸುಕರಾಗಿದ್ದಾರೆ ಎಂದರು.

ಶಾಸಕ ಸಾ.ರಾ.ಮಹೇಶ್ ತಮ್ಮ ಅಧಿಕಾರವಧಿಯಲ್ಲಿ ಯಾವುದೇ ಗಲಾಟೆಗಳಿಗೆ ಅವಕಾಶ ನೀಡದೇ ಎಲ್ಲಾ ಸಮಾಜದವರನ್ನು ವಿಶ್ವಾಸದಿಂದ ಕಂಡಿದ್ದಾರೆ. ಹೀಗಾಗಿ ಅವರ ಗೆಲುವು ಖಚಿತ ಎಂದು ಮಂಜೇಗೌಡ ವಿಶ್ವಾಸ ವ್ಯಕ್ತಪಡಿಸಿದರು.

> ಕ್ಷೇತ್ರದ ವಿದ್ಯಾರ್ಥಿಗಳು, ಬಡಜನತೆ, ಮಹಿಳೆಯರು ಸ್ವಯಂ ಪ್ರೇರಿತರಾಗಿ ಶಾಸಕ ಸಾ.ರಾ.ಮಹೇಶ್ ಅವರಿಗೆ ಮತ ನೀಡುತ್ತೇವೆ. ನಾವು ಯಾವುದೇ ಕಾರಣಕ್ಕೂ ಅವರ ಕೈ ಬಿಡಲ್ಲ ಎನ್ನುತ್ತಿದ್ದಾರೆ. ದಯಮಾಡಿ ಕ್ಷೇತ್ರದ ಮತದಾರರು ಅನುಕಂಪ ಬಿಟ್ಟು ದಿನದ 24 ಗಂಟೆ ನಿಮ್ಮ ಜೊತೆ ಸದಾ ಇರುವ ಸಾ.ರಾ. ಮಹೇಶ್ ಅಣ್ಣನವರಿಗೆ ಮತ ನೀಡಿ.
> –ಸಿ.ಎನ್.ಮಂಜೇಗೌಡ, ಎಂಎಲ್‌ಸಿ

ಈ ವೇಳೆ ಮಾಜಿ ಸಚಿವ ದಿ.ಎಸ್.ನಂಜಪ್ಪ ಪುತ್ರ ಕೆ.ಎನ್.ದಿನೇಶ್, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಟಿ.ಅಣ್ಣೇಗೌಡ, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಪುರಸಭಾ ಸದಸ್ಯರಾದ ಕೆ.ಎಲ್.ಜಗದೀಶ್, ಸಂತೋಷ್‌ಗೌಡ, ಮಾಜಿ ಅಧ್ಯಕ್ಷ ಡಿ.ಕಾಂತರಾಜ್, ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್, ಮುಖಂಡರಾದ ಸೈಯದ್‌ಅಸ್ಲಾಂ, ಎಂ.ಕೆ.ಮಹದೇವ್, ನುಜುಂಡೇಗೌಡ, ಹೆಚ್.ಪಿ.ಶಿವಣ್ಣ, ಹೆಚ್.ಜಿ.ಮಂಜು, ಪ್ರಶಾಂತ್‌ರೆಡ್ಡಿ, ರಂಗನಾಥ್, ಮನು, ಮಹದೇವ್, ಭಾಗ್ಯಮ್ಮ ಇನ್ನಿತರರಿದ್ದರು.

ಕಾಡಂಚಿನ ಗ್ರಾಮಗಳಲ್ಲಿ ಕೃಷ್ಣನಾಯಕ ಪ್ರಚಾರ



ಹೆಚ್.ಡಿ.ಕೋಟೆ, ಏ.30– ಕಾಡಂಚಿನ ಗ್ರಾಮಗಳಲ್ಲಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೃಷ್ಣನಾಯಕ ಹಾಗೂ ಆದಿವಾಸಿ ಮಹಿಳೆಯರು ಮತಯಾಚಿಸಿದರು.

ಕಾಡಂಚಿನ ಗ್ರಾಮಗಳಾದ ಡಿ.ಬಿ.ಕುಪ್ಪೆ, ವಡಕನಮಾಳ, ಮಚ್ಚೂರು, ಬಳ್ಳೆ, ಗುಂಡತ್ತೂರು, ಕಾರಾಪುರ, ಎನ್.ಬೆಳ್ತೂರು, ಮಳಲಿ, ಮಗ್ಗೆ, ಕೆ.ಆರ್.ಪುರ, ರಾಗಲಕುಪ್ಪೆ, ಹೊಸಹೊಳಲು, ಹೊನ್ನಮ್ಮನ ಕಟ್ಟೆ, ದಮ್ಮನಕಟ್ಟೆ, ಹುಣಸೆಕುಪ್ಪೆ, ಸೋಗಹಳ್ಳಿ, ಹೊಸಮಾಳ, ಬದನಕುಪ್ಪೆ, ಅಂತರಸಂತೆ ಸೇರಿದಂತೆ ಗಿರಿಜನರ ಹಾಡಿಗಳ ಮನೆ ಮನೆಗೆ ಭೇಟಿ ನೀಡಿ ಮತಯಾಚಿಸಿದರು. ಈ ವೇಳೆ ಮಾತನಾಡಿದ ಆದಿವಾಸಿ ಮಹಿಳೆಯರು, ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಎಂ.ಕೃಷ್ಣನಾಯಕ ತಾಲೂಕಿನಲ್ಲಿ 10 ರೂಪಾಯಿಗೆ ಊಟ, ತಿಂಡಿ ಕೊಟ್ಟು, ಕೊರೊನಾ ಸಂದರ್ಭ ಸಂಕಷ್ಟದಲ್ಲಿದ್ದ ನಮಗೆ ಆಹಾರ ಕಿಟ್‌ಗಳನ್ನು ವಿತರಿಸಿ ಸಹಾಯ ಮಾಡಿದ್ದಾರೆ. ಆದ್ದರಿಂದ ನಾವೆಲ್ಲರೂ ಒಮ್ಮತದಿಂದ ಬಿಜೆಪಿ ಅಭ್ಯರ್ಥಿ ಕೃಷ್ಣನಾಯಕ ಪರ ಮತಯಾಚಿಸುತ್ತಿದ್ದೇವೆ ಎಂದರು.

ಬಿಜೆಪಿ ಅಭ್ಯರ್ಥಿ ಕೆ.ಎಂ.ಕೃಷ್ಣನಾಯಕ ಮಾತನಾಡಿ, ಪ್ರಧಾನಿ ಮೋದಿ ಆದಿವಾಸಿಗಳ ಅನುಕೂಲಕ್ಕಾಗಿ ಸಾಕಷ್ಟು ಯೋಜನೆ ನೀಡಿದ್ದಾರೆ. ಈ ಬಾರಿಯೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದು ಖಚಿತ. ಅದೇ ರೀತಿ ತಾಲೂಕಿನ ಬಿಜೆಪಿ ಅಭ್ಯರ್ಥಿಯಾದ ನನಗೆ ಮತ ನೀಡುವ ಮೂಲಕ ಆಶೀರ್ವದಿಸಿ ಎಂದು ಮನವಿ ಮಾಡಿದರು.

ಬಿಜೆಪಿ ಮುಖಂಡ ಡಾ.ಕೃಷ್ಣಸ್ವಾಮಿ ಮಾತನಾಡಿ, ತಾಲೂಕಿನ ಜನತೆಯೊಂದಿಗೆ ಉತ್ತಮ ಒಡನಾಟ ಹೊಂದಿರುವ ಕೃಷ್ಣನಾಯಕ ಅವರು ಕ್ಷೇತ್ರದಲ್ಲಿ ಸಾಕಷ್ಟು ಸಮಾಜ ಸೇವೆ ಮಾಡಿದ್ದಾರೆ. ಅವರ ಸೇವೆ ಗುರುತಿಸಿ ಪಕ್ಷ ಅವರಿಗೆ ಟಿಕೆಟ್ ನೀಡಿದೆ. ಹೀಗಾಗಿ ಕ್ಷೇತ್ರದ ಜನತೆ ವಿರೋಧ ಪಕ್ಷಗಳ ಊಹಾಪೋಹ, ಆರೋಪಗಳಿಗೆ ಕಿವಿಗೊಡದೇ ಕೃಷ್ಣನಾಯಕ ಅವರಿಗೆ ಹೆಚ್ಚು ಮತ ನೀಡುವ ಮೂಲಕ ಶಾಸಕರನ್ನಾಗಿ ಮಾಡಬೇಕು ಎಂದು ಮನವಿ ಮಾಡಿದರು. ಇದೇ ವೇಳೆ ಕೃಷ್ಣನಾಯಕ ತಮ್ಮ ಅಪಾರ ಬೆಂಬಲಿಗರೊಂದಿಗೆ ರೋಡ್ ಶೋ ನಡೆಸಿ, ಮನೆ ಮನೆಗೆ ತೆರಳಿ ಮತಯಾಚಿಸಿದರು. ಈ ವೇಳೆ ಮುಖಂಡ ಸಿ.ವಿ.ನಾಗರಾಜು, ತಾಲೂಕು ಅಧ್ಯಕ್ಷ ಗುರುಸ್ವಾಮಿ, ಜಿಲ್ಲಾ ಯುವ ಮೋರ್ಚಾ ಮಾಜಿ ಅಧ್ಯಕ್ಷ ವಿಜಯಕುಮಾರ್, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಮಹದೇವಪ್ಪ, ಪ್ರಧಾನ ಕಾರ್ಯದರ್ಶಿಗಳಾದ ವಿವೇಕ್, ಚೆನ್ನಪ್ಪ, ಎಸ್‌ಸಿ ಮೋರ್ಚಾ ಅಧ್ಯಕ್ಷ ರಾಜು, ಮುಖಂಡರಾದ ವೆಂಕಟಸ್ವಾಮಿ, ರವಿಕುಮಾರ್, ಗೋಪಾಲಯ್ಯ ಅರಸ್, ಸತೀಶ್, ಗೋಪಾಲಯ್ಯ ಸೇರಿದಂತೆ ಇತರರಿದ್ದರು.

ಸಿದ್ದರಾಮಯ್ಯ ಸೋಲಿಸಲು ಒಳಸಂಚು, ಹಣದ ಹೊಳೆ

ಆಮಿಷಗಳಿಗೆ ಬಲಿಯಾಗಬೇಡಿ: ನಟ ಎಸ್.ನಾರಾಯಣ್ ಮನವಿ



ತಿ.ನರಸೀಪುರ, ಏ.30– ವರುಣದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸೋಲಿಸಲು ವಿರೋಧಿಗಳು ಒಳಸಂಚು ರೂಪಿಸಿ ಹಣದ ಹೊಳೆ ಹರಿಸುತ್ತಿದ್ದು, ಕ್ಷೇತ್ರದ ಜನತೆ ಯಾವುದೇ ಆಮಿಷಗಳಿಗೆ ಬಲಿಯಾಗಬಾರದು ಎಂದು ನಟ, ನಿರ್ದೇಶಕ ಎಸ್.ನಾರಾಯಣ್ ಮನವಿ ಮಾಡಿದರು.

ವರುಣ ಕ್ಷೇತ್ರ ವ್ಯಾಪ್ತಿಯ ಹಳೇ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಪರ ಮತಯಾಚಿಸಿ ಮಾತನಾಡಿದ ಅವರು, ನಾನು ಈ ಮಣ್ಣಲ್ಲಿ ಹುಟ್ಟಿದ ನಿಮ್ಮ ಮನೆ ಮಗನ ಪರ ಮತಯಾಚನೆಗೆ ಬಂದಿದ್ದೇನೆ. ನಾನಿಲ್ಲಿಗೆ ಬಂದ ಮೇಲೆ ತಿಳಿಯಿತು ಮತಯಾಚಿಸುವುದೇ ಬೇಕಿಲ್ಲ ಎಂದು. ಏಕೆಂದರೆ ಈಗಾಗಲೇ ನೀವು ಸಿದ್ದರಾಮಯ್ಯ ಅವರನ್ನು ಬೆಂಬಲಿಸುವ ನಿರ್ಧಾರ ಮಾಡಿದ್ದೀರಾ. ಹಾಗಾಗಿ ಸಿದ್ದರಾಮಯ್ಯ ಹೇಳಿಕೆ ನೀಡಿರುವಂತೆ ಇದು ಅವರ ಕೊನೆ ಚುನಾವಣೆಯಾಗಬಾರದು. ಸಿದ್ದರಾಮಯ್ಯ ಅವರ ಧ್ವನಿಗೆ ತುಂಬಾ ಜನ ಹೆದರುತ್ತಾರೆ. ಆ ರೀತಿಯ ಗಟ್ಟಿಯಾದ ಧ್ವನಿ ಕಾಂಗ್ರೆಸ್ ಪಕ್ಷಕ್ಕೆ ಅವಶ್ಯಕವಾಗಿ ಬೇಕಿದೆ. ಹಾಗಾಗಿ ನಾವೆಲ್ಲರೂ ಈ ಚುನಾವಣೆ ಅವರ ಕೊನೆ ಚುನಾವಣೆಯಾಗಲು ಬಿಡಬಾರದು. ಕ್ಷೇತ್ರದ ಜನತೆ ಅವರನ್ನು ಹೆಚ್ಚಿನ ಮತಗಳ ಅಂತರದಲ್ಲಿ ಗೆಲ್ಲಿಸಬೇಕು ಎಂದ ನಾರಾಯಣ್, ಸಿದ್ದರಾಮಯ್ಯ ಅವರನ್ನು ಸೋಲಿಸಲು ಅನೇಕ ಮಂದಿ ಒಳ ಸಂಚು ರೂಪಿಸುತ್ತಿದ್ದಾರೆ. ಇದಕ್ಕಾಗಿ ಕ್ಷೇತ್ರದಲ್ಲಿ ಹಣದ ಹೊಳೆಯನ್ನೇ ಹರಿಸಲಾಗುತ್ತಿದೆ. ಆದರೆ ಸಿದ್ದು ಮೇಲೆ ನಿಮಗಿರುವ ಪ್ರೀತಿ ಕೊಂಡುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ ಎಂದರು.

ಮೇ 10 ನಿಮ್ಮ ದಿನ. ರಾಜ್ಯದ ಜನತೆಗೆ ಸ್ವಾತಂತ್ರ್ಯ ಕೊಡಿಸುವ ದಿನ. ರಾಜ್ಯದಲ್ಲಿ 5 ವರ್ಷ ಕೆಟ್ಟ ಆಡಳಿತ ಇತ್ತು. ಅದರಿಂದ ಎಷ್ಟು ಕಷ್ಟ ಅನುಭವಿಸಿದ್ದೀರಿ ಎಂಬುದು ನಿಮಗೂ ಗೊತ್ತಿದೆ. ಕಷ್ಟದಿಂದ ಬಿಡುಗಡೆಯಾಗುವ ಕಾಲ ಸಮೀಪಿಸುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದು ಖಚಿತ. ಹೀಗಾಗಿ ಈ ಬಾರಿ ಕಾಂಗ್ರೆಸ್‌ಗೆ ಎಲ್ಲರೂ ಮತ ನೀಡಿ ಸಮಸಮಾಜ ನಿರ್ಮಾಣಕ್ಕೆ ಮುಂದಾಗುವಂತೆ ಮನವಿ ಮಾಡಿದರು.

ಇದಕ್ಕೂ ಮೊದಲು ಪಾದಯಾತ್ರೆ ಮೂಲಕ ಗ್ರಾಮದ ಮನೆ ಮನೆಗೆ ತೆರಳಿದ ನಾರಾಯಣ್, ಸಿದ್ದರಾಮಯ್ಯರಿಗೆ ಮತ ನೀಡುವಂತೆ ಮನವಿ ಮಾಡಿದರು. ಈ ವೇಳೆ ಹೊಸಕೋಟೆ ಗ್ರಾಪಂ ಅಧ್ಯಕ್ಷ ಆನಂದ್, ಉಪಾಧ್ಯಕ್ಷೆ ಚೆನ್ನಮ್ಮ, ನಟರಾಜು, ಸತೀಶ್, ರಾಜೇಂದ್ರ ಗಂಗಾಧರ್, ಕಾವ್ಯಶ್ರೀ, ನಂದಿನಿ, ಹುಣಸೂರು ಬಸವಣ್ಣ, ಮಹದೇವಸ್ವಾಮಿ, ರಾಜಪ್ಪ, ಮಲ್ಲೇಶ್, ಪುಟ್ಟಸ್ವಾಮಿ, ಗುತ್ತಿಗೆದಾರ ಮಾಧು ಮತ್ತಿತರರಿದ್ದರು.

ಹಂಪಾಪುರದಲ್ಲಿ 'ನಮ್ಮ ನಡೆ ಮತಗಟ್ಟೆಯ ಕಡೆ'

ಹಂಪಾಪುರ, ಏ.30– ವಿಧಾನಸಭಾ ಚುನಾವಣೆ ಅಂಗವಾಗಿ ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರದಲ್ಲಿ ಮತದಾರರಲ್ಲಿ ಮತಗಟ್ಟೆ ಕುರಿತು ಜಾಗೃತಿ ಮೂಡಿಸಲು 'ನಮ್ಮ ನಡೆ ಮತಗಟ್ಟೆಯ ಕಡೆ' ಕಾರ್ಯಕ್ರಮವನ್ನು ಗ್ರಾಮದ ಸರ್ಕಾರಿ ಶಾಲೆ ಆವರಣ ಮತ್ತು ಸಂತೆ ಬೀದಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಇಂದು ಬೆಳಗ್ಗೆ 8 ಗಂಟೆಗೆ ಮತಗಟ್ಟೆಯ ಮೇಲೆ ಧ್ವಜಾರೋಹಣ ನೆರವೇರಿಸಿ, ಜಾನಪದ ಕಾರ್ಯಕ್ರಮದೊಂದಿಗೆ ಕಾಲ್ನಡಿಗೆ ಮೂಲಕ ಕಾರ್ಯಕ್ರಮ ನೆರವೇರಿಸಲಾಯಿತು. ಈ ವೇಳೆ ಪಿಡಿಓ ಸೌಮ್ಯ, ಆಶಾ, ಅಂಗನವಾಡಿ ಕಾರ್ಯಕರ್ತರು, ಗ್ರಾಪಂ ಸಿಬ್ಬಂದಿ ಮತ್ತು ಗ್ರಾಮಸ್ಥರು ಹಾಜರಿದ್ದರು.

ತಂದೆ ಆಶಯದಂತೆ ಜನಸೇವೆಗೆ ಬಂದಿದ್ದೇನೆ, ಆಶೀರ್ವದಿಸಿ

- ನಂಜನಗೂಡು ವಿಧಾನಸಭಾ ಕ್ಷೇತ್ರದ ದರ್ಶನ್ ಧ್ರುವನಾರಾಯಣ್ ಮನವಿ
- ಹಲವು ಮುಖಂಡರು ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆ



ಮಲ್ಲುಪುಡಿ, ಏ.30– ನಾನು, ನನ್ನ ತಂದೆ, ತಾಯಿಯನ್ನು ಕಳೆದುಕೊಂಡು ಕ್ಷೇತ್ರದ ಜನತೆಯೇ ನನ್ನ ತಂದೆ–ತಾಯಿ ಎಂದು ಭಾವಿಸಿ ಜನಸೇವೆಗಾಗಿ ರಾಜಕೀಯಕ್ಕೆ ಬಂದಿದ್ದೇನೆ. ನನಗೆ ಆಶೀರ್ವದಿಸಿ ಎಂದು ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಮನವಿ ಮಾಡಿದರು.

ನಂಜನಗೂಡು ವಿಧಾನಸಭಾ ಕ್ಷೇತ್ರದ ಸೂರಹಳ್ಳಿ, ಹೊಸಪುರ ಗ್ರಾಮಗಳಲ್ಲಿ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನ್ನ ತಂದೆ 2 ಬಾರಿ ಸಂಸದರಾಗಿ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಿದ್ದಾರೆ. ಅವರ ಆಶಯದಂತೆ ನಾನು ಜನಸೇವೆ ಮಾಡಲು ರಾಜಕೀಯಕ್ಕೆ ಬಂದಿದ್ದೇನೆ. ನಾನು ಕೂಡ ನನ್ನ ತಂದೆ ಯಾವ ರೀತಿ ನಿಮ್ಮಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿದ್ದರೋ ಅದೇ ರೀತಿ ನಾನು ಕೂಡ ನಿಮ್ಮಗಳ ಪ್ರೀತಿ–ವಿಶ್ವಾಸ ಉಳಿಸಿಕೊಂಡು ನಿಮ್ಮ ಸೇವೆ ಮಾಡುತ್ತೇನೆ. ಈ ಬಾರಿ ನನಗೊಂದು ಅವಕಾಶ ಕಲ್ಪಿಸಿಕೊಡಿ ಎಂದು ಮನವಿ ಮಾಡಿದರು. ನನ್ನ ತಂದೆಯ ಪ್ರೀತಿ ವಿಶ್ವಾಸದಿಂದ ಹಲವು ಮುಖಂಡರು ಪಕ್ಷ ಸೇರ್ಪಡೆಯಾಗಿರುವುದರಿಂದ ಪಕ್ಷಕ್ಕೆ ಆನೆ ಬಲ ಬಂದಂತಾಗಿದೆ ಎಂದರಲ್ಲದೆ, ನನಗೆ ರಾಜಕೀಯ ಹೊಸದಾಗಿರಬಹುದು. ಅದರೆ, ಕಾಂಗ್ರೆಸ್‌ನ ಹಿರಿಯರ ಸಲಹೆಯಂತೆ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ಹೇಳಿದರು.

ಕೇರಳ ಸಂಸದ ರಾಘವನ್, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಬ್ಲಾಕ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಕೆ. ಮಾದಪ್ಪ ಯುವ ಘಟಕದ ಅಧ್ಯಕ್ಷ ಅಶೋಕ್, ವೀರದೇವನಪುರ ಶ್ರೀನಿವಾಸ್ ಮೂರ್ತಿ, ಜಿಪಂ ಮಾಜಿ ಅಧ್ಯಕ್ಷೆ ಲತಾಸಿದ್ದಶೆಟ್ಟಿ, ಎಂ. ವಿದ್ಯಾಲಂಕಾರ್, ಸಂಗರಾಜು, ಹೊಸಪುರ ಮಾದಪ್ಪ, ಶಿವಪ್ಪದೇವರು ಸೇರಿದಂತೆ ಪ್ರಮುಖರು ಹಾಜರಿದ್ದರು.



ತಿ.ನರಸೀಪುರ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಹೆಚ್.ಸಿ. ಮಹದೇವಪ್ಪ ಅವರ ಪರ ಪ್ರಚಾರ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಯುವ ಮುಖಂಡರಾದ ಸುನೀಲ್ ಬೋಸ್, ಉದ್ಯಮಿ ಹಾಗೂ ಚಿತ್ರ ನಿರ್ಮಾಪಕ ಎನ್. ಸಂದೇಶ್ ಅವರನ್ನು ಸನ್ಮಾನಿಸಿದರು.

ಶ್ರೀನಿವಾಸ್ ನಿಧನ



ಸರಗೂರು, ಏ.30– ಪಟ್ಟಣದ ಆರ್ಯ ಈಡಿಗ ಸಮಾಜದ ಮುಖಂಡ, 2ನೇ ವಾರ್ಡ್ ನಿವಾಸಿ ಶ್ರೀನಿವಾಸ್(60) ಶನಿವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಆರ್ಯ ಈಡಿಗರ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹರ್ಷವರ್ಧನ್ ಪರ ಸಂಸದ ಶ್ರೀನಿವಾಸ್ ಪ್ರಸಾದ್ ಪ್ರಚಾರ



ನಂಜನಗೂಡು, ಏ.30– ಇಲ್ಲಿನ ಶಂಕರಪುರ, ಶ್ರೀರಾಂಪುರ, ಆನಂದನಗರದಲ್ಲಿ ಶಾಸಕ, ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಹರ್ಷವರ್ಧನ್ ಪರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಪ್ರಚಾರ ನಡೆಸಿದರು.

ಸಂಸದ ವಿ.ಶ್ರೀನಿವಾಸಪ್ರಸಾದ್ ಮಾತನಾಡಿ, ಕಳೆದ 5 ವರ್ಷಗಳ ಹಿಂದೆ ಮತ ಕೇಳಲು ಬಂದಾಗ ಶಾಸಕ ಹರ್ಷವರ್ಧನ್ ನಿಮಗೆ ಕೊಟ್ಟ ಮಾತಿನಂತೆ ಕಾರ್ಯ ನಿರ್ವಹಿಸಿದ್ದಾರೆ. ಶಂಕರಪುರ, ಆನಂದಪುರ, ಶ್ರೀರಾಂಪುರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಇನ್ನೂ ಸಾಕಷ್ಟು ಕಾರ್ಯಗಳು ಬಾಕಿ ಉಳಿದಿದ್ದು, ಅವುಗಳನ್ನು ಪೂರ್ಣಗೊಳಿಸಲು ಮತ್ತೆ ಶಾಸಕರನ್ನಾಗಿ ಆಯ್ಕೆ ಮಾಡುವಂತೆ ಮನವಿ ಮಾಡಿದರು.

ಹರ್ಷವರ್ಧನ್ ಕ್ಷೇತ್ರದ ಅಭಿವೃದ್ಧಿಗೆ 800 ಕೋಟಿಗೂ ಅಧಿಕ ಅನುದಾನ ತಂದು ಸಿಸಿ ರಸ್ತೆ, ಸಮುದಾಯ ಭವನ, ಚರಂಡಿ ನಿರ್ಮಾಣ, ಶಾಲಾ ಕೊಠಡಿ, ನುಗು ಏತ ನೀರಾವರಿ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದಾರೆ. ಅಲ್ಲದೇ ಶಾಸಕರ ಅಭಿವೃದ್ಧಿ ಕಾರ್ಯವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಮೆಚ್ಚಿಕೊಂಡಿದ್ದಾರೆ. ಹೀಗಾಗಿ ಮತ್ತೊಮ್ಮೆ ಆಯ್ಕೆ ಮಾಡಿ ನಿಮ್ಮ ಸೇವೆ ಮಾಡಲು ಅನುವು ಮಾಡಿಕೊಡಿ ಎಂದರು. ಶಾಸಕ ಹರ್ಷವರ್ಧನ್ ಮಾತನಾಡಿ, ಶಂಕರಪುರದಲ್ಲಿ 50 ಲಕ್ಷ ವೆಚ್ಚದ ಅಂಬೇಡ್ಕರ್ ಸಮುದಾಯ ಭವನ, 35 ಲಕ್ಷ ವೆಚ್ಚದ ಸಿಸಿ ರಸ್ತೆ, ಗರಡಿ ಮನೆ, ಶಾಲಾ ಕೊಠಡಿ 15 ಲಕ್ಷ ವೆಚ್ಚದಲ್ಲಿ ಸ್ಮಶಾನದ ರಸ್ತೆ, ಉದ್ಯಾನವನ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯ ಮಾಡಿರುವ ನನ್ನ ಗೆಲುವಿಗೆ ಮತ ನೀಡಿ ಎಂದು ಮನವಿ ಮಾಡಿದರು.

ಈ ವೇಳೆ ಬಿಜೆಪಿ ಮುಖಂಡ ಸುಬ್ಬಣ್ಣ, ಮಹದೇವಸ್ವಾಮಿ, ಬಾಲಚಂದ್ರ, ನಗರ ಬಿಜೆಪಿ ಕಾರ್ಯದರ್ಶಿ ಧನರಾಜ್, ಬಿ.ಬಸವರಾಜು, ದೇವಪುತ್ರ, ಮಾಜಿ ನಗರಸಭಾ ಸದಸ್ಯರಾದ ವಿಜಯಾಂಬಿಕ, ಪುಟ್ಟರಾಜು, ನಿವೃತ್ತ ಶಿಕ್ಷಕರಾದ ಸರೋಜ, ಲಕ್ಷ್ಮಮ್ಮಕ್ಕ, ರಾಘವೇಂದ್ರ, ಶಂಕರಪುರ, ಆನಂದಪುರ, ಶ್ರೀರಾಂಪುರ ಗ್ರಾಮಸ್ಥರು ಇದ್ದರು.

ವರುಣ, ತಿ.ನರಸೀಪುರ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೆ

ಸಚಿವ ವಿ.ಸೋಮಣ್ಣ, ಡಾ.ಎಂ.ರೇವಣ್ಣರನ್ನು ಗೆಲ್ಲಿಸಿ

ಮತದಾರರಲ್ಲಿ ನಟ, ಪುರಸಭಾ ಸದಸ್ಯ ಅರ್ಜುನ್ ರಮೇಶ್ ಮನವಿ



ತಿ.ನರಸೀಪುರ, ಏ.30– ವರುಣ ಹಾಗೂ ತಿ.ನರಸೀಪುರ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೆ ಬಿಜೆಪಿ ಅಭ್ಯರ್ಥಿಗಳಾದ ಸಚಿವ ವಿ. ಸೋಮಣ್ಣ ಹಾಗೂ ಡಾ. ಎಂ.ರೇವಣ್ಣ ಅವರನ್ನು ಗೆಲ್ಲಿಸುವಂತೆ ಮತದಾರರಿಗೆ ನಟ ಹಾಗೂ ಪುರಸಭಾ ಸದಸ್ಯ ಅರ್ಜುನ್ ರಮೇಶ್ ಮನವಿ ಮಾಡಿದರು.

ಪುರಸಭಾ ವ್ಯಾಪ್ತಿಯ ಗೋಪಾಲಪುರದ ತಮ್ಮ ಕಚೇರಿಯಲ್ಲಿ ನಡೆದ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ವರುಣದಲ್ಲಿ ಅಭಿವೃದ್ಧಿ ಹರಿಕಾರರಾಗಿರುವ ವಿ. ಸೋಮಣ್ಣ ಹಾಗೂ ತಿ.ನರಸೀಪುರ ಕ್ಷೇತ್ರದ ಸರಳ ಸಜ್ಜನಿಕೆಯ ಡಾ.ರೇವಣ್ಣ ಅವರಿಗೆ ಮತ ನೀಡುವ ಮೂಲಕ ಎರಡೂ ಕ್ಷೇತ್ರಗಳ ಸರ್ವಾಂಗೀಣ ಅಭಿವೃದ್ಧಿಗೆ ಕಾರಣೀಭೂತರಾಗುವಂತೆ ಅವರು ಕ್ಷೇತ್ರದ ಜನತೆಯ ಸಹಕಾರ ಕೋರಿದರು.

ವರುಣ ಕ್ಷೇತ್ರದ ಅಭ್ಯರ್ಥಿ ಸೋಮಣ್ಣ ಬಗ್ಗೆ ತಿಳಿಸುವ ಅಗತ್ಯ ಇಲ್ಲ. ಬೆಂಗಳೂರಿನ ಗೋವಿಂದರಾಜನಗರ ಎಷ್ಟರ ಮಟ್ಟಿನ ಅಭಿವೃದ್ಧಿಯಾಗಿದೆ ಎಂದರೆ ಯಾವುದೋ ಹೊರ ದೇಶಕ್ಕೆ ಹೋಗಿ ಬಂದ ಅನುಭವವಾಗುತ್ತದೆ. ಅಷ್ಟರ ಮಟ್ಟಿನ ಅಭಿವೃದ್ಧಿಯಾಗಿದೆ. ಹಾಗಾಗಿ ವರುಣ ಕ್ಷೇತ್ರಕ್ಕೆ ಸೋಮಣ್ಣಗಿಂತ ಬೇರೊಬ್ಬ ಅಭ್ಯರ್ಥಿ ಸಿಗಲು ಸಾಧ್ಯವೇ ಇಲ್ಲ ಎಂದರು.

ವರುಣ ಜನತೆ ಕ್ಷೇತ್ರಕ್ಕೆ ಸೋಮಣ್ಣ ಕೊಡುಗೆ ಏನು? ಎಷ್ಟು ಮನೆ ಕೊಟ್ಟಿದ್ದಾರೆ ಎನ್ನುವುದನ್ನು ಬಿಟ್ಟು ಇಲ್ಲಿವರೆಗೆ ಕ್ಷೇತ್ರದ ಜನಪ್ರತಿನಿಧಿಗಳಾದವರು ಕ್ಷೇತ್ರಕ್ಕೆ ಏನು ಮಾಡಿದ್ದಾರೆ ಎಂದು ವಿಮರ್ಶಿಸಿಕೊಳ್ಳಿ. ವರುಣ ಕ್ಷೇತ್ರದ ಅಭಿವೃದ್ಧಿಗಾಗಿ ಸೋಮಣ್ಣ ಅವರಿಗೆ ಒಂದು ಅವಕಾಶ ಮಾಡಿಕೊಡಿ. ನಂತರ ಕ್ಷೇತ್ರಕ್ಕೆ ನೀವೇನು ಮಾಡಿದ್ದೀರಾ ಎಂದು ಪ್ರಶ್ನಿಸುವ ಸಂದರ್ಭವೇ ಬರುವುದಿಲ್ಲ ಅಷ್ಟರ ಮಟ್ಟಿಗೆ ಕ್ಷೇತ್ರದ ಅಭಿವೃದ್ಧಿಯಾಗಲಿದೆ ಎಂಬ ಭರವಸೆ ನೀಡುತ್ತೇನೆ ಎಂದರು.

ಸ್ಥಳೀಯ ಅಭ್ಯರ್ಥಿ ಗೆಲ್ಲಿಸಿ: ತಿ.ನರಸೀಪುರ ಕ್ಷೇತ್ರದಲ್ಲಿ ಈ ಬಾರಿ ಪಕ್ಷ ದಿಟ್ಟ ನಿರ್ಧಾರದೊಂದಿಗೆ ಸ್ಥಳೀಯರೇ ಆಗಿರುವ ಸರಳ ಸಜ್ಜನಿಕೆ ವ್ಯಕ್ತಿತ್ವದ ಡಾ.ರೇವಣ್ಣರಿಗೆ ಟಿಕೆಟ್ ನೀಡಿದೆ. ಖ್ಯಾತ ವೈದ್ಯ ರೇವಣ್ಣ ಅವರಿಗೆ ಸಾಮಾಜಿಕ ಕಳಕಳಿ ಇದ್ದು, ಸಮಾಜ ಸೇವೆ ತುಡಿತ ಇದೆ. ಹಾಗಾಗಿ ವರುಣ ಮತ್ತು ತಿ.ನರಸೀಪುರ ಕ್ಷೇತ್ರದ ಮತದಾರರು ಬಿಜೆಪಿ ಅಭ್ಯರ್ಥಿಗಳಾದ ಸೋಮಣ್ಣ, ಡಾ.ರೇವಣ್ಣ ಅವರಿಗೆ ಮತ ನೀಡುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸುವಂತೆ ಮನವಿ ಮಾಡಿದರು.

ಮತಯಾಚನೆ: ಸೋಮವಾರದಿಂದ ಒಂದು ವಾರ ವರುಣ ಮತ್ತು ನರಸೀಪುರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಮತಯಾಚನೆ ಮಾಡುತ್ತೇನೆ ಎಂದ ಅರ್ಜುನ್, ಪಕ್ಷದ ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಮನವಿ ಮಾಡಿದರು.

ಈ ವೇಳೆ ಬಾಬು ಜಗಜೀವನ್ ರಾಂ ಸಂಘದ ತಾಲೂಕು ಅಧ್ಯಕ್ಷ ಸಿ.ಪುಟ್ಟಯ್ಯ, ತಾಪಂ ಮಾಜಿ ಸದಸ್ಯ ಬಿ.ಎಲ್.ಮಹದೇವ, ಕಿರಗಸೂರು ಗ್ರಾಪಂ ಸದಸ್ಯ ಮಹದೇವಸ್ವಾಮಿ, ಶಿವರಾಜು, ಕುಪ್ಯಾ ಶಂಭಯ್ಯ, ರಾಜಪ್ಪ, ಪ್ರದೀಪ್, ಸಂದೀಪ್, ಮಹದೇವ, ವಿಶ್ವನಾಥ್, ಸಂತೋಷ್, ಚರಣ್, ರಾಜು, ಹರ್ಷ ಮತ್ತಿತರರಿದ್ದರು.

> **ಸೋಮಣ್ಣ ದಿಟ್ಟ, ಧೀಮಂತ ನಾಯಕ**
>
> ತಿ.ನರಸೀಪುರ ಹಾಗೂ ವರುಣ ಕ್ಷೇತ್ರಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ನಾನು ತಿಳಿದಿರುವಂತೆ ಈವರೆಗೆ ಈ ಎರಡೂ ಕ್ಷೇತ್ರಗಳಲ್ಲಿ ಅಭಿವೃದ್ಧಿಯಾಗಿಲ್ಲ. ರಾಜ್ಯದ ಅಭಿವೃದ್ಧಿ ಹಾಗೂ ನಾಯಕರ ಬಗ್ಗೆ ಮಾತನಾಡುವ ನಾಯಕರೊಬ್ಬರು ತಾವು ಯಾವ ಕ್ಷೇತ್ರದಲ್ಲಿ ನಿಲ್ಲಬೇಕೆಂಬ ಗೊಂದಲದಲ್ಲೇ ಕ್ಷೇತ್ರವನ್ನು ಅಂತಿಮಗೊಳಿಸಿದ್ದಾರೆ. ಆದರೆ ಸಚಿವ ಸೋಮಣ್ಣ ದಿಟ್ಟ, ಧೀಮಂತ ನಾಯಕರಾಗಿದ್ದು, ಬಿಜೆಪಿ ಹೈಕಮಾಂಡ್ ವರುಣ ಹಾಗೂ ಚಾಮರಾಜನಗರಗಳಲ್ಲಿ ಸ್ಪರ್ಧಿಸುವಂತೆ ಟಿಕೆಟ್ ನೀಡುತ್ತಿದ್ದಂತೆಯೇ ಮರು ಮಾತನಾಡದೇ ಮತದಾರನ ಬಳಿ ಧೈರ್ಯವಾಗಿ ಹೋದ ಸೋಮಣ್ಣ ಅವರ ದಿಟ್ಟತೆ ನಿಜಕ್ಕೂ ಮೆಚ್ಚುವಂತಹುದು ಎಂದು ಅರ್ಜುನ್ ತಿಳಿಸಿದರು.



ಪಿರಿಯಾಪಟ್ಟಣ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕೆ.ಮಹದೇವ್ ಅವರು ಬೆಟ್ಟದಪುರದ ಪ್ರಮುಖ ಬೀದಿಗಳಲ್ಲಿ ರೋಡ್ ಶೋ ನಡೆಸುವ ಮೂಲಕ ಮತಯಾಚಿಸಿದರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಜೆಡಿಎಸ್ ಮುಖಂಡ ಗಗನ್, ದೇವರಾಜು, ರಾಜಶೇಖರ್, ತಾಲೂಕು ಜೆಡಿಎಸ್ ಮಹಿಳಾ ಅಧ್ಯಕ್ಷೆ ಪ್ರೀತಿ ಅರಸ್, ಎಪಿಎಂಸಿ ಸದಸ್ಯೆ ಸುನೀತಾ, ರೈತ ಸಂಘದ ಮುಖಂಡರಾದ ಲೋಕೇಶ್ ರಾಜ ಅರಸ್, ಶಿವಣ್ಣ ಶೆಟ್ಟಿ, ಸೇರಿದಂತೆ ಇತರರಿದ್ದರು.

ಮೈಸೂರು ಜಿಲ್ಲೆಯಲ್ಲಿ ಮೊದಲ ಸಲ ಮತ ಚಲಾಯಿಸುವ ಉತ್ಸಾಹದಲ್ಲಿದ್ದಾರೆ 57,048 ಯುವ ಮತದಾರರು!

● ಎಂ.ಬಿ.ಪವನ್‌ಮೂರ್ತಿ

ಮೈಸೂರು,ಏ.30– ಚೊಚ್ಚಲ ಮತ ಚಲಾಯಿಸುವುದೇ ಒಂದು ಕೌತುಕ. ಆಡಳಿತವೆಂಬ ಅಂಗ ರಚನೆಯಲ್ಲಿ ತಮ್ಮದೂ ಪಾತ್ರವಿದೆ ಎಂಬ ಸಂಭ್ರಮಿಸುವ–ಬೀಗುವ ಭಾವ. ಹೌದು, ಇಂತಹ ಚೊಚ್ಚಲ ಮತ ಚಲಾಯಿಸಲು ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 57,048 ಯುವ ಮತದಾರರು ಅಣಿಯಾಗಿದ್ದಾರೆ. 18ರಿಂದ 19 ವರ್ಷ ವಯೋಮಾನದ ಈ ಯುವ ಮತದಾರರು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ತಮ್ಮ ಹಕ್ಕು ಚಲಾವಣೆಗೆ ಸಜ್ಜಾಗಿದ್ದಾರೆ.

ಜಿಲ್ಲೆಯಲ್ಲಿ ಒಟ್ಟು 26,38,487 ಮತದಾರರು ಇದ್ದು, ಈ ಪೈಕಿ 50 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿರುವ ಯುವ ಮತದಾರರು ಮತದಾನವೆಂಬ ಅಸ್ತ್ರ ಪ್ರಯೋಗಿಸುವ ಹೊಸ ಅನುಭವ ಪಡೆಯಲು ದಿನಗಣನೆ ಆರಂಭವಾಗಿದೆ. ಅಂತೆಯೇ ಯುವ ಮತದಾರರನ್ನು ಮತದಾನಕ್ಕೆ ಉತ್ತೇಜಿಸಲು ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ ತಲಾ ಒಂದು ಯುವ ಮತದಾರರ ಮತಗಟ್ಟೆ ಸ್ಥಾಪಿಸಲಾಗುತ್ತಿದೆ.

ಭಾರತದ ಉಜ್ವಲ ಭವಿಷ್ಯಕ್ಕೆ ಯುವ ಶಕ್ತಿಯೇ ನಿರ್ಣಾಯಕ ಎಂದೇ ಹೇಳಲಾಗಿದೆ. 'ಯುವ ವಯೋಮಾನದ ಬಗ್ಗೆ ಸಾರ್ವತ್ರಿಕವಾಗಿ ಒಪ್ಪಿತವಾದ ಅಂತಾರಾಷ್ಟ್ರೀಯ ವ್ಯಾಖ್ಯಾನವಿಲ್ಲ. ಅದಾಗ್ಯೂ ವಿಶ್ವ ಆರೋಗ್ಯ ಸಂಸ್ಥೆ 15ರಿಂದ 24 ವರ್ಷ ವಯೋಮಾನದವರನ್ನು ಯುವ ಜನರೆಂದು ವ್ಯಾಖ್ಯಾನಿಸಿದೆ. ಸದ್ಯದ ಮತದಾನದ ಪ್ರಕ್ರಿಯೆಯಲ್ಲಿ 18ರಿಂದ 19 ವರ್ಷ ವಯೋಮಾನದವರನ್ನು ಯುವ ಮತದಾರರು ಎಂದು ಪರಿಗಣಿಸಲಾಗಿದೆ.

ಜಿಲ್ಲೆ 11 ಕ್ಷೇತ್ರಗಳ ಪೈಕಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅತೀ ಹೆಚ್ಚು ಯುವ ಮತದಾರರು (7,644) ಇದ್ದಾರೆ. ಅಂತೆಯೇ ಪಿರಿಯಾಪಟ್ಟಣ ಕ್ಷೇತ್ರದಲ್ಲಿ 5,243, ಕೃಷ್ಣರಾಜನಗರ (ಕೆಆರ್ ನಗರ) ಕ್ಷೇತ್ರದಲ್ಲಿ 6,043, ಹುಣಸೂರು ಕ್ಷೇತ್ರದಲ್ಲಿ 6,473, ಹೆಚ್‌ಡಿ ಕೋಟೆ ಕ್ಷೇತ್ರದಲ್ಲಿ 4,925, ನಂಜನಗೂಡು ಕ್ಷೇತ್ರದಲ್ಲಿ 4,027, ಕೆಆರ್ ಕ್ಷೇತ್ರದಲ್ಲಿ 3,704, ಚಾಮರಾಜ ಕ್ಷೇತ್ರದಲ್ಲಿ 3,860, ಎನ್‌ಆರ್ ಕ್ಷೇತ್ರದಲ್ಲಿ 5,919, ವರುಣ ಕ್ಷೇತ್ರದಲ್ಲಿ 5,022, ಟಿ.ನರಸೀಪುರ ಕ್ಷೇತ್ರದಲ್ಲಿ 4,188 ಯುವ ಮತದಾರರು ಇದ್ದಾರೆ.

ಯುವ ಮತದಾರರನ್ನು ಮತದಾನಕ್ಕೆ ಪ್ರೇರೇಪಿಸಲು ಜಿಲ್ಲೆಯ 11 ಕ್ಷೇತ್ರಗಳಲ್ಲೂ ತಲಾ ಒಂದು ಯುವ ಮತಗಟ್ಟೆ ಸ್ಥಾಪಿಸಲು ಯೋಜನೆ ರೂಪಿಸಿದೆ. ಹಾಗೆಂದ ಮಾತ್ರಕ್ಕೆ ಈ ಮತಗಟ್ಟೆಗಳು ಕೇವಲ ಯುವ ಜನರಿಗಷ್ಟೇ ಸೀಮಿತವಲ್ಲ. ಆಯಾಯ ಮತಗಟ್ಟೆಗೆ ಹಂಚಿಕೆಯಾಗಿರುವ ಎಲ್ಲಾ ಮತದಾರರು ಇಲ್ಲೇ ಮತದಾನ ಮಾಡಬೇಕು. ಆದರೆ ಯುವ ಜನರನ್ನು ಮತದಾನಕ್ಕೆ ಉತ್ತೇಜಿಸಲು ಇದೊಂದು ಸಾಂಕೇತಿಕ ಹಾಗೂ ವಿಭಿನ್ನ ಪ್ರಯತ್ನ. ಯುವ ಅಧಿಕಾರಿಗಳನ್ನೇ ಇಲ್ಲಿಗೆ ನಿಯೋಜನೆ ಮಾಡುವುದು ವಿಶೇಷ.

ಎಲ್ಲೆಲ್ಲಿ ಯುವ ಮತಗಟ್ಟೆ: ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಕಂಪ್ಲಾಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ಮತಗಟ್ಟೆ ಸಂಖ್ಯೆ–182, ಮಾಡೆಲ್ ಗ್ರೀನ್ ಪೋಲಿಂಗ್ ಬೂತ್), ಕೆಆರ್ ನಗರ ಕ್ಷೇತ್ರದಲ್ಲಿ ಕಂಚಿನಕೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ಮತಗಟ್ಟೆ ಸಂಖ್ಯೆ 65), ಹುಣಸೂರು ಕ್ಷೇತ್ರದಲ್ಲಿ ಹುಣಸೂರು ಪಟ್ಟಣದ ಕರೀಗೌಡನ ಸ್ಟ್ರೀಟ್‌ನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (111), ಹೆಚ್‌ಡಿ ಕೋಟೆ ಕ್ಷೇತ್ರದಲ್ಲಿ ಹೆಚ್‌ಡಿ ಕೋಟೆ ಪಟ್ಟಣದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆಯ (107) ಮತಗಟ್ಟೆಗಳಿಗೆ ಯುವ ಮತಗಟ್ಟೆ ಸ್ವರೂಪ ನೀಡಲಾಗುತ್ತಿದೆ.

ಅದೇ ರೀತಿ ನಂಜನಗೂಡು ಕ್ಷೇತ್ರದಲ್ಲಿ ದೇವೀರಮ್ಮಹಳ್ಳಿ ಪಾಳ್ಯದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ (99), ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಉದ್ಬೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (286), ಕೆಆರ್ ಕ್ಷೇತ್ರದಲ್ಲಿ ಮೈಸೂರು ನಗರದ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು (237), ಚಾಮರಾಜ ಕ್ಷೇತ್ರದಲ್ಲಿ ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜು (189), ಎನ್‌ಆರ್ ಕ್ಷೇತ್ರದಲ್ಲಿ ಬನ್ನಿಮಂಟಪದ ಕೆಎಸ್‌ಆರ್‌ಟಿಸಿ ಗೆಸ್ಟ್ ಹೌಸ್ (1), ವರುಣ ಕ್ಷೇತ್ರದಲ್ಲಿ ಮೊಸಂಭಯ್ಯನಹಳ್ಳಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ (91), ಟಿ.ನರಸೀಪುರ ಕ್ಷೇತ್ರದಲ್ಲಿ ಕಳಿಯೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (213) ಮತಗಟ್ಟೆಗಳನ್ನು ಯುವ ಮತಗಟ್ಟೆಯಾಗಿ ರೂಪಿಸಲಾಗುತ್ತಿದೆ.



ಮೈಸೂರಿನ ಕಲಾಮಂದಿರದಲ್ಲಿ 2023ರ ಜ.25ರಂದು ಹಮ್ಮಿಕೊಂಡಿದ್ದ ಮತದಾರರ ದಿನಾಚರಣೆಯಲ್ಲಿ ಯುವ ಮತದಾರರಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಮತದಾರರ ಗುರುತಿನ ಚೀಟಿ ವಿತರಿಸಿದ ಸಂದರ್ಭ



ಸೂಕ್ತ ಅಭ್ಯರ್ಥಿ ಆಯ್ಕೆಗೆ ನನ್ನ ಮೊದಲ ಮತ ಚಲಾಯಿಸಲಿದ್ದೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭಾಗಿಯಾಗುತ್ತಿರುವ ಬಗ್ಗೆ ಹೆಮ್ಮೆ ಇದೆ. ಕಡ್ಡಾಯ ಮತ್ತು ನೈತಿಕ ಮತದಾನಕ್ಕೆ ನನ್ನ ಸಹಪಾಠಿಗಳು ಹಾಗೂ ನೆರೆಹೊರೆಯಲ್ಲಿಯೂ ಅರಿವು ಮೂಡಿಸಲಿದ್ದೇನೆ.
-ಎ.ಪಿ.ದರ್ಶನ್, ಅರೆ ವೈದ್ಯಕೀಯ ವಿದ್ಯಾರ್ಥಿ, ಮೈಸೂರು ವೈದ್ಯಕೀಯ ಕಾಲೇಜು.



ಮತದಾನ ಪ್ರತಿ ಪ್ರಜೆಯ ಕರ್ತವ್ಯ. ಅಂತಹ ಕರ್ತವ್ಯ ನಿಜಕ್ಕೂ ಹೆಮ್ಮೆಯೇ ಸರಿ. ಮೊದಲ ಬಾರಿಗೆ ಮತದಾನ ಮಾಡುವುದಕ್ಕೆ ಉತ್ಸುಕವಾಗಿದ್ದೇನೆ. ಮತ ಚಲಾಯಿಸಲು ಬೆಂಗಳೂರಿನಿಂದ ಮೈಸೂರಿಗೆ ಮೇ 9ರಂದು ರಾತ್ರಿಯೇ ಪ್ರಯಾಣ ಬೆಳೆಸಲಿದ್ದೇನೆ. ದೂರದ ಊರುಗಳಲ್ಲಿ ಇದ್ದೇವೆಂದು ಯಾರೂ ಮತದಾನದಿಂದ ತಪ್ಪಿಸಿಕೊಳ್ಳಬಾರದು. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನನ್ನ ಮತದಾನ ಹಕ್ಕು ಚಲಾಯಿಸಬೇಕಿದ್ದು, ಇಲ್ಲಿ ಯಾವ ಪಕ್ಷ ಎಂಬುದು ನನಗೆ ಮುಖ್ಯವಲ್ಲ. ಅಭ್ಯರ್ಥಿ ಹಿನ್ನೆಲೆ ಅವಲೋಕಿಸಿ ಮತದಾನ ಮಾಡುತ್ತೇನೆ.
-ಎ.ಪಿ.ನಯನ ಪ್ರಿಯ, ಐಟಿ ಕಂಪನಿ ಉದ್ಯೋಗಿ



ಇದೇ ಮೊಟ್ಟ ಮೊದಲಿಗೆ ಮತದಾನ ಮಾಡುತ್ತಿದ್ದೇನೆ. ನಮ್ಮ ಹಕ್ಕು ಚಲಾಯಿಸಿ ಸೂಕ್ತ ಅಭ್ಯರ್ಥಿ ಆಯ್ಕೆ ಮಾಡುವುದು ನಮ್ಮ ಜವಾಬ್ದಾರಿ. ಮೊದಲ ಮತದಾನಕ್ಕೆ ಕಾತುರ ಇದೆ. ನನ್ನಂತೆ ಮೊದಲ ಬಾರಿ ಮತ ಚಲಾಯಿಸುವ ಸಹಪಾಠಿಗಳಿಗೂ ನೈತಿಕ ಮತದಾನಕ್ಕೆ ಪ್ರೇರೇಪಿಸುತ್ತೇನೆ. ನನ್ನ ಹಕ್ಕು ನಾನು ತಪ್ಪದೇ ಚಲಾಯಿಸುತ್ತೇನೆ.
-ಕಾವ್ಯ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿನಿ.



ಭಾರತ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 18 ವರ್ಷ ಪೂರೈಸುತ್ತಿದ್ದಂತೆ ಮತದಾನದ ಹಕ್ಕು ಕಲ್ಪಿಸಲಾಗಿದೆ. ಅಂತೆಯೇ ನಾನು ಮೊದಲ ಬಾರಿಗೆ ಹಕ್ಕು ಚಲಾಯಿಸುತ್ತಿದ್ದು, ಇದಕ್ಕಾಗಿ ಉತ್ಸುಕತೆ ಇದೆ. ಮತದಾನದ ಹಕ್ಕನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸಬೇಕು. ನಮ್ಮ ಸಮಾಜವನ್ನು ನ್ಯಾಯಸಮ್ಮತವಾಗಿ ಆಳ್ವಿಕೆ ಮಾಡುವ ಸೂಕ್ತ ವ್ಯಕ್ತಿಗೆ ಮತದಾನ ಮಾಡಲು ಇಚ್ಛಿಸಿದ್ದೇನೆ.
-ಚಂದನಾ, ಎಸ್‌ಜೆಸಿಇ ಕಾಲೇಜಿನ ಇಂಜಿನಿಯರಿಂಗ್ ವಿದ್ಯಾರ್ಥಿನಿ.



ಮೈಸೂರಿನ ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಪರವಾಗಿ ಗೋಕುಲಂ ಪಿ.ಕೆ.ಕಾಲೋನಿ, ಹೊಸೂರು ಕಾಲೋನಿಯಲ್ಲಿ ಮಾಜಿ ಮೇಯರ್ ಎಂ.ಜೆ. ರವಿಕುಮಾರ್, ಕಾರ್ಪೊರೇಟರ್ ಭಾಗ್ಯ ಮಹದೇಶ್, ಮಾಜಿ ಕಾರ್ಪೊರೇಟರ್ ಸಿ.ಮಹದೇಶ್, ಶ್ರೀನಿವಾಸ್ (ಪುಟ್ಟು), ಭೋಜ, ಶಂಕರ್, ಮದನ್ ಮಹದೇಶ್ ಪ್ರಚಾರ ಮಾಡಿದರು.

ಇಂದಿನಿಂದ ಸೋಮಣ್ಣ ಪರ ನಟ ಶಶಿಕುಮಾರ್ ಪ್ರಚಾರ



ಮೈಸೂರು: ತೀವ್ರ ಕುತೂಹಲ ಕೆರಳಿಸಿರುವ ವರುಣ ವಿಧಾನಸಭಾ ಕ್ಷೇತ್ರದ ಚುನಾವಣಾ ಅಖಾಡಕ್ಕೆ ತಾರಾ ಬಳಗ ಧುಮುಕಿದೆ. ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಪರವಾಗಿ ನಟ ಹಾಗೂ ಲೋಕಸಭಾ ಮಾಜಿ ಸದಸ್ಯ ಶಶಿಕುಮಾರ್ ಅವರು ಮೇ 1ರ ಸೋಮವಾರ ಪ್ರಚಾರ ಕೈಗೊಳ್ಳಲಿದ್ದು, ಮೇ 3ರವರೆಗೆ ಕ್ಷೇತ್ರದಾದ್ಯಂತ ಸಂಚರಿಸಲಿದ್ದಾರೆ. ಕ್ಷೇತ್ರ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ತೆರೆದ ವಾಹನದಲ್ಲಿ ಸಂಚರಿಸುವರು. ಅವರೊಂದಿಗೆ ಮೇಯರ್ ಶಿವಕುಮಾರ್, ಮುಖಂಡರಾದ ಅಪ್ಪಣ್ಣ, ಕುಂಬ್ರಹಳ್ಳಿ ಸುಬ್ಬಣ್ಣ ಮತ್ತಿತರರು ಉಪಸ್ಥಿತರಿರುವರು.

ನಿಗದಿತ ಸ್ಥಳಕ್ಕೆ ತಲುಪುವ ಮುನ್ನವೇ ಮೋದಿ ರೋಡ್ ಶೋ ಅಂತ್ಯ

ಡಿಪೋ ಬಳಿಯೇ ಕಾರಲ್ಲಿ ನಿರ್ಗಮಿಸಿದ ಪ್ರಧಾನಿ

ಮೈಸೂರು, ಏ.30(ಆರ್‌ಕೆ)– ಗನ್ ಹೌಸ್ ಸರ್ಕಲ್‌ನಿಂದ ಬನ್ನಿಮಂಟಪದ ಎಲ್‌ಐಸಿ ಸರ್ಕಲ್ ವರೆಗೂ ನಿಗದಿಯಾಗಿದ್ದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ರೋಡ್ ಶೋ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಬಳಿಯೇ ಅಂತ್ಯವಾಯಿತು.

ಸಂಜೆ 5.35 ಗಂಟೆಗೆ ಬರಬೇಕಾಗಿದ್ದ ಪ್ರಧಾನಿಯವರು 15 ನಿಮಿಷ ತಡವಾಗಿ ಮೈಸೂರಿಗೆ ಆಗಮಿಸಿದ್ದರಿಂದ, ಗನ್‌ಹೌಸ್ ಬಳಿಯಿಂದ ರೋಡ್ ಶೋ ಆರಂಭವಾಗುವುದು ತಡವಾಯಿತು.

ಅದೇ ರೀತಿ ರಾಜಮಾರ್ಗದಲ್ಲಿ ರೋಡ್ ಶೋ ಸಾಗುತ್ತಿದ್ದಂತೆಯೇ ಕತ್ತಲು ಆವರಿಸಿದ್ದು, ಜೊತೆಗೆ ಮೋಡ ಕವಿದ ವಾತಾವರಣವಿದ್ದ ಕಾರಣ ಎಸ್‌ಪಿಜಿ ಅಧಿಕಾರಿಗಳು ಪೂರ್ವ ನಿಗದಿಯಂತೆ ಮಿಲೇನಿಯಂ ಸರ್ಕಲ್‌ವರೆಗೆ ಕರೆದೊಯ್ಯುವುದು ಬೇಡ, ಮೊಟಕುಗೊಳಿಸುವಂತೆ ಸಲಹೆ ನೀಡಿದ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಎದುರು ನೆಲ್ಸನ್ ಮಂಡೇಲಾ ರಸ್ತೆಯಲ್ಲೇ ಮೋದಿ ರೋಡ್ ಶೋ ಅಂತ್ಯಗೊಳಿಸಿದರು.

ಅಲ್ಲಿಂದ ಕಾರಿನಲ್ಲಿ ಹೊರಟ ಪ್ರಧಾನಿ, ಎಲ್‌ಐಸಿ ಸರ್ಕಲ್, ಮಣಿಪಾಲ್ ಆಸ್ಪತ್ರೆ ಜಂಕ್ಷನ್, ರಿಂಗ್ ರಸ್ತೆನುಜನಾಡು ರಸ್ತೆ ಮಾರ್ಗವಾಗಿ ಸಾಗಿ, ರಾತ್ರಿ 8:15 ಗಂಟೆಗೆ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ನರೇಂದ್ರ ಮೋದಿ ದೆಹಲಿಗೆ ಪ್ರಯಾಣ ಬೆಳೆಸಿದರು.

ಬಿಜೆಪಿ ಕಾರ್ಯಕರ್ತರ ಸಂಭ್ರಮ: ಪ್ರಧಾನಿ ನರೇಂದ್ರ ಮೋದಿ ಅವರು ಹೈವೇ ಸರ್ಕಲ್ ಬಳಿ ಆಗಮಿಸುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತು. ತಮಟೆ, ನಗಾರಿ, ಪೂಜಾ ಕುಣಿತ, ನಂದಿ ಕಂಬ ಕುಣಿತದ ಕಲಾ ತಂಡದ ಕಲಾವಿದರೊಂದಿಗೆ ಭರ್ಜರಿ ಸ್ವಾಗತ ಹಾಕುವ ಮೂಲಕ ಬಿಜೆಪಿ ಕಾರ್ಯಕರ್ತರು ಹಾಗೂ ಮೋದಿಯವರ ಅಭಿಮಾನಿಗಳು ಸಂಭ್ರಮಿಸಿದರು.



80 ವರ್ಷ ಮೇಲ್ಪಟ್ಟ 900 ಮಂದಿ ಮತದಾನ

ಮೈಸೂರು, ಏ.30(ಎಸ್‌ಪಿಎನ್)– 2023ರ ವಿಧಾನಸಭಾ ಚುನಾವಣೆಯಲ್ಲಿ 80 ವರ್ಷ ಮೇಲ್ಪಟ್ಟ ಹಾಗೂ ವಿಕಲಚೇತನರ ಮತದಾನಕ್ಕೆ ಸಂಬಂಧಿಸಿದಂತೆ 12ಡಿ ಅಡಿ ಅರ್ಜಿ ಪಡೆದ ಒಟ್ಟು 900 ಮಂದಿ ಭಾನುವಾರ ಮತದಾನ ಮಾಡಿದ್ದು, ಮತದಾನ ಕಾರ್ಯ ಜಿಲ್ಲೆಯಾದ್ಯಂತ ಎರಡನೇ ದಿನಕ್ಕೆ ಕಾಲಿಟ್ಟಿದೆ.

ಇದರಲ್ಲಿ 80 ವರ್ಷ ಮೇಲ್ಪಟ್ಟವರು 773 ಮಂದಿ ಹಾಗೂ ವಿಶೇಷ ಚೇತನ ಮತದಾರರು 127 ಮಂದಿ ಸೇರಿದಂತೆ ಒಟ್ಟು 900 ಮಂದಿ ಮತದಾನ ಮಾಡಿದ್ದಾರೆ. ನಂಜನಗೂಡಿನಲ್ಲಿ 80 ವರ್ಷ ಮೇಲ್ಪಟ್ಟವರು 13, ವಿಶೇಷ ಚೇತನರು 4 ಒಟ್ಟು 17 ಮಂದಿ, ಚಾಮುಂಡೇಶ್ವರಿಯಲ್ಲಿ 80 ವರ್ಷ ಮೇಲ್ಪಟ್ಟವರು 76 ಮಂದಿ, ವಿಶೇಷ ಚೇತನರು 15 ಒಟ್ಟು 91 ಮಂದಿ, ಪಿರಿಯಾಪಟ್ಟಣದಲ್ಲಿ 80 ವರ್ಷ ಮೇಲ್ಪಟ್ಟವರು 92 ಮಂದಿ, ವಿಶೇಷ ಚೇತನರು 25 ಮಂದಿ ಸೇರಿದಂತೆ ಒಟ್ಟು 117 ಮಂದಿ ಮತದಾನ ಮಾಡಿದ್ದಾರೆ.

ವರುಣಾದಲ್ಲಿ 80 ವರ್ಷ ಮೇಲ್ಪಟ್ಟವರು 86 ಮಂದಿ, 21 ಮಂದಿ ವಿಶೇಷ ಚೇತನರು ಸೇರಿದಂತೆ ಒಟ್ಟು 107 ಮಂದಿ, ತಿ.ನರಸೀಪುರದಲ್ಲಿ 80 ವರ್ಷ ಮೇಲ್ಪಟ್ಟವರು 31 ಮಂದಿ, ವಿಶೇಷ ಚೇತನರು 8 ಮಂದಿ ಸೇರಿದಂತೆ ಒಟ್ಟು 39 ಮಂದಿ. ಚಾಮರಾಜದಲ್ಲಿ 80 ವರ್ಷ ಮೇಲ್ಪಟ್ಟವರು 101, ವಿಶೇಷ ಚೇತನರು 1 ಸೇರಿದಂತೆ ಒಟ್ಟು 102 ಮಂದಿ, ಕೆ.ಆರ್.ಕ್ಷೇತ್ರದಲ್ಲಿ 80 ವರ್ಷ ಮೇಲ್ಪಟ್ಟವರು 133 ಮಂದಿ, ವಿಶೇಷ ಚೇತನರು 2 ಮಂದಿ ಸೇರಿದಂತೆ ಒಟ್ಟು 135 ಮಂದಿ, ಎನ್.ಆರ್. ಕ್ಷೇತ್ರದಲ್ಲಿ 80 ವರ್ಷ ಮೇಲ್ಪಟ್ಟವರು 111 ಮಂದಿ, ವಿಶೇಷ ಚೇತನರು7 ಮಂದಿ ಸೇರಿದಂತೆ ಒಟ್ಟು 118 ಮಂದಿ, ಹೆಚ್.ಡಿ.ಕೋಟೆಯಲ್ಲಿ 80 ವರ್ಷ ಮೇಲ್ಪಟ್ಟವರು 24 ಮಂದಿ, ವಿಶೇಷ ಚೇತನರು 14 ಮಂದಿ ಸೇರಿದಂತೆ ಒಟ್ಟು 35 ಮಂದಿ, ಹುಣಸೂರಿನಲ್ಲಿ 80 ವರ್ಷ ಮೇಲ್ಪಟ್ಟವರು 109 ಮಂದಿ, ವಿಶೇಷಚೇತನರು 30 ಮಂದಿ ಸೇರಿದಂತೆ ಒಟ್ಟು 139, 12 ಡಿ ಅರ್ಜಿಯಲ್ಲಿ ಮತದಾನ ಮಾಡಿದ್ದಾರೆ ರಂದು ಜಿಲ್ಲಾ ಚುನಾವಣಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಗದಗ ಕೂಲ್ ಡ್ರಿಂಕ್ಸ್ ವ್ಯಾಪಾರಿಗೆ ನಷ್ಟ: ಹಣ ನೀಡಿ ಮಾನವೀಯತೆ ಮೆರೆದ ಸಂಸದ ಪ್ರತಾಪ್ ಸಿಂಹ

ಮೈಸೂರು, ಏ.30– ಗದಗ ಜಿಲ್ಲೆ ಲಕ್ಷ್ಮೇಶ್ವರದಲ್ಲಿ ಕೇಂದ್ರ ಸಚಿವ ಅಮಿತ್ ಶಾ ಅವರ ಸಮಾವೇಶದ ವೇಳೆ ತಂಪು ಪಾನೀಯದ ವಾಹನದ ಮೇಲೆ ಜನರು ಮುಗಿಬಿದ್ದು, ತಂಪು ಪಾನೀಯವನ್ನು ಕುಡಿದು ಭಾರೀ ನಷ್ಟ ಅನುಭವಿಸಿದ್ದ ಸಮೀರ್ ಹಸನ್ ಸಾಬ್ ಗೆ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ನೆರವು ನೀಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ.





ಲಕ್ಷ್ಮೇಶ್ವರದಲ್ಲಿ ಕೇಂದ್ರ ಸಚಿವ ಅಮಿತ್ ಶಾ ಸಮಾವೇಶದ ವೇಳೆ ಜನರು ಉಚಿತವಾಗಿ ನೀಡುತ್ತಿದ್ದಾರೆ ಎಂದು ತಿಳಿದು ಸಮೀರ್ ಹಸನ್ ಸಾಬ್ ವಾಹನದಲ್ಲಿದ್ದ ತಂಪು ಪಾನೀಯವನ್ನು ಕುಡಿದು ಖಾಲಿ ಮಾಡಿದ್ದರು. ಇದರಿಂದ 35 ಸಾವಿರ ರೂಪಾಯಿ ನಷ್ಟವಾಗಿತ್ತು. ಸಮೀರ್ ಹಸನ್ ಸಾಬ್ ಅಳುತ್ತಾ ಹೋಗಿದ್ದ ದೃಶ್ಯದ ವೀಡಿಯೋ ಭಾರಿ ವೈರಲ್ ಆಗಿತ್ತು. ಬಿಜೆಪಿ ವಿರುದ್ಧ ತೀವ್ರ ಆಕ್ರೋಶವೂ ವ್ಯಕ್ತವಾಗಿತ್ತು. ಇದನ್ನು ನೋಡಿದ ಸಂಸದ ಪ್ರತಾಪ್ ಸಿಂಹ ಆನ್ ಲೈನ್ ಮೂಲಕ 35,000 ರೂಪಾಯಿ ಹಣ ವರ್ಗಾಯಿಸಿ ಮಾನವೀಯತೆ ಮೆರೆದಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಪ್ರತಾಪ್ ಸಿಂಹ, ಸಮೀರ್ ಹಸನ್ ಸಾಬ್ ಗೆ ಹಣ ಕಳುಹಿಸಿದ್ದೇನೆ. ಸಾರಿ ಬ್ರದರ್ ಧನ್ಯವಾದಗಳು ಎಂದು ವಿವರಿಸಿದ್ದಾರೆ. ಆನ್ ಲೈನ್ ಮೂಲಕ ಪಾವತಿಸಲಾದ ಮೊತ್ತದ ವಿವರದ ಜತೆಗೆ ಟ್ವೀಟ್ ಮಾಡಿದ್ದಾರೆ. ಇವರ ಈ ಕಾರ್ಯಕ್ಕೆ ಸಾರ್ವಜನಿಕರು, ನೆಟ್ಟಿಗರು ಅತೀವ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

Format C-1 (For candidate to publish in Newspapers, TV)

Declaration about criminal cases

(As per the Judgement dated 25th, September - 2018, of Hon'ble Supreme Court in WP (Civil) No. 536 of 2011 (Public Interest Foundation & Ors. Vs Union of India & Anr)

Name and address of candidate: Tanveer Sait, S/o. Azeez Sait (Late), # 532, 9th Main KHB Colony, Udayagiri, Mysore -570 019

Name of political party : Indian National Congress (Independent candidates should write "Independent" here)

Name of Election : Karnataka State Legislative Assembly General Elections May-2023

***Name of Constituency:** 218- Narasimharaja

I, **Tanveer Sait** (name of candidate), a candidate for the above mentioned election, declare for public information the following details about my criminal antecedents:

Pending criminal cases

		CASE NO.1	CASE NO.2	CASE NO.3	CASE NO.4
(a)	FIR No. with name and address of Police Station concerned	Crime No. 0001/2022 Kanakapura Town Police Station, Kanakapura Dated – 11.01.2022	-NOT APPLICABLE-	-NOT APPLICABLE-	-NOT APPLICABLE-
(b)	Case No. with Name of the court	C.C. NO. 194/2022 PRL Civil Judge (Jn. Dn) & JMFC Court, Kanakapura Dated – 11.01.2022	-NOT APPLICABLE-	-NOT APPLICABLE-	-NOT APPLICABLE-
(c)	Section(s) of concerned Acts/ Codes involved (give no. of the Section, e.g. Section ...... of IPC, etc.,)	IPC1860 Under Section 141, 143, 290, 336 read with Section 149 of Indian Penal Code & Section 5(3A) of The Karnataka Epidemic Diseases Act, 2020.	-NOT APPLICABLE-	-NOT APPLICABLE-	-NOT APPLICABLE-
(d)	Brief description of offence	For participating in Mekedatu Padayatre pressing for Drinking Water for Bangalore Rural, Tumkur & Kolar.	-NOT APPLICABLE-	-NOT APPLICABLE-	-NOT APPLICABLE-

*In the case of election to Council of States or election to Legislative Council by MLAs, mention the election concerned in place of name of constituency.